# ಅಧ್ಯಾಯ-೧೬

# ಇತರ ಸಮಾಜ ಸೇವಾ ಸೌಲಭ್ಯಗಳು

ಭಾರತವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಿರುವ ಸಮಾಜ ಕಲ್ಯಾಣ ರಾಷ್ಟ್ರವಾಗಿದೆ. ಆದ್ದರಿಂದ ಸಮಾಜ ಕಲ್ಯಾಣಕ್ಕಾಗಿ ಜನಸಾಮಾನ್ಯರಿಗೆ ಅಗತ್ಯವಾದ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜವಾಬ್ದಾರಿ ಹೊತ್ತಿವೆ. ಅದಕ್ಕನುಗುಣವಾಗಿ ರಾಷ್ಟ್ರವು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳೂ ಈ ನಿಟ್ಟಿನಲ್ಲಿ ತಮ್ಮ ಕಾರ್ಯಯೋಜನೆಯನ್ನು ರಚಿಸಿಕೊಂಡಾಗ ಸುಖೀ ರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಅನುಕೂಲವಾಗುತ್ತದೆ. ಸರ್ಕಾರದ ಧೋರಣೆಯೂ ಇದೇ ಆಗಿದೆ. ಈ ಅಧ್ಯಾಯವು ಕೋಲಾರ ಜಿಲ್ಲೆಗೆ ಒದಗಿಸಿಕೊಟ್ಟಿರುವ ಸಾಮಾಜಿಕ ಮೂಲಭೂತ ಸೌಕರ್ಯಗಳನ್ನು ಅಂಕಿ ಅಂಶಗಳೊಂದಿಗೆ ವಿವರಿಸುತ್ತದೆ. ಜಿಲ್ಲೆಯ ವಿವಿಧೆಡೆ ಸರ್ಕಾರವು ನೇರವಾಗಿ ಹಾಗೂ ಖಾಸಗಿ ಸಂಸ್ಥೆಗಳ ಮೂಲಕ ಒದಗಿಸುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳ ಪ್ರಗತಿಯ ಸಂಕ್ಷಿಪ್ತ ವಿವರಣೆಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

### ಕಾರ್ಮಿಕ ಕಲ್ಯಾಣ

ಭಾರತದಲ್ಲಿ ಆಧುನಿಕ ಉದ್ದಿಮೆಯು ವಿದೇಶೀ ಆಡಳಿತ ಆಶ್ರಯದಲ್ಲಿ ಆರಂಭವಾಯಿತು. ಹಿಂದೆ ಇದ್ದ ಕರಕುಶಲ ಮತ್ತು ಗೃಹ ಕೈಗಾರಿಕೆ ಮುಂತಾದವುಗಳನ್ನು ಮೆಟ್ಟಿ ನೂತನ ಉತ್ಪಾದನಾ ಕ್ರಮಗಳು ಉದಯವಾದವು. ಈ ಕೈಗಾರೀಕರಣ ಸಹಸ್ರಾರು ಸಂಖ್ಯೆಯಲ್ಲಿದ್ದ ಬಡ ಶ್ರಮಿಕರನ್ನು ಕಾರ್ಖಾನೆಗಳಿಗೆ ಕೈ ಬೀಸಿ ಕರೆಯಿತು. ಅಲ್ಪ ಹಣಕ್ಕಾಗಿ ದಿನವಿಡೀ ಕಲುಷಿತ ಪರಿಸರದಲ್ಲಿ ಕೆಲಸ ಮಾಡಲು ಅವರು ಬರುವಂತಾಯಿತು. ಈ ಸಮಯದಲ್ಲಿ ಔದ್ಯೋಗಿಕ ಕ್ರಾಂತಿಗೆ ಮುಂಚಿನ ಇಂಗ್ಲೆಂಡ್ ದೇಶದ ಕಾರ್ಮಿಕನ ಪರಿಸ್ಥಿತಿಗಿಂತ ಭಾರತದಲ್ಲಿನ ಕಾರ್ಮಿಕನ ಸ್ಥಿತಿ ಉತ್ತಮವೇನೂ ಆಗಿರಲಿಲ್ಲ. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ೧೯೩೧ರ ಕೊನೆಯ ದಶಕದಲ್ಲಿ ಕಾರ್ಮಿಕ ನಿಯೋಜನೆ ಸಮಿತಿಯೊಂದನ್ನು ರಚಿಸಿ ಅನಿಯಂತ್ರಿತ ಕೈಗಾರಿಕಾ ವ್ಯವಹಾರಗಳನ್ನು ಮತ್ತು ಕೂಲಿಕಾರರ ಪರಿಸ್ಥಿತಿಗಳನ್ನು ವರದಿ ಮಾಡುವಂತೆ ಆದೇಶಿಸಿತು. ಎರಡನೇ ಮಹಾಯುದ್ಧಕ್ಕೆ ಮೊದಲೇ ಕರ್ನಾಟಕದಲ್ಲಿ ಕೆಲವು ಉದ್ದಿಮೆದಾರರು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಹೆಚ್ಚು ಪರಿಣಾಮಕಾರಿಯಾಗಿಲ್ಲದಿದ್ದುದರಿಂದ ಮತ್ತು ಕಾರ್ಮಿಕ ಸಂಘಗಳು ಇವುಗಳನ್ನು ಹೇಗೆ ಜಾರಿಗೊಳಿಸಬೇಕೆಂಬ ತಿಳುವಳಿಕೆಯಿಲ್ಲದ್ದರಿಂದ ಸರ್ಕಾರದ ಮಧ್ಯ ಪ್ರವೇಶ ಅವಶ್ಯಕವಾಯಿತು. ಅದರಂತೆ ಕೇಂದ್ರ ಸರ್ಕಾರದ, ೧೯೪೮ರ ಕಾರ್ಖಾನೆಯ ಕಾನೂನಿನನ್ವಯದಿಂದಾಗಿ ರಾಜ್ಯದಲ್ಲಿ ೧೯೫೦ ರಿಂದ ಪ್ರತಿಯೊಬ್ಬ ಉದ್ಯಮಿಯೂ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಯೋಜನೆಯಡಿ ಕುಡಿಯಲು ತಂಪಾದ

ಮತ್ತು ಶುದ್ಧವಾದ ನೀರು, ಶೌಚ ಗೃಹ, ೨೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಉಪಹಾರ ಮಂದಿರ, ೧೫೦ ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ಉಪಹಾರ ಕೋಣೆಯನ್ನು ೫೦ ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲೂ ವಿಶ್ರಾಂತಿ ಗೃಹ, ನೌಕರರ ಮಕ್ಕಳಿಗೆ ಶಿಶುವಿಹಾರ, ಒದಗಿಸಬೇಕೆಂದು ನಿರ್ಬಂಧವನ್ನು ತರಲಾಯಿತು. ಕಾರ್ಯಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಕಾರ್ಖಾನೆಯಲ್ಲೂ ಆವಿ, ಹೊಗೆ ಮತ್ತು ಧೂಳು ಹೊರಗೆ ಹೋಗುವಂತೆ ಸೂಕ್ತ ವ್ಯವಸ್ಥೆ, ಆಕಸ್ಮಿಕಗಳನ್ನು ತಡೆಗಟ್ಟಲು ಯಂತ್ರಗಳಿಗೆ ಬೇಲಿ ಕಟ್ಟಿಸುವುದು, ಕಾರ್ಮಿಕರಿಗೆ ಸುರಕ್ಷತೆಯ ವಸ್ತ್ರಗಳು, ಪಾದರಕ್ಷೆಗಳು ಹಾಗೂ ಕನ್ನಡಕಗಳನ್ನು ಒದಗಿಸುವುದು ಮುಂತಾದ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲೇಬೇಕೆಂಬ ಕಡ್ಡಾಯ ನೀತಿ ಜಾರಿಗೆ ಬಂದಿತು.

ವಿವಿಧ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರುವುದರ ಮೂಲಕ ಕಾರ್ಮಿಕರಿಗೆ ದೊರೆಯಬಹುದಾದ ವೇತನ ಪಾವತಿ, ನಿಯಮಿತ ಕೆಲಸದ ವೇಳೆ, ಸೇವಾ ನಿಯಮಗಳು, ಹೆರಿಗೆ ಭತ್ಯ ಮುಂತಾದ ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಯಿತು. ವೃತ್ತಿ ಸಂಘಗಳಿಗೆ ನೋಂದಣಿ ಮಾಡಿಸುವ ಅವುಗಳಿಗೆ ವ್ಯಾಖ್ಯೆ ಕೊಡುವ ಉದ್ದೇಶದಿಂದ ಸರ್ಕಾರ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿಗೆ ತಂದಿತು. ಇದರೊಂದಿಗೆ ಭಾರತ ಸರ್ಕಾರದ ೧೯೪೭ ರ ಔದ್ಯೋಗಿಕ ವ್ಯಾಜ್ಯ ಕಾಯ್ದೆಯನ್ನೂ ಜಾರಿಗೆ ತಂದಿತು. ಸಂಧಾನದ ಮತ್ತು ಕಡ್ಡಾಯ ಮಧ್ಯಸ್ಥಿಕೆ ಮುಖಾಂತರ ಔದ್ಯೋಗಿಕ ಶಾಂತಿಯನ್ನು ದೊರಕಿಸಿಕೊಡುವುದು, ಸಂಘಟಿತ ಕಾರ್ಮಿಕರು ವ್ಯಾಜ್ಯಗಳಿಗೆ ಪರಿಹಾರವನ್ನು ನೀಡುವುದು, ಈ ಕಾಯ್ದೆಯ ಮುಖ್ಯ ಉದ್ದೇಶಗಳಾಗಿದ್ದವು.

**ಕಾರ್ಮಿಕ ಇಲಾಖೆಯ ವ್ಯವಸ್ಥೆ**

ಕಾರ್ಮಿಕ ಇಲಾಖೆಯ ೨೦೦೨–೦೩ ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಪ್ರಕಾರ, ಈ ಇಲಾಖೆ ೧೫ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರುವ ವ್ಯವಸ್ಥೆ ಮಾಡಿದೆ. ಸಂಘಟಿತ ಉದ್ದಿಮೆಗಳ ಮತ್ತು ಗ್ರಾಮಾಂತರ ಕೆಲಸಗಾರರ ಕಲ್ಯಾಣಕ್ಕಾಗಿ ಕೆಲವು ವಿಧಿ ನಿಯಮಗಳನ್ನು ರಚಿಸಿದೆ. ಈ ಎಲ್ಲಾ ನಿಯಮಗಳಂತೆ ಕಾರ್ಮಿಕ ಕಾಯ್ದೆಯಲ್ಲಿನ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಕಾರ್ಮಿಕರು ಪಡೆಯಬಹುದಾಗಿದೆ. ಇವರು ಕೆಲಸ ಮಾಡುತ್ತಿರುವ ಸ್ಥಳಗಳನ್ನು ಗುರ್ತಿಸಿ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ನಿಗಮಗಳ ಮುಖಾಂತರ ಆಡಳಿತ ಯೋಜನೆಗಳನ್ನು ಪ್ರಚಾರ ಮಾಡಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಕಾರ್ಮಿಕ ಇಲಾಖೆಯು ಕಾರ್ಮಿಕ ಮತ್ತು ಮಾಲೀಕರ ನಡುವೆ ವ್ಯಾಜ್ಯ–ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸಿ ಉತ್ತಮವಾದ ಕೈಗಾರಿಕಾ ಶಾಂತಿಯನ್ನು ಉಂಟು ಮಾಡುತ್ತದೆ. ಹಾಗೂ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸುವ ಅಥವಾ ಪರಿಷ್ಕರಿಸುವುದರ ಮೂಲಕ ಅಸಂಘಟಿತ ವಲಯದ ಕಾರ್ಮಿಕ ವರ್ಗಗಳಿಗೆ ಕನಿಷ್ಠ ವೇತನ ಸೌಲಭ್ಯವನ್ನು ತಲುಪಿಸುವ ಜವಾಬ್ದಾರಿ ಹೊಂದಿದೆ.

**ಕೋಷ್ಟಕ ೧೬.೧: ಕಾರ್ಮಿಕ ಇಲಾಖೆಯಲ್ಲಿ ಜಾರಿಗೊಳಿಸಿದ ವಿವಿಧ ಕಾಯ್ದೆಗಳ ಅಂಕಿಅಂಶಗಳ ವಿವರ**

| ಕ್ರ ಸಂ | ಕಾಯ್ದೆಗಳ ಹೆಸರು | ತನಿಖೆ ಮಾಡಿದ ಸಂಖ್ಯೆ | ಮೊಕದ್ದಮೆ ಹೂಡಿರುವ ಸಂಖ್ಯೆ | ಆಪಾದನೆಗಳು ರುಜುವಾತಾದ ಸಂಖ್ಯೆ | ದಂಡದಿಂದ ಬಂದ ಹಣದ ಮೊತ್ತ ರೂ. ಗಳಲ್ಲಿ |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧. | ೧೯೩೬ ವೇತನ ಪಾವತಿ ಕಾಯ್ದೆ | ೪೭೯೫ | ೧ | – | – |
| ೨. | ೧೯೪೮ ಕನಿಷ್ಠ ವೇತನ ಕಾಯ್ದೆ | ೪೭೩೧೪ | ೩೬೬ | ೨೫೪ | ೮೫೧೫೦.೦೦ |
| ೩. | ೧೯೫೧ ತೋಟ ಕಾರ್ಮಿಕ ಕಾಯ್ದೆ | ೫೮೯ | – | – | – |
| ೪. | ೧೯೬೧ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ | ೧೯೭೧೫ | ೫೫೩ | ೩೨೦ | ೨೯೨೫೯೫.೦೦ |
| ೫ | ೧೯೬೧ ಹೆರಿಗೆ ಸೌಲಭ್ಯ ಕಾಯಿದೆ | ೧೩೦ | – | – | – |
| ೬ | ೧೯೬೧ ವಾಹನ ಸಾರಿಗೆ ಕಾರ್ಮಿಕ ಕಾಯ್ದೆ | ೩೬೧ | ೭ | ೮ | ೧೬೩೦.೦೦ |
| ೭ | ೧೯೬೩ ಕೈಗಾರಿಕಾ ಸಂಸ್ಥೆ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ ಕಾಯ್ದೆ) | ೩೯೮ | – | – | – |

| ೧ | ೨ | ೩ | ೪ | ೫ | ೬ |
|---|---|---|---|---|---|
| ೮. | ೧೯೬೫ ಬೋನಸ್ ಪಾವತಿ ಕಾಯ್ದೆ | ೩೭೪ | ೩ | – | – |
| ೯. | ೧೯೬೫ ಕಾಮಿಕ ಕಲ್ಯಾಣ ನಿಧಿ ಕಾಯ್ದೆ | ೧೦೬೩ | – | – | – |
| ೧೦. | ೧೯೬೬ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ | ೨೫೦ | ೧ | – | – |
| ೧೧. | ೧೯೭೦ ಗುತ್ತಿಗೆ ಕಾಮಿಕರ ಕಾಯ್ದೆ | ೪೪೫ | ೨ | – | – |
| ೧೨. | ೧೯೭೨ ಉಪಧನ ಪಾವತಿ ಕಾಯ್ದೆ | ೬೧೨ | – | – | – |
| ೧೩. | ೧೯೭೬ ಸಮಾನ ವೇತನ ಕಾಯ್ದೆ | ೧೪೭೬ | – | – | – |
| ೧೪. | ೧೯೭೯ ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆ | – | – | – | – |
| ೧೫. | ೧೯೮೬ ಬಾಲ ಕಾರ್ಮಿಕರ ಕಾಯ್ದೆ | ೧೭೯೧೩ | ೩೧೪ | ೩೦ | ೨೬೬೦೦.೦೦ |
| | ಒಟ್ಟು | ೯೪೯೧೩ | ೧೨೨೭ | ೬೧೨ | ೪೦೫೯೭೫.೦೦ |

ಆಧಾರ: ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ

## ಕಾರ್ಮಿಕ ಪರಿಹಾರ ಕಾಯ್ದೆ ಮತ್ತು ವಿಮಾ ಕಾಯ್ದೆ

ಕಾರ್ಮಿಕ ಪರಿಹಾರ ಕಾಯ್ದೆ ೧೯೨೪ ರಲ್ಲಿ ಜಾರಿಗೆ ಬಂದಿತು. ಇದಕ್ಕೆ ಅಂದಿನಿಂದ ಈವರೆವಿಗೆ ಸಾಕಷ್ಟು ತಿದ್ದುಪಡಿಗಳಾಗಿವೆ ಕಾರ್ಯನಿರತ ಕಾರ್ಮಿಕರಿಗೆ ದುರಂತ ಇಲ್ಲವೆ ಪ್ರಾಣಹಾನಿಯಾದಲ್ಲಿ ಉದ್ಯಮದಿಂದ ಅವರಿಗೆ ಸಲ್ಲಬೇಕಾದ ಪರಿಹಾರ ಧನದ ಮೊತ್ತವನ್ನು ಈ ಕಾಯ್ದೆಯು ನಮೂದಿಸುತ್ತದೆ. ಕೆಲಸ ಮಾಡುವ ಜಾಗದಲ್ಲಿ ಕಾರ್ಮಿಕರಿಗೆ ರಕ್ಷಣಾ ಕ್ರಮಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಲು ವಿಫಲರಾಗಿದ್ದರೆಂಬ ಆರೋಪ ಸ್ಥಿರವಾದಲ್ಲಿ ಮಾತ್ರ ಪರಿಹಾರ ಧನವನ್ನು ಕೊಡಬೇಕೆಂಬ ದೋಷಪೂರಿತ ನಿಯಮವಿತ್ತು. ಈ ದೋಷದ ಕಾರಣದಿಂದಾಗಿ ಉದ್ದಿಮೆಯ ಯಜಮಾನ ಪರಿಹಾರವನ್ನು ಕೊಡದೆ ತಪ್ಪಿಸಿಕೊಳ್ಳುವ ಅವಕಾಶಗಳಿದ್ದವು. ಇದರಿಂದಾಗಿ ಕಾರ್ಮಿಕನಿಗೆ ಪರಿಹಾರ ದೊರೆಯದೆ ಅವನು ನರಳುವ ಪರಿಸ್ಥಿತಿಗೆ ಬರುತ್ತಿದ್ದ. ಆದರೆ ಈಗ ರಾಜ್ಯ ಸರ್ಕಾರ ಕಾರ್ಮಿಕ ವಿಮಾ ಯೋಜನೆಯಡಿ ಎಲ್ಲಾ ಕಾರ್ಮಿಕರಿಗೂ ಪರಿಹಾರ ದೊರೆಯುವಂತೆ ಮಾಡಿದೆ. ಜಿಲ್ಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ ಕಾರ್ಮಿಕ ಪರಿಹಾರ ಕಾಯ್ದೆ (೧೯೨೩) ಯಂತೆ ೧೯೯೪ ರಿಂದ ೨೦೦೩ ರ ವರೆಗೆ ನೀಡಲ್ಪಟ್ಟ ಪರಿಹಾರದ ವಿವರಗಳನ್ನು ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ:

**ಕೋಷ್ಟಕ–೧೬.೨**

| ವರ್ಷ | ಸ್ವೀಕೃತ ಕರಾರುಗಳ ಸಂಖ್ಯೆ | ಕರಾರಿನ ಪ್ರಕಾರ ವಿಲೇವಾರಿ ಮಾಡಿದ ಸಂಖ್ಯೆ | ಕರಾರಿನಂತೆ ವ್ಯವಸ್ಥಾಪಕ ಮಂಡಲಿ ನೀಡಿದ ಪರಿಹಾರ ಧನ ರೂ. |
|---|---|---|---|
| ೧೯೯೪ | ೬೦ | ೬೦ | ೮,೨೩,೩೩೩.೭೫ |
| ೧೯೯೫ | ೨೭ | ೨೭ | ೪,೦೨,೫೯.೫೦ |
| ೧೯೯೬ | ೧೭ | ೧೭ | ೪,೫೯,೩೫೫.೦೦ |
| ೧೯೯೭ | ೧೮ | ೧೮ | ೫,೬೯,೧೭೭೨ |
| ೧೯೯೮ | ೨೪ | ೨೪ | ೧೧,೫೯,೪೨೫.೬೦ |
| ೧೯೯೯ | ೧೭ | ೧೭ | ೮,೫೯,೫೨೦.೩೦ |
| ೨೦೦೦ | ೨೦ | ೨೦ | ೩,೮೮,೬೫೫.೫೯ |
| ೨೦೦೧ | ೧೮ | ೧೮ | ೪,೯೨,೧೮೬.೪೧ |
| ೨೦೦೨ | ೦೨ | ೦೨ | ೨,೪೪,೬೨೦.೦೦ |
| ೨೦೦೩ | ೦೧ | ೦೧ | ೯,೨೨೨.೭೨ |

ಆಧಾರ: ಸಹಾಯಕ ಆಯುಕ್ತರು, ಕೆ.ಜಿ.ಎಫ್. – ಕೋಲಾರ ಜಿಲ್ಲೆ

**ಕೋಷ್ಟಕ:೧೬.೩**

| ವರ್ಷ | ಸ್ವೀಕರಿಸಿದ ಪ್ರಕರಣಗಳ ಸಂಖ್ಯೆ | | ವಿಲೇವಾರಿ ಪ್ರಕರಣಗಳು | | ಅಂತ್ಯದಲ್ಲಿ ಉಳಿದ ಪ್ರಕರಣಗಳು | | ಪರಿಹಾರ ಧನದ ಹಂಚಿಕೆ (ರೂ.ಗಳಲ್ಲಿ) | |
|---|---|---|---|---|---|---|---|---|
| | ವಿನಾಶಕಾರಕ | ವಿನಾಶಕಾರಿ ಯಲ್ಲದ | ವಿನಾಶಕಾರಕ | ವಿನಾಶಕಾರಿ ಯಲ್ಲದ | ವಿನಾಶಕಾರಕ | ವಿನಾಶಕಾರಿ ಯಲ್ಲದ | ವಿನಾಶಕಾರಕ | ವಿನಾಶಕಾರಿಯಲ್ಲದ |
| ೧೯೯೪ | ೯ | ೧೨ | ೨೦ | ೨೬ | ೨೨ | ೨೦ | ೫,೧೩,೪೧೦ | ೭೫,೪೧೬ |
| ೧೯೯೫ | ೨೭ | ೧೫ | ೨೬ | ೮ | ೨೩ | ೨೭ | ೧೩,೫೭,೨೯ | ೨,೧೩,೩೯೫ |
| ೧೯೯೬ | ೩೪ | ೧೬ | ೩೮ | ೨೩ | ೯ | ೨೦ | ೨೮,೩೧,೦೫೩ | ೧,೪೧,೪೫೬ |
| ೧೯೯೭ | ೫೦ | ೨೦ | ೩೮ | ೧೬ | ೩೧ | ೨೪ | ೩೯,೬೬,೪೬೯ | ೪,೬೩,೬೮೬ |
| ೧೯೯೮ | ೪೩ | ೧೪ | ೩೫ | ೧೨ | ೩೯ | ೨೬ | ೪೨,೦೬,೬೮೯ | ೬,೨೯,೯೦೨ |
| ೧೯೯೯ | ೩೮ | ೧೧ | ೨೫ | ೧೨ | ೫೩ | ೨೪ | ೬೮,೩೧,೭೭೦ | ೧೩,೩೫,೪೪೬ |
| ೨೦೦೦ | ೫೩ | ೩೧ | ೫೧ | ೧೪ | ೫೪ | ೪೨ | ೯೫,೮೦,೧೪೬ | ೧೧,೨೮,೦೦೦ |
| ೨೦೦೧ | ೪೩ | ೩೮ | ೨೫ | ೧೭ | ೭೨ | ೬೩ | ೫೭,೧೧,೪೧೧ | ೧೫,೩೮,೯೫೦ |
| ೨೦೦೨ | ೬೫ | ೭೫ | ೩೩ | ೨೫ | ೧೦೪ | ೧೧೩ | ೫೭,೪೧,೩೭೦ | ೧೨,೮೭,೨೨೪ |
| ೨೦೦೩ | ೪೯ | ೬೨ | ೩೨ | ೩೮ | ೧೨೧ | ೧೩೭ | ೪೯,೭೨,೪೦೧ | ೯,೮೩,೯೮೦ |
| ೨೦೦೪ | ೩೭ | ೭೫ | ೬೬ | ೬೩ | ೯೨ | ೧೪೯ | ೮೮,೬೯,೮೭೦ | ೪೫,೭೮,೧೬೯ |

ಆಧಾರ: ಸಹಾಯಕ ಆಯುಕ್ತರು, ಕೆ.ಜಿ.ಎಫ್. – ಕೋಲಾರ ಜಿಲ್ಲೆ

## ಕಾರ್ಮಿಕ ವಿಮಾ ಯೋಜನೆ

ಕಾರ್ಮಿಕ ವಿಮಾ ಕಾಯ್ದೆ ಅಥವಾ ನೌಕರರ ರಾಜ್ಯ ವಿಮಾ ಕಾಯ್ದೆಯನ್ನು ೧೯೪೮ ರಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿತು. ಕಾರ್ಮಿಕ ಪರಿಹಾರ ಕಾಯ್ದೆ (Workman’s compensation Act)ಯಲ್ಲಿದ್ದ ಹಲವಾರು ಆಡಳಿತಾತ್ಮಕ ದೋಷಗಳನ್ನು ನಿವಾರಿಸಿ, ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಕಾರಣದಿಂದ ಕಾರ್ಮಿಕ ರಾಜ್ಯ ವಿಮಾ ನಿಗಮವನ್ನು ಸ್ಥಾಪಿಸಲಾಯಿತು. ವಿಮಾದಾರನ ಆರೋಗ್ಯವನ್ನು ಕಾಪಾಡುವುದು ಹಾಗೂ ಗಾಯಗೊಂಡ ಕಾರ್ಮಿಕರಿಗೆ ಚಿಕಿತ್ಸೆ ನೀಡುವುದು, ವಿಮಾದಾರನನ್ನು ಅವಲಂಬಿಸಿದವರಿಗೆ ಸಹ ಹಲವು ವೈದ್ಯಕೀಯ ಸೌಲಭ್ಯಗಳನ್ನು ದೊರಕಿಸಿಕೊಡುವುದು ಈ ನಿಗಮದ ಉದ್ದೇಶವಾಗಿದೆ. ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ಜಾರಿಗೆ ಬಂದಿರುವ ನೌಕರರ ರಾಜ್ಯ ವಿಮಾ ಯೋಜನೆಯಡಿ ವೈದ್ಯಕೀಯ ಸೌಲಭ್ಯವನ್ನು ನೀಡುವುದಲ್ಲದೆ ಖಾಯಿಲೆ ಅಥವಾ ಹೆರಿಗೆ ಸಮಯಗಳಲ್ಲಿ ಬೇಕಾದ ಹಲವು ಅನುಕೂಲಗಳನ್ನು ಅಲ್ಲದೆ ಅಂತ್ಯ ಸಂಸ್ಕಾರದ ಸಮಯದಲ್ಲಿ ಒದಗಿಸಬೇಕಾದ ನಗದು ಪರಿಹಾರವನ್ನು ನೀಡಲಾಗುತ್ತದೆ. ವಿಮಾದಾರನಿಗೆ ವೈದ್ಯಕೀಯ ಸೌಲಭ್ಯವಲ್ಲದೆ ಅವನನ್ನು ಆಶ್ರಯಿಸಿದ ಕುಟುಂಬದ ಸದಸ್ಯರಿಗೂ ವೈದ್ಯಕೀಯ ಶುಶ್ರೂಷೆ ದೊರಕುತ್ತದೆ. ಈ ಯೋಜನೆಯ ಪ್ರಕಾರ ವೈದ್ಯಕೀಯ ಪರಿಹಾರವನ್ನು ಒದಗಿಸುವ ಜವಾಬ್ದಾರಿ ರಾಜ್ಯಸರ್ಕಾರಕ್ಕೆ ಸೇರಿರುತ್ತದೆ.

ಈ ವಿಮಾ ಯೋಜನೆಯಡಿ ಪ್ರತ್ಯಕ್ಷ ಮತ್ತು ಪರೋಕ್ಷ ವೈದ್ಯಕೀಯ ಸೇವೆಯನ್ನು ಕೊಡಲಾಗುವುದು. ‘ಸೇವಾ ವ್ಯವಸ್ಥೆ’ ಎಂದು ಕರೆಯಲಾಗುವ ಪ್ರತ್ಯಕ್ಷ ವ್ಯವಸ್ಥೆಯಡಿ ನಿಗಮವು ವೈದ್ಯಕೀಯ ಸೌಲಭ್ಯಗಳನ್ನು (ಕ.ರಾ.ವಿ.) ಆಸ್ಪತ್ರೆಗಳ ಮೂಲಕ ಇಲ್ಲವೇ ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಮೂಲಕ ಒದಗಿಸುತ್ತದೆ. ಇದಕ್ಕಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲವು ಹಾಸಿಗೆಗಳನ್ನು ಕಾರ್ಮಿಕರಿಗಾಗಿ ಕಾದಿರಿಸಲಾಗುತ್ತದೆ. ಪರೋಕ್ಷ ಕ್ರಮವನ್ನು ಸೂಚಿತ ವ್ಯವಸ್ಥೆ ಎಂದು ಕರೆಯಲಾಗಿದೆ. ಇದರ ಪ್ರಕಾರ (ಕ.ರಾ.ವಿ.) ನಿಗಮದಿಂದ ಸೂಚಿಸಲ್ಪಟ್ಟ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರದಿಂದ ಖಾಸಗಿ ವೈದ್ಯರನ್ನು ನಿಯಮಿಸಲಾಗಿರುತ್ತದೆ. ಖಾಯಿಲೆಯ ತೀವ್ರತೆಯನ್ನು ಅನುಸರಿಸಿ ಹಣವನ್ನು ಪರಿಹಾರ ರೂಪವಾಗಿ ಕೊಡಿಸಲಾಗುತ್ತದೆ. ಇದಲ್ಲದೆ ರಜಾ ಸೌಲಭ್ಯಕ್ಕೆ ಶಿಫಾರಸ್ಸು ಮಾಡಲಾಗುತ್ತದೆ.

### ಕೋಲಾರ ಜಿಲ್ಲೆಯಲ್ಲಿ ಕ.ರಾ.ವಿ. ವ್ಯವಸ್ಥೆ

ಕೋಲಾರ ಜಿಲ್ಲೆಯಲ್ಲಿ ನಾಲ್ಕು ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳು ಕೆಲಸ ಮಾಡುತ್ತಿದ್ದು, ಅವುಗಳ ಮೂಲಕ ವಿಮಾದಾರರಿಗೆ ಮತ್ತು ಅದರ ಕುಟುಂಬದವರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತದೆ. ರಾಬರ್ಟ್‌ಸನ್ ಪೇಟೆ, ಬಿ.ಇ.ಎಂ.ಎಲ್. ನಗರ, ಆಂಡರ್‌ಸನ್‌ಪೇಟೆ ಮತ್ತು ಬಂಗಾರಪೇಟೆಗಳಲ್ಲಿ ಇಂತಹ ಚಿಕಿತ್ಸಾಲಯಗಳಿವೆ. ಜಿಲ್ಲೆಯಲ್ಲಿ ವಿಮೆ ಮಾಡಿಸಿರುವ ನೌಕರರ ಕುಟುಂಬಗಳು ಮತ್ತು ಖರ್ಚುಗಳ ಅಂಕಿಅಂಶಗಳನ್ನು ಮುಂದಿನ ಕೋಷ್ಟಕ ೧೬.೪ರಲ್ಲಿ ನೀಡಲಾಗಿದೆ.

**ಕೋಷ್ಟಕ–೧೬.೪**

| ಕ್ರಸಂ | ವಿವರ | ೨೦೦೦–೦೧ | ೨೦೦೧–೦೨ | ೨೦೦೨–೦೩ |
|---|---|---|---|---|
| ೧ | **ವಿಮೆ ಮಾಡಿದ ನೌಕರರ ಸಂಖ್ಯೆ** | ೩,೧೫೧ | ೨,೨೧೬ | ೨,೪೫೪ |
| ೨ | **ಕುಟುಂಬದ ಸದಸ್ಯರು(ಅಂದಾಜು)** | ೧೨,೬೦೪ | ೮,೮೬೪ | ೯,೮೧೬ |
| ೩ | **ಮಾಡಲಾದ ಖರ್ಚು** | ೨೬,೮೩,೬೮೭ | ೮೮,೯೯,೧೨೨ | ೩೮,೧೭,೪೧೮ |

ಆಧಾರ: ನಿರ್ದೇಶಕರು, ಕರ್ನಾಟಕ ರಾಜ್ಯ ವಿಮಾ ಯೋಜನೆ (ವೈ) ಸೇವೆ, ಬೆಂಗಳೂರು

### ಕನಿಷ್ಠ ವೇತನ ಸೌಲಭ್ಯ

ಕನಿಷ್ಠ ವೇತನ ಕಾಯ್ದೆಯ ಅಡಿ ಸಂಬಳ ಸಾರಿಗೆಗಳು ಎಲ್ಲಾ ಕಾರ್ಮಿಕರಿಗೂ ದೊರಕುವಂತೆ ಮಾಡಲು ಉಪ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿ ಹೆಚ್ಚಿನ ಅಧಿಕಾರ ಹೊಂದಿರುತ್ತಾರೆ. ೧೯೪೮ರ ಕನಿಷ್ಠ ವೇತನ ಕಾಯ್ದೆ ೨೦ ಅನುಸೂಚಿತ ಕಾರ್ಮಿಕ ವರ್ಗಕ್ಕೆ ಅನ್ವಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಒಬ್ಬ ಕಾರ್ಮಿಕ ನಿರೀಕ್ಷಕರು ಕನಿಷ್ಠ ವೇತನದ ಕಾಯ್ದೆ ಪೂರ್ಣವಾಗಿ ಅನ್ವಯವಾಗುವಂತೆ ನೋಡಿಕೊಳ್ಳುತ್ತಾರೆ. ಜಿಲ್ಲೆಯಲ್ಲಿ ೧೯೬೭–೬೮ರ ವೇಳೆಗೆ ಸುಮಾರು ೪೦ ಕೈಗಾರಿಕೆಗಳು ಅಧಿಕೃತವಾಗಿ ನೋಂದಾಯಿತವಾಗಿದ್ದವು. ಬಹುಮಟ್ಟಿಗೆ ಈ ಕಾರ್ಖಾನೆಗಳು ಸಣ್ಣ ಪ್ರಮಾಣದ ಉದ್ದಿಮೆಗಳಾಗಿದ್ದವು. ಇದಲ್ಲದೆ ಸುಮಾರು ೧೧೦ ಸಣ್ಣ ಉದ್ದಿಮೆಗಳು ಇದ್ದು, ರೇಷ್ಮೆ, ಹೊಗೆಬತ್ತಿ ಮತ್ತು ಬೀಡಿ ತಯಾರಿಕೆಯಲ್ಲಿ ನಿರತವಾಗಿದ್ದವು.

**ನೌಕರರ ಭವಿಷ್ಯ ನಿಧಿ ಯೋಜನೆ** (ಕಾರ್ಮಿಕ ರಕ್ಷಣಾ ನಿಧಿ ಮತ್ತು ಕುಟುಂಬ ಪರಿಹಾರ ನಿಧಿ)

ಕಾರ್ಮಿಕರಲ್ಲಿ ಉಳಿತಾಯ ಮಾಡುವ ಮನೋಭಾವವನ್ನು ಬೆಳೆಸಲು ಮತ್ತು ಔದ್ಯಮಿಕ ಕಾರ್ಮಿಕರ ಅನಿರೀಕ್ಷಿತ ಮರಣ ಮುಂತಾದ ಅಸಂದರ್ಭಗಳನ್ನು ಎದುರಿಸಲು ೧೯೫೨ರಲ್ಲಿ ನೌಕರರ ಭವಿಷ್ಯ ನಿಧಿಯೋಜನೆ ಅಧಿನಿಯಮವನ್ನು ಜಾರಿಗೆ ತರಲಾಯಿತು. ಈ ಅಧಿನಿಯಮದ ನಿಯಮ–೫ ರಂತೆ ನೌಕರರ ಭವಿಷ್ಯ ನಿಧಿ ಯೋಜನೆ ೧೯೫೨ರ ನವೆಂಬರ್ ಒಂದರಿಂದ ಜಾರಿಗೆ ಬಂದಿತು. ವೃದ್ಧಾಪ್ಯ ಮತ್ತು ಇತರ ಪರಿಸ್ಥಿತಿಗಳಲ್ಲಿ ಭವಿಷ್ಯ ನಿಧಿಯ ಉಪಯೋಗವನ್ನು ಹೊಂದಬಹುದು. ಸೇವೆಯಲ್ಲಿರುವಾಗಲೇ ನೌಕರನು ಮರಣ ಹೊಂದಿದರೆ, ಆತನು ಕೂಡಿಟ್ಟ ಹಣ ಅತ್ಯಲ್ಪವಾಗಿದ್ದು, ಆತನ ಕುಟುಂಬಕ್ಕೆ ಪೂರ್ಣವಾಗಿ ಉಪಯೋಗವಾಗದೇಹೋಗಬಹುದು. ನೌಕರನು ಅನಿರೀಕ್ಷಿತವಾಗಿ ಮರಣ ಹೊಂದಿದಲ್ಲಿ ಅವನ ಕುಟುಂಬಕ್ಕೆ ದೀರ್ಘ ಕಾಲದ ಆರ್ಥಿಕ ರಕ್ಷಣೆಯನ್ನು ಒದಗಿಸುವ ಉದ್ದೇಶದಿಂದ ೧೯೭೧ರಲ್ಲಿ ಅಧಿನಿಯಮವನ್ನು ತಿದ್ದುಪಡಿ ಮಾಡಲಾಯಿತು. ಇದರಿಂದಾಗಿ ಕುಟುಂಬ ವೇತನ ಯೋಜನೆ ೧೯೭೧ರ ಮಾರ್ಚ್ ಒಂದರಿಂದ ಜಾರಿಗೆ ಬಂದಿತು. ನೌಕರರು ಮತ್ತು ಮಾಲೀಕರು ನೀಡುವ ಭವಿಷ್ಯ ನಿಧಿಯ ವಂತಿಗೆಯ ಒಂದು ಭಾಗವನ್ನು ಈ ನಿಧಿಗೆ ವರ್ಗಾಯಿಸುವ ವ್ಯವಸ್ಥೆ ಪ್ರಾರಂಭವಾಯಿತು. ಇದಕ್ಕೆ ಕೇಂದ್ರ ಸರ್ಕಾರವೂ ಹೆಚ್ಚಿನ ಅನುದಾನವನ್ನು ನೀಡಿದೆ. ನೌಕರರು ನಿವೃತ್ತಿ ವಯಸ್ಸನ್ನು ತಲುಪುವ ಮೊದಲೇ ಮರಣ ಹೊಂದಿದರೆ, ಅವರ ಉತ್ತರಾಧಿಕಾರಿಗಳಿಗೆ ಈ ನಿಧಿಯಿಂದ ಹಣವನ್ನು ಕೊಡಲಾಗುವುದು.

ಒಂದು ವರ್ಷದ ನಿರಂತರ ಸೇವೆ ಅಥವಾ ಒಂದು ವರ್ಷದಲ್ಲಿ ೨೪೦ ದಿನಗಳು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ನೌಕರರು ಭವಿಷ್ಯ ನಿಧಿ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಈ ಯೋಜನೆಯಲ್ಲಿ ನಿವೇಶನ ಕೊಳ್ಳಲು ಅಥವಾ ಮನೆ ಕಟ್ಟಲು, ಸಂಸ್ಥೆಗಳು

ತಾತ್ಕಾಲಿಕವಾಗಿ ಮುಚ್ಚಿದಾಗ ಸದಸ್ಯರು ಅಥವಾ ಅವರ ಅವಲಂಬಿತರ ಮದುವೆ ಸಂದರ್ಭಗಳಲ್ಲಿ ಇಲ್ಲವೇ ತೀವ್ರವಾದ ಖಾಯಿಲೆಗೆ ತುತ್ತಾದಾಗ ಹಾಗೂ ಇತರೆ ತುರ್ತು ಪರಿಸ್ಥಿತಿಗಳಲ್ಲಿ ಸದಸ್ಯರಿಗೆ ಈ ನಿಧಿಯಿಂದ ಮುಂಗಡ ಹಣವನ್ನು ಕೊಡುವ ವ್ಯವಸ್ಥೆ ಇದೆ. ಪ್ರಸ್ತುತ ೨೦ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಎಲ್ಲಾ ಕಾರ್ಖಾನೆಗಳಲ್ಲಿಯೂ ಭವಿಷ್ಯ ನಿಧಿ ಯೋಜನೆಯ ಸೌಲಭ್ಯವಿದೆ.

## ಔದ್ಯೋಗಿಕ ಶಾಂತಿ – ವಿವಾದಗಳು

ಕಾರ್ಮಿಕ ಮತ್ತು ವ್ಯವಸ್ಥಾಪಕರ ನಡುವೆ ಭಿನ್ನಾಭಿಪ್ರಾಯಗಳು ಬಂದಾಗ, ಅದನ್ನು ಪರಿಹರಿಸಿಕೊಳ್ಳುವ ಜವಾಬ್ದಾರಿ ಬಹು ಮಟ್ಟಿಗೆ ಅವರದೇ ಆಗಿರುತ್ತದೆ. ಹೊರಗಿನಿಂದ ವ್ಯಕ್ತಿಯನ್ನು ಕರೆದು ತಂದು ವ್ಯಾಜ್ಯ ಪರಿಹಾರ ಮಾಡಿಕೊಳ್ಳುವುದು ಅನಿವಾರ್ಯ ಎಂದು ವೇದ್ಯವಾದಾಗ ಮಾತ್ರ ಕೆಲವು ಬಾರಿ ಸರ್ಕಾರ ಮುಂದೆ ಬಂದು ಕಾರ್ಮಿಕ ಮತ್ತು ವ್ಯವಸ್ಥಾಪಕನಿಗೆ ಸಂಧಾನಕ್ಕೆ ಬರಲು ಸಹಾಯ ಮಾಡಬೇಕಾಗುತ್ತದೆ. ಎರಡು ಪಕ್ಷಗಳಿಗೂ ಸಮಸ್ಯೆಯನ್ನು ತಮ್ಮಲ್ಲಿಯೇ ಪರಿಹಾರ ಮಾಡಿಕೊಳ್ಳಲು ಸಾಧ್ಯವಿದ್ದರೂ, ಅದು ಕೆಲವು ಬಾರಿ ನಿರ್ದಿಷ್ಟ ಕಾಲದಲ್ಲಿ ವ್ಯಾಜ್ಯ ಬಗೆಹರಿಯದೆ ಅಶಾಂತಿಗೆ ಕಾರಣವಾಗಬಹುದು. ಈ ಅಪಾಯದ ಸಾಂದ್ರತೆ ಕಡಿಮೆ ಮಾಡಲು ಅಥವಾ ಪೂರ್ಣವಾಗಿ ಪರಿಹಾರ ಮಾಡಲು ಸರ್ಕಾರ ತನ್ನದೇ ಆದ ಅಧಿಕಾರ ವರ್ಗವನ್ನು ಪರಿಹಾರ ಮಾರ್ಗ ಹುಡುಕಲೆಂದೇ ಕಳುಹಿಸಬಹುದು.

೧೯ನೇ ಶತಮಾನದಲ್ಲಿ ವ್ಯವಸ್ಥಾಪಕ ಮತ್ತು ಕಾರ್ಮಿಕನ ನಡುವೆ ಸರ್ಕಾರ ಮಧ್ಯೆ ಪ್ರವೇಶಿಸಬಾರದೆಂಬ ನಿಯಮವಿತ್ತು. ಆದರೆ ಈಗ ಸರ್ಕಾರದ ಪ್ರವೇಶ ಅನಿವಾರ್ಯವಾಗಿದೆ. ಇದರಿಂದ ಔದ್ಯೋಗಿಕ ಸಂಬಂಧ, ರೀತಿ–ನೀತಿಗಳು ನೂತನ ರೀತಿಯಲ್ಲಿ ಮಾರ್ಪಟ್ಟಿವೆ. ಔದ್ಯೋಗಿಕ ವ್ಯಾಜ್ಯವನ್ನು ಬಗೆಹರಿಸಲು ೧) ಸಂಧಾನ (Negotiation) ೨) ಸಮನ್ವಯ (Concilliation) ೩)ಮಧ್ಯಸ್ಥಿಕೆ (Mediation) ಮತ್ತು ೪) ನಿರ್ಣಾಯಕ (Arbitration) ಕ್ರಮಗಳನ್ನು ಸೂಕ್ತವಾಗಿ ಅನುಸರಿಸಬಹುದು. ಕೈಗಾರಿಕಾ ವಿವಾದ ಕಾಯ್ದೆ ೧೯೪೭ ರ ಕಾಲಂ ೧೨ (೩) ರಡಿಯಲ್ಲಿ ದಿನಾಂಕ ೧–೪–೨೦೦೩ ರಿಂದ ೩೧–೩–೨೦೦೪ ರವರೆಗೆ ಸರ್ಕಾರದ ಪ್ರಯತ್ನದಿಂದಾಗಿ ಹಲವಾರು ಕೈಗಾರಿಕಾ ಸಂಸ್ಥೆಗಳ ವ್ಯವಸ್ಥಾಪಕ ಮಂಡಲಿಗಳು ಶಾಂತ ರೀತಿಯಿಂದ ತಮ್ಮ ಕಾರ್ಮಿಕ ಸಂಘಗಳೊಡನೆ ಒಪ್ಪಂದಕ್ಕೆ ಬಂದಿದೆ.

**ಕೋಷ್ಟಕ ೧೬.೫**

ಜಿಲ್ಲೆಯಲ್ಲಿ ದಿನಾಂಕ ೦೧–೦೧–೨೦೦೪ ರಿಂದ ೩೧–೧೨–೨೦೦೪ ರವರೆಗೆ ಬಾಕಿ ಇದ್ದ, ಸ್ವೀಕರಿಸಿದ ಮತ್ತು ವಿಲೇವಾರಿ ಮಾಡಿದ ತಕರಾರು ಅರ್ಜಿಗಳು, ಕೈಗಾರಿಕಾ ವಿವಾದಗಳು, ಕನಿಷ್ಠ ವೇತನ ಕ್ಲೇಂ ಅರ್ಜಿಗಳು ಮತ್ತು ಕಾರ್ಮಿಕ ನಷ್ಟ ಪರಿಹಾರ ಪ್ರಕರಣಗಳ ವಿವರಗಳನ್ನು ಈ ಕೋಷ್ಟಕ ೧೬.೫ ರಲ್ಲಿ ನೀಡಲಾಗಿದೆ.

| ಬಾಕಿ | ಸ್ವೀಕೃತಿ | ಒಟ್ಟು | ವಿಲೇವಾರಿ | ಅಂತ್ಯದ ಬಾಕಿ | ಪರಿಹಾರ ನೀಡಿದ್ದು |
|---|---|---|---|---|---|
| | | | **ತಕರಾರು ಅರ್ಜಿಗಳು** | | |
| ೭ | ೪೨ | ೬೨ | ೩೩ | ೧೬ | – |
| | | | **ಕೈಗಾರಿಕಾ ವಿವಾದಗಳು** | | |
| ೧೨ | ೫೦ | ೪೯ | ೪೭ | ೧೫ | ರೂ ೯೦೦೦.೦೦ |
| | | | **ಕ್ಲೇಂ ಅರ್ಜಿಗಳು** | | |
| ೨೦೭ | ೫೧ | ೨೫೮ | ೧೬ | ೨೪೨ | ರೂ. ೧,೮೫,೯೭೮೦ |

ಆಧಾರ: ಕಾರ್ಮಿಕ ಅಧಿಕಾರಿ – ಕೋಲಾರ

ಕಾರ್ಮಿಕ ಮತ್ತು ವ್ಯವಸ್ಥಾಪಕರ ನಡುವಿನ ಸಂಧಾನ ಕಾರ್ಯ ಮುರಿದುಬಿದ್ದಾಗ ನೌಕರರು ತಮ್ಮ ಕೆಲಸಗಳನ್ನು ತೊರೆದು ತಮ್ಮ ಕಾರ್ಯಸಾಧನೆಗಾಗಿ ಹೊರಗೆ ನಿಲ್ಲುತ್ತಾರೆ. ಅಥವಾ ವ್ಯವಸ್ಥಾಪಕ ಮಂಡಲಿಯೇ ತಮ್ಮ ಉದ್ದಿಮೆಯ ಬಾಗಿಲನ್ನು ಮುಚ್ಚಿ ತಮ್ಮ ನಿಲುವೇ ಸರಿಯೆಂದು ನೌಕರರಿಗೆ ತಿಳಿಯಪಡಿಸುವ ದೃಷ್ಟಿಯಿಂದ ಹೊರ ನಡೆಯುತ್ತಾರೆ. ನೌಕರರು ಮುಷ್ಕರವನ್ನೂ, ಅಧಿಕಾರಿಗಳು ಬೀಗಮುದ್ರೆಯನ್ನು ತಮ್ಮ ಅಸ್ತ್ರ ಪ್ರತಿಅಸ್ತ್ರಗಳನ್ನಾಗಿ ಉಪಯೋಗಿಸುತ್ತಾರೆ. ಇದು ಕೈಗಾರಿಕಾ ಘರ್ಷಣೆಯ ಸಂಕ್ಷಿಪ್ತ ಚಿತ್ರಣ. ಭಾರತೀಯ ವ್ಯಾಜ್ಯ ಕಾಯ್ದೆಯು ಮುಷ್ಕರವನ್ನು ಕುರಿತು ಈ ರೀತಿ ವ್ಯಾಖ್ಯೆಯನ್ನು ಕೊಡುತ್ತದೆ: ಯಾವುದೇ ಉದ್ದಿಮೆಯೊಂದರಲ್ಲಿ ಉದ್ಯೋಗದಲ್ಲಿರುವ ಗುಂಪೊಂದು ನಡೆಸುವ ಕ್ರಿಯೆ ಇದಾಗಿದ್ದು, ಎಲ್ಲರೂ ಒಟ್ಟಿಗೆ ಕೂಡಿ ಒಮ್ಮತದಿಂದ ಕೆಲಸವನ್ನು ನಿರಾಕರಿಸುತ್ತಾರೆ. ಇಲ್ಲಿ ಕೇವಲ ಕರ್ತವ್ಯದಿಂದ ಹೊರ ನಿಲ್ಲುವುದು ಮುಖ್ಯವಲ್ಲ. ಕೆಲಸಕ್ಕೆ ಹಾಜರಾದ ಮೇಲೆ ಅವರಿಗೆ ವಹಿಸಿದ ಕೆಲಸವನ್ನು ನಿರಾಕರಿಸುವುದು ಮುಖ್ಯವಾದದ್ದು. ವ್ಯವಸ್ಥಾಪಕ ವರ್ಗ ಬೀಗಮುದ್ರೆಯನ್ನು ಘೋಷಿಸಿ, ವ್ಯಾಪಾರ ಮಳಿಗೆಯನ್ನು ಮುಚ್ಚಿ ನೌಕರರನ್ನು ನಿರುದ್ಯೋಗಿಗಳನ್ನಾಗಿ ಮಾಡಬಹುದು. ಮುಷ್ಕರಗಳು, ಬೀಗಮುದ್ರೆ ಹಾಗೂ ಕೈಗಾರಿಕಾ ವಿವಾದಗಳನ್ನು ಬಗೆಹರಿಸಿ ಶಾಂತಿ ಮತ್ತು ಸೌಹಾರ್ದತೆ ನೆಲೆಸುವಂತೆ ಮಾಡುವುದು ರಾಜ್ಯದ ಕಾರ್ಮಿಕ ಇಲಾಖೆಯ ಮುಖ್ಯವಾದ ಕರ್ತವ್ಯವಾಗಿರುತ್ತದೆ. ಜಿಲ್ಲೆಯಲ್ಲಿ ಮುಷ್ಕರಗಳಿಂದಾಗಿ ನಷ್ಟವಾದ ಮಾನವ ದಿನಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬**

| ಕ್ರಸಂ. | ಸಂಸ್ಥೆಯ ಹೆಸರು | ಮುಷ್ಕರ ನಡೆದ ಕಾಲ | ನಷ್ಟವಾದ ಮಾನವ ದಿನಗಳು |
|---|---|---|---|
| ೧ | ಸಿರಗುಪ್ಪ ಷುಗರ್ ಅಂಡ್ ಕೆಮಿಕಲ್ಸ್(ಲಿ) ಗೌರಿಬಿದನೂರು | ೧೮-೨-೨೦೦೦ ದಿಂದ ೨೧-೨-೨೦೦೦ | ೧೩೮೩ |
| ೨ | ಕರ್ನಾಟಕ ಕ್ರಿಸ್ಟಲ್(ಲಿ) ಚಿಕ್ಕಬಳ್ಳಾಪುರ | ೧೪-೩-೨೦೦೦ ರಿಂದ ೨೦-೩-೨೦೦೦ | ೬೫ |
| ೩ | ಮೈಕ್ರೋಟಿಕ್ ಡೈಸ್(ಪ್ರೈ.ಲೀ) ಚಿಕ್ಕಬಳ್ಳಾಪುರ | ೨೬-೬-೨೦೦೦ ರಿಂದ ೧-೭-೨೦೦೦ | ೪೪೦ |
| ೪ | ಮೆಡ್ ಫಾರ್ಮ್ ಮಾಲೂರು | ೧೪-೭-೨೦೦೧ ರಿಂದ ೭-೮-೨೦೦೧ | ೧೭೨ |
| ೫ | ಶ್ಯಾಮ್ ಅಹುಜಾ (ಲಿ) | ೮೮-೧೧-೨೦೦೧ ರಿಂದ ೧೮-೧೧-೨೦೦೧ | ೮೪೦ |

ಮೂಲ: ಕಾರ್ಮಿಕ ಅಧಿಕಾರಿ, ಕೋಲಾರ

**ಕೋಷ್ಟಕ ೧೬.೭:** ಜಿಲ್ಲೆಯಲ್ಲಿ ಬೀಡಿ ಮತ್ತು ಸಿಗಾರ್ ಕಾಯ್ದೆಯನ್ವಯ ನೋಂದಣಿಗೊಂಡ ಕಾರ್ಮಿಕರ ವಿವರ

| ಕ್ರಸಂ | ಜಿಲ್ಲೆಯಲ್ಲಿ ಬೀಡಿ ಮತ್ತು ಸಿಗಾರ್ ಕಾಯ್ದೆಯನ್ವಯ ನೋಂದಣಿಗೊಂಡ ಕಾರ್ಮಿಕರ ವಿವರ | ವರ್ಷಗಳು ೨೦೦೦ | ೨೦೦೧ | ೨೦೦೨ | ೨೦೦೩ | ೨೦೦೪ |
|---|---|---|---|---|---|---|
| ೧ | ನೋಂದಣಿಯಾದ ಉದ್ದಿಮೆದಾರರು | ೧೧ | ೧೨ | ೯ | ೯ | ೯ |
| ೨ | ಬೀಡಿ ಕಾರ್ಮಿಕರ ಸಂಖ್ಯೆ | ೫೦ | ೬೫ | ೧೧೦ | ೧೧೦ | ೧೨೦ |
| ೩ | ಕಂಟ್ರಾಕ್ಟರ್‌ದಾರರ ಸಂಖ್ಯೆ | ೨೩ | ೩೦ | ೪೨ | ೪೨ | ೪೨ |
| ೪ | ಗೃಹ ಕಾರ್ಮಿಕರ ಸಂಖ್ಯೆ | ೮೦೦ | ೧೪೦೦ | ೩೩೯ | ೩೩೯ | ೩೩೯ |

ಮೂಲ: ಕಾರ್ಮಿಕ ಅಧಿಕಾರಿ – ಕೋಲಾರ, ಸಹಾಯಕ ಕಾರ್ಮಿಕ ಆಯುಕ್ತರು, ಬೆಂಗಳೂರು.

**ಕೋಷ್ಟಕ–೧೬.೮:** ಹಂಗಾಮಿ ಕೆಲಸ ಸ್ಥಗಿತದ ವಿವರಗಳು

| ಕ್ರ ಸಂ | ಸಂಸ್ಥೆಯ ಹೆಸರು | ಕೆಲಸ ಸ್ಥಗಿತವಾದ ಕಾಲ | ನಷ್ಟ ಮಾಸದ ದಿನಗಳು |
|---|---|---|---|
| ೧ | ಕುಂಬಾರ ಹಳ್ಳಿ, ಕೋಲಾರ | ೬–೭–೨೦೦೦ ರಿಂದ ೧೮–೯–೨೦೦೦ | ೪೩೩೧ |
| ೨ | ಗುನ್ನಾಮ್ ಸುಬ್ಬರಾವ್ ಇನ್ವೆಸ್ಟ್‌ಮೆಂಟ್(ಲಿ), ಮಾಲೂರು | ೧೪–೨–೨೦೦೧ ರಿಂದ ೨೦–೨–೨೦೦೧ | ೩೩೦ |
| ೩ | ಸಿರಗುಪ್ಪ ಷುಗರ್ ಅಂಡ್ ಕೆಮಿಕಲ್ಸ್ (ಲಿ), ಗೌರಿಬಿದನೂರು | ೧೬–೪–೨೦೦೧ ರಿಂದ ೪–೬–೨೦೦೧ | ೧೫೩೫೦ ಪ್ರಸ್ತುತ ಸ್ಥಗಿತಗೊಂಡಿದೆ |

ಮೂಲ: ಕಾರ್ಮಿಕ ಅಧಿಕಾರಿ – ಕೋಲಾರ

**ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನಾ ಯೋಜನೆ**

ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳಲ್ಲಿ ಹಾಗೂ ಭಾರತವನ್ನೊಳಗೊಂಡಂತೆ ಬೆಳವಣಿಗೆಯ ಪಥದಲ್ಲಿರುವ ಹಲವಾರು ದೇಶಗಳಲ್ಲಿ ಇಂದಿಗೂ ಬಾಲಕಾರ್ಮಿಕರಾಗಿ ಮಕ್ಕಳನ್ನು ದುಡಿಸಿಕೊಳ್ಳುವುದು ಒಂದು ಸಾಮಾಜಿಕ ಪಿಡುಗಾಗಿದೆ. ೧೨ ಅಥವಾ ೧೪ ವಯಸ್ಸನ್ನು ಮೀರಿದ ಅಪ್ರಾಪ್ತ ವಯಸ್ಕರಾದ ಮಕ್ಕಳನ್ನು ಕೃಷಿ ಮತ್ತು ಕೈಗಾರಿಕಾ ಕೆಲಸಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಪೌಷ್ಟಿಕ ಆಹಾರದ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆ, ಶೈಕ್ಷಣಿಕ ಅವಕಾಶಗಳ ಕೊರತೆ, ಒತ್ತಾಯದ ದುಡಿತ, ಅನಾರೋಗ್ಯಕರವಾದ ವಾತಾವರಣದಲ್ಲಿ ನರಳುತ್ತಾ ಜೀವಿಸಬೇಕಾದ ಅನಿವಾರ್ಯತೆ, ಸಾಮಾಜಿಕ ಶೋಷಣೆ, ಕ್ರೌರ್ಯ ಮುಂತಾದ ಪೀಡನೆಗಳಿಂದ ಜಗತ್ತಿನ ಮಿಲಿಯಾಂತರ ಮಕ್ಕಳು ಬವಣೆ ಪಡುತ್ತಿದ್ದಾರೆ. ಗಂಟೆಗಟ್ಟಲೆ ಬೀಡಿ ಕಟ್ಟುವುದು, ಪಟಾಕಿ ತಯಾರಿಸುವ ಕಾರ್ಯಗಳಲ್ಲಿ ಪ್ರೌಢ ಕಾರ್ಮಿಕರಂತೆ ದುಡಿಯಬೇಕಾದ ಒತ್ತಡ, ತಮ್ಮ ಹಿತರಕ್ಷಣೆಗೆಂದು ಮಾಡಲಾಗಿರುವ ಕಾನೂನು ಸೌಲಭ್ಯವನ್ನು ಪಡೆದುಕೊಳ್ಳಲಾರದೆ ಅಸಹಾಯಕ ಪರಿಸ್ಥಿತಿಯಲ್ಲಿರುವ ಮಕ್ಕಳು ಲಾಭಬಡುಕ ಬಂಡವಾಳಗಾರರ ಹಾಗೂ ಅಮಾನವೀಯ ಉದ್ಯೋಗಪತಿಗಳ ಬಲಿಪಶುವಾಗಿರುವುದನ್ನು ನಾವು ಹಲವೆಡೆಗಳಲ್ಲಿ ಕಾಣಬಹುದಾಗಿದೆ.

ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ ೪–೫:೮೬ರ ಪ್ರಕರಣದಲ್ಲಿ ೧೦–೧೨–೧೯೯೬ ರಂದು ನೀಡಿರುವ ನಿರ್ದೇಶನದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ಮಾರ್ಗ ಸೂಚಿ ನಿರ್ದೇಶನದನ್ವಯ ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ೧೪ ವರ್ಷದೊಳಗಿನ ಬಾಲ ಕಾರ್ಮಿಕರನ್ನು ಗುರ್ತಿಸಿ, ಅವರನ್ನು ಅಂತಹ ಕೆಲಸದಿಂದ ವಿಮುಕ್ತಗೊಳಿಸಿ, ಶಿಕ್ಷಣ ಸಂಸ್ಥೆಗಳಿಗೆ ಸೇರಿಸಿ ಶಿಕ್ಷಣ ಒದಗಿಸುವುದು, ಊಟ–ವಸತಿ ಕೊಡುವ ಮೂಲಕ ಪುನರ್ ವಸತಿ ಕಲ್ಪಿಸುವುದು, ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೊಡಗಿಸಿಕೊಂಡಂತಹ ಮಾಲೀಕರನ್ನು ಶಿಕ್ಷೆಗೆ ಒಳಪಡಿಸಿ ೨೦,೦೦೦ ರೂ.ಗಳಷ್ಟು ದಂಡ ವಸೂಲಿ ಮಾಡುವುದು ಮುಂತಾದ ಪ್ರಮುಖ ಜವಾಬ್ದಾರಿಗಳನ್ನು ಜಿಲ್ಲಾಧಿಕಾರಿಗೆ ವಹಿಸಲಾಗಿದೆ. ಜಿಲ್ಲಾಧಿಕಾರಿಯು ಜಿಲ್ಲಾ ಬಾಲ ಕಾರ್ಮಿಕರ ನೇಮಕಾತಿ ನಿರ್ಮೂಲನಾ ಪ್ರಚಾರ ಸಂಘದ ಅಧ್ಯಕ್ಷರೂ ಆಗಿರುತ್ತಾರೆ.

ಕರ್ನಾಟಕ ರಾಜ್ಯವನ್ನು ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುವ ಮಹತ್ವಾಕಾಂಕ್ಷೆಯಿಂದ ಮತ್ತು ಈ ಕಾರ್ಯವನ್ನು ಆರು ವರ್ಷಗಳ ಕಾಲಾವಧಿಯೊಳಗಾಗಿ ಪೂರೈಸಬೇಕೆಂದು ಸಂಕಲ್ಪ ಹೊಂದಿ ಕಾಲಬದ್ಧ ಕಾರ್ಯಕ್ರಮವನ್ನಾಗಿ ಪರಿಗಣಿಸಿ ಸರ್ಕಾರ ಈಗಾಗಲೇ (ಸಿ.ಎಲ್.ಸಿ.೨೦೦೧ (೧) ದಿ. ೨೯–೫–೨೦೦೧) ಆಜ್ಞೆಯನ್ನು ಜಾರಿಗೊಳಿಸಿರುತ್ತಾರೆ.

ಕೋಲಾರ ಜಿಲ್ಲೆಯಲ್ಲಿ ಕಾರ್ಮಿಕ ಅಧಿಕಾರಿಗಳ ಘೋಷಣೆಯಂತೆ ಬಾಲ ಕಾರ್ಮಿಕರನ್ನು ಗುರುತಿಸುವ ಬಾಬ್ತು ೨೦೦೧–೨೦೦೨ನೇ ಸಾಲಿನ ಫೆಬ್ರವರಿಯವರೆಗೂ ಸಮೀಕ್ಷೆ ನಡೆದಿದ್ದು, ಅದರಂತೆ ಅಪಾಯಕಾರಿ ಉದ್ದಿಮೆಗಳಲ್ಲಿ ತೊಡಗಿದ್ದ ೧,೩೮೨ ಮತ್ತು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ತೊಡಗಿದ್ದ ೧೮೦೦ ಹೀಗೆ ಒಟ್ಟು ೩೧೮೨ ಬಾಲ ಕಾರ್ಮಿಕರನ್ನು ಗುರುತಿಸಲಾಗಿದೆ.

**ಕೋಷ್ಟಕ ೧೬.೯**

ಕಳೆದ ಮೂರು ವರ್ಷಗಳಲ್ಲಿ (೨೦೦೦–೦೧, ೨೦೦೧–೦೨, ೨೦೦೨–೦೩)

ನವೀಕರಣ ಮತ್ತು ಸಂದಾಯವಾದ ತಾಲೂಕುವಾರು ಹಣದ ವಿವರ

| ತಾಲೂಕು | ೨೦೦೦–೦೧ | | | | ೨೦೦೧–೦೨ | | | | ೨೦೦೨–೦೩ | | | |
|---|---|---|---|---|---|---|---|---|---|---|---|---|
| | ಹೊಸ ನೋಂದಣಿ ಸಂಖ್ಯೆ | ಸಂದಾಯ ವಾದ ಹಣ | ನವೀಕರಣ ದಿಂದ ಬಂದ ಹಣ | ವರ್ಷದಲ್ಲಿ ಬಂದ ಹಣ | ಹೊಸ ನೋಂದಣಿ ಸಂಖ್ಯೆ | ಸಂದಾಯ ವಾದ ಹಣ | ನವೀಕರಣ ದಿಂದ ಬಂದ ಹಣ | ವರ್ಷದಲ್ಲಿ ಬಂದ ಹಣ | ಹೊಸ ನೋಂದಣಿ ಸಂಖ್ಯೆ | ಸಂದಾಯ ವಾದ ಹಣ | ನವೀಕರಣ ದಿಂದ ಬಂದ ಹಣ | ವರ್ಷದಲ್ಲಿ ಬಂದ ಹಣ |
| **ಬಂಗಾರಪೇಟೆ** | ೩ | ೮೫ | – | ೧೫೦ | ೨೫ | ೫೩೦೦ | ೧ | ೩೨೭೫ | ೮ | ೧೫೦೦ | ೧೮ | ೨೧೪೭೫ |
| **ಚಿಂತಾಮಣಿ** | ೬೮ | ೧೭೭೭೫ | ೧೯೪೫೦ | ೩೭೨೭೫ | ೧೨ | ೨೪೫೨೫ | ೧೯೪೫೦ | ೩೭೨೭೫ | ೯ | ೧೩೫೦೦ | ೧೦೦೦ | ೧೪೫೦೦ |
| **ಚಿಕ್ಕಬಳ್ಳಾಪುರ** | ೫೮ | ೯೨೫೦ | ೩೪೨೫ | ೧೪೬೨೫ | ೬೫ | ೧೧೬೨೫ | ೩೦೦೦ | ೧೪೬೨೫ | ೬೦ | ೯೯೭೫ | ೨೫೫೦ | ೧೫೪೭೫ |
| **ಶಿಡ್ಲಘಟ್ಟ** | ೪೧ | ೬೨೫೦ | ೪೦೦ | ೬೬೭೫ | ೫೮ | ೭೭೫೦ | ೧೧೫ | ೭೩೭೫ | ೪೦ | ೬೩೭೫ | ೧೫ | ೬೫೦೦ |
| **ಗೌರಿಬಿದನೂರು** | ೭೧ | ೧೪೬೨೫ | ೧೦೦೦ | ೧೫೬೨೫ | ೮೧ | ೧೨೩೭೫ | ೨೫೦೦ | ೧೪೮೭೫ | ೭೦ | ೧೪೧೭೫ | ೨೪೫೨೫ | ೩೫೭೦೦ |
| **ಕೋಲಾರ** | ೨೮ | ೧೨೩೭೫ | ೧೧೨೫೦ | ೮೪೨೭೫ | ೯೩ | ೧೭೯೫೦ | ೨೬೫೦ | ೨೦೬೦೦ | ೫೧ | ೧೪೫೭೫ | ೧೪೫೫೦ | ೨೯೯೭೫ |
| **ಮಾಲೂರು** | ೧೭ | ೩೩೭೫ | ೩೭೫ | ೩೨೫೦ | ೬೭ | ೧೧೬೨೫ | ೫೫ | ೧೨೧೫೦ | ೨೫ | ೫೧೨೫ | ೧೦೦೦ | ೬೧೨೫ |
| **ಮುಳಬಾಗಿಲು** | ೧೦ | ೧೨೫೦ | ೨೭೭೫ | ೪೦೨೫ | ೫೫ | ೮೦೦೦ | ೨೩೭೫ | ೧೦೩೭೫ | ೪೦ | ೬೩೫೦ | ೨೮೭೫ | ೯೨೨೫ |

ಆಧಾರ: ಕಾರ್ಮಿಕ ನಿರೀಕ್ಷಕರ ಕಾರ್ಯಾಲಯಗಳು, ಕೋಲಾರ ಜಿಲ್ಲೆ

ಈ ಪೈಕಿ ೨೪೦ ಮಕ್ಕಳನ್ನು ಜಿಲ್ಲೆಯ ಐದು ಶಾಲೆಗಳಲ್ಲಿ (ಕೋಲಾರ–ಎರಡು; ಚಿಂತಾಮಣಿ–ಒಂದು; ಶಿಡ್ಲಘಟ್ಟ–ಒಂದು; ಹಾಗೂ ಬಾಗೇಪಲ್ಲಿ–ಒಂದು) ಪ್ರತೀ ಶಾಲೆಗೆ ೫೦ ಮಕ್ಕಳಂತೆ ಪುನರ್ವಸತಿ ಕಲ್ಪಿಸಲಾಗಿದೆ. ವಿಶೇಷ ವಸತಿ ಶಾಲೆಗಳಿಂದ ೪೨ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗಳಿಗೆ ದಾಖಲಾಗಿಸಿದೆ. ಸರ್ಕಾರ ಜಿಲ್ಲೆಗೆ ಇನ್ನೂ ಎಂಟು ವಿಶೇಷ ವಸತಿ ಶಾಲೆಗಳನ್ನು ಇದಕ್ಕಾಗಿ ಮಂಜೂರು ಮಾಡಿದೆ.

ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ೧೯೮೬ ರ ಅಡಿ ಜಿಲ್ಲೆಯ ಕಾರ್ಮಿಕ ನಿರೀಕ್ಷಕರು ಒಟ್ಟು ೪೬೨ ಪರಿವೀಕ್ಷಣೆಗಳನ್ನು ನಡೆಸಿ, ಉಲ್ಲಂಘನೆ ಕಂಡುಬಂದ ೩೦೫ ಪ್ರಕರಣಗಳನ್ನು ಗುರುತಿಸಿ, ೧೨೮ ಮೊಕದ್ದಮೆಗಳನ್ನು ಹೂಡಲಾಗಿದ್ದು, ಈ ಪೈಕಿ ೧೦ ಪ್ರಕರಣಗಳು ಸಾಬೀತಾಗಿವೆ, ಹಾಗೂ ೧೬ ಪ್ರಕರಣಗಳು ಖುಲಾಸೆಗೊಂಡಿವೆ. ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರಿಗೆ ಒಟ್ಟು ೫೬೫ ನೆನಪೋಲೆಗಳನ್ನು ಜಿಲ್ಲೆಯ ಕಾರ್ಮಿಕ ನಿರೀಕ್ಷಕರು ಜಾರಿ ಮಾಡಿದ್ದು, ಪ್ರತೀ ಬಾಲ ಕಾರ್ಮಿಕನಿಗೆ ೨೦,೦೦೦–೦೦ ರೂ.ಗಳು ಕಾರ್ಪಸ್ ನಿಧಿಗೆ ಠೇವಣಿ ಇಡುವಂತೆ ತಿಳಿಸಲಾಗಿದೆ. ಅಲ್ಲದೆ ೧೭೫ ಪ್ರಕರಣಗಳನ್ನು ಬೆಂಗಳೂರು ವಿಭಾಗ–೨ ರ ಸಹಾಯಕ ಕಾರ್ಮಿಕ ಆಯುಕ್ತರ ಮುಂದೆ ದಾಖಲಿಸಲಾಗಿದೆ.

**ಕೋಷ್ಟಕ–೧೬.೧೦:** ಕೋಲಾರ ಜಿಲ್ಲೆಯಲ್ಲಿ ಬಾಲ ಕಾರ್ಮಿಕರ (ನಿಯಂತ್ರಣ–ನಿಷೇಧ) ಕಾಯ್ದೆ ೧೯೮೬ ರ ಅಡಿಯಲ್ಲಿ ೧೯೯೬–೯೭ ರಿಂದ ೨೦೦೩–೦೪ ರವರೆಗಿನ ವಾರ್ಷಿಕ ಪ್ರಗತಿಯ ಅಂಕಿ ಅಂಶಗಳು

| ಕಾಲಾವಧಿ | ಪರಿವೀಕ್ಷಣೆ ಸಂಖ್ಯೆ | ಬಾಲ ಕಾರ್ಮಿಕರು ಪತ್ತೆಯಾದ ಸಂಖ್ಯೆ | ಅಪರಾಧದ ಸಂಖ್ಯೆ | ಅಪರಾಧ ಆರೋಪ ಮಾಡಿದ ಸಂಖ್ಯೆ | ಶಿಕ್ಷೆ ಗೊಂಡವರ ಸಂಖ್ಯೆ | ಬಿಡುಗಡೆ ಆದವರ ಸಂಖ್ಯೆ | ದಂಡ (ರೂ ಗಳಲ್ಲಿ) |
|---|---|---|---|---|---|---|---|
| ೧–೦೪–೧೯೯೬ ರಿಂದ ೩೧–೦೩–೧೯೯೭ | ೬೦ | ೫ | ೫ | ೧ | ೬ | – | ೫೧೦೦.೦೦ |
| ೧–೦೪–೧೯೯೭ ರಿಂದ ೩೧–೦೩–೧೯೯೮ | ೯೮ | ೪೩ | ೪೩ | ೮ | ೩ | ೪ | ೧೬೫೦.೦೦ |
| ೧–೦೪–೧೯೯೯ ರಿಂದ ೩೧–೦೩–೨೦೦೦ | ೬೫೦ | ೨ | ೨ | ೫ | ೨ | ೩ | ೧೩೦೦.೦೦ |
| ೧–೦೪–೨೦೦೦ ರಿಂದ ೩೧–೦೩–೨೦೦೧ | ೮೩ | ೭೧ | ೧೫೬ | ೭೧ | ೧೦ | ೧೩ | ೫೫೭೫.೦೦ |
| ೧–೦೪–೨೦೦೧ ರಿಂದ ೩೧–೦೩–೨೦೦೨ | ೨೯ | ೯ | ೨೮ | ೯೯ | ೩ | – | ೧೬೩೦೦.೦೦ |
| ೧–೦೪–೨೦೦೨ ರಿಂದ ೩೧–೦೩–೨೦೦೩ | ೩೦ | ೭೪ | ೮೪ | ೭೪ | ೧೦ | ೩ | ೬೫೦೦.೦೦ |
| ೧–೦೪–೨೦೦೩ ರಿಂದ ೩೧–೦೩–೨೦೦೪ | ೫೨ | ೧೨೮ | ೧೨೮ | ೧೧೮ | ೩ | ೮ | ೨೫೦೦.೦೦ |

ಆಧಾರ: ಕಾರ್ಮಿಕ ಅಧಿಕಾರಿ ಕಾರ್ಯಾಲಯ, ಕೋಲಾರ

**ಕಾರ್ಮಿಕ ಸಂಘಟನಾ ಚಳವಳಿ**

ಪ್ರಥಮ ಜಾಗತಿಕ ಯುದ್ಧದ ಅಂತ್ಯದ ವೇಳೆಗೆ ಕರ್ನಾಟಕದಲ್ಲಿ ಆಧುನಿಕ ಕೈಗಾರಿಕೆಗಳು ಪ್ರಾರಂಭವಾಗಿದ್ದರೂ ಕಾರ್ಮಿಕ ಸಂಘಟನೆಯ ಕಾರ್ಯ ಆರಂಭವಾಗಿರಲಿಲ್ಲ. ೧೯೨೦ರಲ್ಲಿ ಕೇಂದ್ರದಲ್ಲಿ ಮನ್ನಣೆ ಪಡೆದ ಕಾರ್ಮಿಕ ಸಂಘಗಳ ಅಧಿನಿಯಮವು ಹಳೆಯ ಮೈಸೂರು ಪ್ರದೇಶಗಳಿಗೆ ೧೯೪೧ರವರೆಗೆ ಅನ್ವಯವಾಗಲಿಲ್ಲ. ಹಾಗಾಗಿ ಕಾರ್ಮಿಕ ಸಂಘಗಳು ದತ್ತಿ ಸಂಸ್ಥೆಗಳ ರೂಪದಲ್ಲಿ ನೋಂದಣಿಯಾಗಬೇಕಾಗಿತ್ತು. ಮೊದಲ ಬಾರಿಗೆ ಕಾಂಗ್ರೆಸ್ ಮುಖಂಡತ್ವದಲ್ಲಿ ಎ.ಎನ್.ರಾಮಶರ್ಮ ಮತ್ತು ಕೆ.ಟಿ. ಭಾಷ್ಯಂ ೧೯೨೦ರ ಪ್ರಾರಂಭದಲ್ಲಿ ಕೆಲಸಗಾರರನ್ನು ಸಂಘಟಿಸಿದರು. ನಂತರ ರಾಜಾ ಮಿಲ್ ಮತ್ತು ಮಿನರ್ವ ಮಿಲ್‌ಗಳ ನೌಕರರನ್ನು ಸಹ ಕಾಂಗ್ರೆಸ್ ಮುಖಂಡರು ಸಂಘಟಿಸಿದರು. ೧೯೨೯ರಲ್ಲಿ ಗಿರಣಿ ಕಾರ್ಮಿಕರ ಆದೇಶ ಮತ್ತು ಬೆಂಗಳೂರು ಟೆಕ್ಸ್‌ಟೈಲ್ ಟ್ರೇಡ್ ಯೂನಿಯನ್‌ಗಳು ಅಸ್ತಿತ್ವಕ್ಕೆ ಬಂದವು. ೧೯೪೧ ರಲ್ಲಿ ಮೊದಲ ಬಾರಿಗೆ ಮೈಸೂರು ಕಾರ್ಮಿಕ ಆದೇಶವನ್ನು ಹೊರಡಿಸಲಾಯಿತು. ಇದರ ಪ್ರಕಾರ ಕಾರ್ಮಿಕ ಸಂಘಗಳು ನ್ಯಾಯಬದ್ಧವಾದವೆಂದು ಮೊದಲ ಬಾರಿಗೆ ಪರಿಗಣಿಸಲಾಯಿತು. ನಂತರದ ವರ್ಷದಲ್ಲಿ ಇದು ಕಾನೂನು ಆಗಿ ಮಾರ್ಪಟ್ಟಿತು. ೧೯೪೬ರಲ್ಲಿ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಕಾರ್ಮಿಕ ಸಂಘವು ಇಂಜಿನಿಯರಿಂಗ್ ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕ ಸಂಘಟನೆಯನ್ನು ಪ್ರಾರಂಭ ಮಾಡಿ, ಕಾರ್ಮಿಕ ಸಂಘಟನೆಗಳ ಉದಯಕ್ಕೆ ನಾಂದಿ ಹಾಡಿತು.

೧೯೫೭ಕ್ಕಿಂತ ಮೊದಲಿನ ಕಾರ್ಮಿಕ ಸಂಘಗಳ ಸದಸ್ಯರ ಸಂಖ್ಯೆ ಅಲಭ್ಯ. ಆ ವರ್ಷ ೪೦೮ ಕಾರ್ಮಿಕ ಸಂಘಗಳು ನೋಂದಾಯಿಸಲ್ಪಟ್ಟವು. ಮುಂದಿನ ೧೯ ವರ್ಷಗಳಲ್ಲಿ ಇವುಗಳ ಸಂಖ್ಯೆ ದ್ವಿಗುಣವಾಗಿ ೯೫೫ ಕ್ಕೆ ಏರಿತು. ಸದಸ್ಯರ ಸಂಖ್ಯೆ ೧೯೫೭ ರಲ್ಲಿ ೧,೧೪,೦೦೦ ಇದ್ದದ್ದು ೧೯೭೫ ರಲ್ಲಿ ೨,೪೨,೦೦೦ ಕ್ಕೆ ಏರಿತು. ೧೯೮೦ ರ ಅಂತ್ಯದಲ್ಲಿ ಅತ್ಯಂತ ಹೆಚ್ಚಿನ ಕಾರ್ಮಿಕರ ಸದಸ್ಯತ್ವವನ್ನು ಹೊಂದಿದ್ದ ಮೂರು ಕಾರ್ಮಿಕ ಸಂಘಗಳೆಂದರೆ–ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಮಿಕ ಸಂಘ (೨೫,೪೯೦); ಹಿಂದೂಸ್ಥಾನ್ ಏರೋನಾಟಿಕ್ಸ್ ನೌಕರರ ಸಂಘ (೧೯,೨೧) ಹಾಗೂ ಭಾರತೀಯ ದೂರವಾಣಿ ನೌಕರರ ಸಂಘ (೧೫,೦೦೦). ಜಿಲ್ಲೆಯಲ್ಲಿ ೧೯೪೧ರ ವೇಳೆಗೆ ಮೊಟ್ಟ ಮೊದಲನೆಯ ಕಾರ್ಮಿಕ ಸಂಘವಾದ ಮೈಸೂರು ಮೈನ್ಸ್ ಲೇಬರ್ ಅಸೋಸಿಯೇಷನ್ ಪ್ರಾರಂಭವಾಯಿತು. ಇದರ ಅಧ್ಯಕ್ಷರು ವಿ.ಆರ್.ಕೆ.ಶರ್ಮ. ಸ್ವಾತಂತ್ರ್ಯದ ನಂತರ ಮೈಸೂರಿಗೆ ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ.ಚಂಗಲರಾಯ ರೆಡ್ಡಿಯವರು ಚಾಂಪಿಯನ್ ರೀಫ್ಸ್ ಮೈನ್ಸ್ ಲೇಬರ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದರು. ೧೯೫೨ ರಲ್ಲಿ ಬೀಡಿ ವರ್ಕರ್ಸ್ ಯೂನಿಯನ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್‌ಗೆ ಎಸ್. ಸವರಿದಾಸ್ ಅಧ್ಯಕ್ಷರಾದರು.

೧೯೪೬ ಫೆಬ್ರವರಿ ತಿಂಗಳಿನಲ್ಲಿ ನಂದಿ ದುರ್ಗ ಮೈನ್ ಲೇಬರ್ಸ್ ಅಸೋಸಿಯೇಷನ್ ೭೮ ದಿವಸಗಳ ದೀರ್ಘಕಾಲದ ಮುಷ್ಕರವನ್ನು ನಡೆಸಿದರು. ಇದರ ಮುಖಂಡರು ಕೆ.ಎಸ್.ವಾಸನ್ ಮತ್ತು ವಿ.ಎಂ.ಗೋವಿಂದನ್. ೧೯೪೬ ರಲ್ಲಿ ಉರಿಗಾಂ ಮೈನ್ ಲೇಬರ್ಸ್ ಅಸೋಸಿಯೇಷನ್‌ರವರು ಗಂಗಾಧರನ್‌ರವರ ನೇತೃತ್ವದಲ್ಲಿ ಮತ್ತೊಂದು ಮುಷ್ಕರ ನಡೆಸಿದರು.

**ಕಾರ್ಮಿಕರ ಶಿಕ್ಷಣ**

ಶಿಕ್ಷಣ ಪ್ರತಿಯೊಬ್ಬ ನಾಗರಿಕನ ಹಕ್ಕು. ಸುಸಂಸ್ಕೃತ ಸಮಾಜ ಸ್ಥಾಪನೆಗೆ ಹಾಗೂ ಔದ್ಯೋಗಿಕ ಶಾಂತಿ ಸ್ಥಾಪನೆಗೆ ಕಾರ್ಮಿಕ ಶಿಕ್ಷಣ ಅತ್ಯವಶ್ಯಕ. ಕಾರ್ಮಿಕ ವಲಯದಲ್ಲಿ ಶಿಕ್ಷಣದ ಬಗ್ಗೆ ಗಮನ ಹರಿಸುವಷ್ಟು ವ್ಯವಧಾನ ಹಾಗೂ ಸಮಯ ಕಾರ್ಮಿಕರಲ್ಲಿ ಇಲ್ಲವಾದುದರಿಂದ, ಸರಕಾರ ಕಾರ್ಮಿಕರ ಶಿಕ್ಷಣ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಕಾರ್ಮಿಕ ಶಿಕ್ಷಣದ ಸಮಸ್ಯೆಯನ್ನು ಕುರಿತು ಗಮನ ಹರಿಸಲಾಗಿದೆಯಲ್ಲದೆ ಕೇಂದ್ರ ಸರ್ಕಾರ ಫೋರ್ಡ್ ಫೌಂಡೇಶನ್ ಸಹಕಾರದೊಂದಿಗೆ ರಚಿಸಿದ ಅಂತರರಾಷ್ಟ್ರೀಯ ತಂಡವೊಂದು ಕಾರ್ಮಿಕ ಶಿಕ್ಷಣಕ್ಕಾಗಿ ಕೈಗೊಳ್ಳಬೇಕಾದ ಕಾರ್ಯವಿಧಾನವನ್ನು ಸೂಚಿಸಿದೆ.

ಕಾರ್ಮಿಕ ಶಿಕ್ಷಣದ ಮುಖ್ಯ ಉದ್ದೇಶವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಕಾರ್ಮಿಕರಿಗೆ ತಮ್ಮ ಕಾರ್ಯದ ಅರಿವನ್ನು ತಂದುಕೊಡುವುದು ಹಾಗೂ ಕಾರ್ಮಿಕ ಸಂಘಗಳಿಗೆ ಹೊರಗಿನ ವ್ಯಕ್ತಿಗಳನ್ನು ತಮ್ಮ ಸಹಾಯಕ್ಕೆ ಆಹ್ವಾನಿಸಿ ಅವರಿಂದ

ಶೋಷಣೆಗಳಿಗೆ ಒಳಗಾಗುವುದನ್ನು ತಪ್ಪಿಸುವುದು. ೧೯೫೮ರಲ್ಲಿ ಇಂಡಿಯನ್ ಲೇಬರ್ ಕಾನ್ಫರೆನ್ಸ್ ಸಮಿತಿ ಮಾಡಿದ ಸಲಹೆಯಂತೆ ಕೇಂದ್ರ ಸರ್ಕಾರವು ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್ ಎಂಬ ಅರೆ ಸ್ವಾಯತ್ತತೆ ಹೊಂದಿದ ಕಾರ್ಮಿಕ ಶಿಕ್ಷಣ ನಿಗಮವನ್ನು ರಚಿಸಿತು. ಇದು ಕೇಂದ್ರ, ರಾಜ್ಯ ಸರ್ಕಾರಗಳ ಮತ್ತು ಉದ್ಯಮಿ ಪ್ರತಿನಿಧಿಗಳೇ ಅಲ್ಲದೆ ವಿದ್ಯಾಪರಿಣತರಿಂದ ಕೂಡಿದ ನಿಗಮವಾಗಿತ್ತು. ಇವರು ವರ್ಷಕ್ಕೊಮ್ಮೆ ಸಭೆ ಸೇರಿ ವಾರ್ಷಿಕ ಆಯವ್ಯಯ ಪಟ್ಟಿ ಪರಿಶೀಲನೆ ಮತ್ತು ಪ್ರಗತಿಯ ಬಗ್ಗೆ ಚರ್ಚಿಸಬೇಕೆಂಬ ನಿಯಮ ಮಾಡಲಾಯಿತು.

**ಸೆಂಟ್ರಲ್ ಬೋರ್ಡ್ ಫಾರ್ ವರ್ಕರ್ಸ್ ಎಜುಕೇಷನ್:** ೧೬ನೇ ಸೆಪ್ಟೆಂಬರ್‌ನಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು. ದೇಶಾದ್ಯಂತ ಇದಕ್ಕಾಗಿ ನಿಯೋಜಿಸಿಕೊಂಡಿರುವ ೪೯ ಸ್ಥಾನಿಕ ನಿರ್ದೇಶಕರ ಪೈಕಿ ಕರ್ನಾಟಕದಲ್ಲಿ ಮೂರು ಮಂದಿ ಸ್ಥಾನಿಕ ನಿರ್ದೇಶಕರು ಕಾರ್ಯನಿರತರಾಗಿದ್ದಾರೆ. ಇವರ ಕಾರ್ಯವ್ಯಾಪ್ತಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ, ತುಮಕೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಇದ್ದು, ಇವರು ತರಬೇತಿ ಕಾರ್ಯಾಗಾರಗಳನ್ನು ನಡೆಸುತ್ತಾರೆ. ಕೋಲಾರ ಜಿಲ್ಲೆ ಕಾರ್ಮಿಕ ಸಂಪತ್ತಿನ ದೃಷ್ಟಿಯಿಂದ ಪ್ರಬಲ ಶಕ್ತಿಯನ್ನು ಹೊಂದಿದ್ದು ಎಲ್ಲಾ ಬಗೆಯ ಕಾರ್ಮಿಕರನ್ನು ಇಲ್ಲಿ ಕಾಣಬಹುದು. ಇಲ್ಲಿನ ಕಾರ್ಮಿಕರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಮೇಲ್ಕಂಡ ಸಂಸ್ಥೆ ವಿಭಿನ್ನ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಗ್ರಾಮಸ್ಥರಿಗೆ ಸಾಮಾಜಿಕ ಪ್ರಜ್ಞೆಯನ್ನುಂಟು ಮಾಡುವಂತಹ ಕಾರ್ಯಕ್ರಮಗಳು, ಅಸಂಘಟಿತ ಕಾರ್ಮಿಕ ಸಮೂಹಕ್ಕೆ ಬೇಕಾದ ವಿಶಿಷ್ಟ ರೀತಿಯ ಕಾರ್ಯಾಗಾರಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ವಿಶೇಷ ರೀತಿಯ ಕಮ್ಮಟಗಳನ್ನು ಮತ್ತು ತರಬೇತಿ ಶಿಬಿರಗಳನ್ನು ನಡೆಸಲಾಗಿದೆ. ಸಿ.ಬಿ.ಡಬ್ಲ್ಯೂ.ಇ, (ಸೆಂಟ್ರಲ್ ಬೋರ್ಡ್ ಆಫ್ ವರ್ಕರ್ಸ್ ಎಜುಕೇಶನ್) ಸಂಸ್ಥೆಯು ೨೦೦೧–೦೨ ರಿಂದ ೨೦೦೩–೦೪ ಈ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಕೈಗೊಂಡ ತರಬೇತಿ ಶಿಬಿರಗಳನ್ನು ಕೋಷ್ಟಕ ೧೬.೧೧ ರಲ್ಲಿ ನೀಡಿದೆ.

**ಕೋಷ್ಟಕ–೧೬.೧೧**

| ವರ್ಷ | ಕಾರ್ಮಿಕ ವಲಯ | ತರಬೇತಿ ಶಿಬಿರಗಳ ಸಂಖ್ಯೆ | ಭಾಗವಹಿಸಿದ ಕಾರ್ಮಿಕರ ಸಂಖ್ಯೆ |
|---|---|---|---|
| ೨೦೦೧–೦೨ | ಸಂಘಟಿತ ಕಾರ್ಮಿಕ ವಲಯ | | |
| | ಬೆಮೆಲ್ ಕೋಲಾರ | ೫ | ೧೧೫ |
| | ಅಸಂಘಟಿತ ಕಾರ್ಮಿಕ | | |
| | ವಲಯ (೧೫ ದಿನಗಳ ಶಿಬಿರ) | ೧ | ೪೦ |
| | ಗ್ರಾಮಾಂತರ ಕಾರ್ಮಿಕ ವಲಯ | ೩ | ೧೨೦ |
| ೨೦೦೨–೦೩ | ಸಂಘಟಿತ ಕಾರ್ಮಿಕ ವಲಯ | ೧೦ | ೨೨೩ |
| | ಅಸಂಘಟಿತ ಕಾರ್ಮಿಕ ವಲಯ | ೪ | ೧೫೨ |
| | ಗ್ರಾಮಾಂತರ ಕಾರ್ಮಿಕ ವಲಯ | ೫ | ೨೦೦ |
| ೨೦೦೨–೦೩ | ಸಂಘಟಿತ ಕಾರ್ಮಿಕ ವಲಯ | ೩ | ೬೭ |
| | ಅಸಂಘಟಿತ ಕಾರ್ಮಿಕ ವಲಯ | ೨ | ೮೦ |
| | ಗ್ರಾಮಾಂತರ ಕಾರ್ಮಿಕ ವಲಯ | ೯ | ೬೯ |
| ೨೦೦೩–೦೪ | ಸಂಘಟಿತ ಕಾರ್ಮಿಕ ವಲಯ | ೩ | ೬೭ |
| | ಅಸಂಘಟಿತ ಕಾರ್ಮಿಕ ವಲಯ | ೨ | ೮೦ |
| | ಗ್ರಾಮಾಂತರ ಕಾರ್ಮಿಕ ವಲಯ | ೯ | ೬೯ |

ಆಧಾರ: ವಲಯ ನಿರ್ದೇಶಕರು, ಸಿ.ಬಿ.ಡಬ್ಲ್ಯೂ.ಇ. ಬೆಂಗಳೂರು

## ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಜನಾಂಗದವರ ಕಲ್ಯಾಣ ಕಾರ್ಯಕ್ರಮಗಳು

೧೯೯೧ ರ ಜನಗಣತಿಯಂತೆ ಕೋಲಾರ ಜಿಲ್ಲೆಯ ಜನಸಂಖ್ಯೆಯು ೨೨,೧೬,೮೯೯ ಇದ್ದು, ಈ ಪೈಕಿ ೫,೭೦,೪೦೦ ಪರಿಶಿಷ್ಟ ಜಾತಿ ಮತ್ತು ೧,೫೫,೦೧೯ ಪರಿಶಿಷ್ಟ ವರ್ಗದವರಾಗಿದ್ದರು. ಪರಿಶಿಷ್ಟ ಜಾತಿಯ ಜನಸಂಖ್ಯೆಯು ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇಕಡವಾರು ೨೫.೭೨ ಮತ್ತು ಪರಿಶಿಷ್ಟ ವರ್ಗದ ಜನಸಂಖ್ಯೆ ಶೇಕಡವಾರು ೬.೯೦ ಆಗಿದ್ದಿತ್ತು. ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇ.೪೨.೩೪ ಆಗಿದ್ದು, ಪರಿಶಿಷ್ಟ ಜಾತಿಯವರ ಸಾಕ್ಷರತಾ ಪ್ರಮಾಣವು ಶೇ.೪೦ ಮತ್ತು ಪರಿಶಿಷ್ಟ ವರ್ಗದವರ ಸಾಕ್ಷರತಾ ಪ್ರಮಾಣವು ಶೇ.೩೨ ಆಗಿದ್ದಿತು. ಪರಿಶಿಷ್ಟ ಜಾತಿಯ ಪುರುಷರ ಸಾಕ್ಷರತಾ ಪ್ರಮಾಣವು ಶೇ.೨೦.೨೧ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ.೧೯.೭೯ ಆಗಿದ್ದಿತು. ಇದೇ ರೀತಿ ಪರಿಶಿಷ್ಟ ವರ್ಗದವರ ಪುರುಷರ ಸಾಕ್ಷರತಾ ಪ್ರಮಾಣ ಶೇ. ೧೬.೨೬ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. ೧೫.೭೪ ಆಗಿದ್ದಿತ್ತು. ೨೦೦೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ ೨೫,೩೬,೦೬೯ ಆಗಿದ್ದು ಈ ಪೈಕಿ ೬,೭೧,೬೯೨ ಪರಿಶಿಷ್ಟ ಜಾತಿ ಮತ್ತು ೨,೦೫,೭೧೧ ಪರಿಶಿಷ್ಟ ವರ್ಗದ ಜನರು ಇದ್ದರು. ಪರಿಶಿಷ್ಟ ಜಾತಿ ಜನಸಂಖ್ಯೆಯು ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇ.೨೬.೫ ಮತ್ತು ಪರಿಶಿಷ್ಟ ವರ್ಗದ ಜನಸಂಖ್ಯೆಯು ಶೇ.೮.೧ ಆಗಿದ್ದಿತು.

ಪ್ರಸ್ತುತ, ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ವರ್ಗದವರ ಶೈಕ್ಷಣಿಕ ಪ್ರಗತಿಗಾಗಿ ೬ ವಸತಿಶಾಲೆಗಳು, ಮೂರು ಮುರಾರ್ಜಿ ದೇಸಾಯಿ ಮಾದರಿ ವಸತಿಶಾಲೆಗಳು, ೯೪ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ ೩೧ ಕಾಲೇಜು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ೯೪ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪೈಕಿ ೭೪ ವಿದ್ಯಾರ್ಥಿ ನಿಲಯಗಳು ಬಾಲಕರಿಗೆ ಉಳಿದ ೨೪ ವಿದ್ಯಾರ್ಥಿನಿಯರಿಗಾಗಿವೆ. ವಿದ್ಯಾರ್ಥಿನಿಲಯಗಳಲ್ಲಿ ಬಾಲಕ-ಬಾಲಿಕೆಯರು ಸೇರಿ ೬,೮೯೬ ವಿದ್ಯಾರ್ಥಿಗಳು ಇದ್ದು, ವಸತಿನಿಲಯ ಹಾಗೂ ಮುರಾರ್ಜಿ ದೇಸಾಯಿ ವಸತಿಶಾಲೆಗಳಲ್ಲಿ ೫೦೨ ವಿದ್ಯಾರ್ಥಿಗಳು ಇದ್ದಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ೨೫ ಬಾಲಕರ ವಿದ್ಯಾರ್ಥಿನಿಲಯಗಳು, ೬ ಬಾಲಕಿ ವಿದ್ಯಾರ್ಥಿ ನಿಲಯಗಳು ಇದ್ದು, ಇವುಗಳಲ್ಲಿ ಒಟ್ಟು ೨೯೦೦ ವಿದ್ಯಾರ್ಥಿಗಳು ಸೌಲಭ್ಯ ಪಡೆಯುತ್ತಿದ್ದಾರೆ. ೨೦೦೨-೦೩ನೇ ಸಾಲಿಗೆ ೨೭೫.೧೭ ಲಕ್ಷ ರೂ.ಗಳನ್ನು ಯೋಜನಾ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಗಿದೆ. ಯೋಜನೇತರ ಕಾರ್ಯಕ್ರಮದಡಿ ೨೦೦೨-೦೩ನೇ ಸಾಲಿಗೆ ಜಿಲ್ಲೆಯಲ್ಲಿ ೮೫೮.೧೫ ಲಕ್ಷ ರೂ. ಖರ್ಚು ಮಾಡಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಇಲಾಖಾವತಿಯಿಂದ ಉಚಿತವಾಗಿ ಊಟ, ವಸತಿ, ಸಮವಸ್ತ್ರ ಪಠ್ಯಪುಸ್ತಕ, ಲೇಖನ ಸಾಮಗ್ರಿಗಳು, ಹಾಸಿಗೆ, ಹೊದಿಕೆ, ಸೋಪು, ಎಣ್ಣೆ ವೈದ್ಯಕೀಯ ಮತ್ತು ಪುಸ್ತಕ ಭಂಡಾರದ ನೆರವು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಡಿ ಜಿಲ್ಲೆಯಲ್ಲಿ ಮೂರು (ಮುರಾರ್ಜಿ ದೇಸಾಯಿ) ವಸತಿ ಶಾಲೆಗಳಿದ್ದು ಅವುಗಳಲ್ಲಿ ೩೭೫ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕೋಲಾರ, ಬಂಗಾರಪೇಟೆ ಹಾಗೂ ಗೌರಿಬಿದನೂರುಗಳಲ್ಲಿರುವ ವಸತಿಶಾಲೆಗಳು ಪ್ರತೀ ೧೨೫ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಿವೆ. ಈ ಶಾಲೆಗಳಲ್ಲಿ ಕೋಲಾರದ ಶಾಲೆ ಸ್ವಂತ ಕಟ್ಟಡ ಹೊಂದಿದ್ದು ಇನ್ನುಳಿದ ಎರಡು ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ಶಾಲೆ ನಡೆಸುತ್ತಿವೆ.

## ಆರ್ಥಿಕ ಅಭಿವೃದ್ಧಿ ಯೋಜನೆಗಳು

ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸ್ವಯಂ ಉದ್ಯೋಗ ಮಾಡಿ ಜೀವನ ನಡೆಸಲು ಅನುಕೂಲವಾಗುವಂತೆ ಇಲಾಖೆಯಿಂದ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಪ್ರತೀ ಕೇಂದ್ರದಲ್ಲೂ ಪ್ರತೀ ವರ್ಷ ೧೮ ರಿಂದ ೩೦ ವರ್ಷದ ವಯೋಮಿತಿಯೊಳಗಿನ ೨೦ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಕೋಲಾರ, ಬಂಗಾರಪೇಟೆ, ಬೇತಮಂಗಲ, (ಬಂಗಾರಪೇಟೆ ತಾಲೂಕು) ಚಿಕ್ಕಬಳ್ಳಾಪುರ ಹಾಗೂ ಚಿಂತಾಮಣಿ ಈ ಕೇಂದ್ರಗಳಲ್ಲಿ ತಲಾ ೨೦ ಮಹಿಳೆಯರಂತೆ ಒಟ್ಟು ೧೦೦ ಜನ ಫಲಾನುಭವಿಗಳಿದ್ದಾರೆ. ಇದರಲ್ಲಿ ೧೫ ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿದವರಾಗಿರುತ್ತಾರೆ. ಇತರೆ ಹಿಂದುಳಿದ ಜನಾಂಗಕ್ಕೆ ಸೇರಿದ ಐದು ಮಹಿಳೆಯರೂ ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶದವರು, ವಿಧವೆಯರು, ಅನಾಥರು ಹಾಗೂ ಅಂಗವಿಕಲರಿಗೆ ಇಲ್ಲಿ ಆದ್ಯತೆ ಉಂಟು. ಇವರಿಗೆ ತರಬೇತಿ ಭತ್ಯ ನೀಡಲಾಗುತ್ತದೆ. ತರಬೇತಿಯಲ್ಲಿ ಉತ್ತೀರ್ಣರಾದವರಿಗೆ ಉಚಿತವಾಗಿ ಒಂದು ಹೊಲಿಗೆ ಯಂತ್ರವನ್ನು ನೀಡಲಾಗುತ್ತದೆ.

ಮುರಾರ್ಜಿ ದೇಸಾಯಿ ಮಾದರಿಯ ವಸತಿ ಶಾಲೆಗಳನ್ನು ಜಿಲ್ಲೆಯ ಗಡಿವಾರಪಲ್ಲಿ (ಚಿಂತಾಮಣಿ ತಾ.), ಸೋಮಯಾಜಲಹಳ್ಳಿ (ಶ್ರೀನಿವಾಸಪುರ ತಾ.) ಮತ್ತು ಕೆಜಿಎಫ್ (ಬಂಗಾರಪೇಟೆ ತಾ.) ಗಳಲ್ಲಿ ಸ್ಥಾಪಿಸಿದ್ದು ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು ಕ್ರಮವಾಗಿ ೨೫೦, ೨೫೦ ಹಾಗೂ ೧೫೦ ಆಗಿದ್ದಿತು.

ಈ ಯೋಜನೆಯಡಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಹೆಚ್ಚುವರಿ ಭೋಜನ ವೆಚ್ಚ ನೀಡಿಕೆ, ಶುಲ್ಕ ವಿನಾಯಿತಿ (ಪ್ರೋತ್ಸಾಹ ಧನ ನೀಡಿಕೆ), ಬೆರಳಚ್ಚು, ಶೀಘ್ರಲಿಪಿ ಭತ್ಯೆ ಮತ್ತು ಕಾನೂನು ಪದವೀಧರರಿಗೆ ಶಿಷ್ಯ ವೇತನ ಅನುಷ್ಠಾನಗೊಳಿಸಲಾಗಿದೆ. ಕಂಗಾನಹಳ್ಳಿ (ಚಿಂತಾಮಣಿ ತಾ.) ನಲ್ಲಗುಟ್ಲಪಲ್ಲಿ (ಬಾಗೇಪಲ್ಲಿ ತಾ.) ಹಾಗೂ ವೆಂಕಟಾಪುರ (ಶಿಡ್ಲಘಟ್ಟ ತಾ.) ಗಳಲ್ಲಿ ಆಶ್ರಮಶಾಲೆಗಳಿದ್ದು, ಅವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯು ಕ್ರಮವಾಗಿ ೭೫, ೧೨೫ ಹಾಗೂ ೭೫ ಆಗಿದ್ದಿತು.

ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮೂರು ಇದ್ದು ಅವುಗಳಲ್ಲಿ ೧೫೦ ಜನ ಬಾಲಕ, ಬಾಲಕಿಯರು ದಾಖಲಾಗಿದ್ದಾರೆ.

**ಶಿಷ್ಯ ವೇತನದ ಯೋಜನೆ:** ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವುದಲ್ಲದೇ ಶುಲ್ಕದಲ್ಲಿ ವಿನಾಯಿತಿಯನ್ನು ಸರ್ಕಾರ ಕೊಟ್ಟಿದೆ. ಇದಲ್ಲದೆ, ಬೆರಳಚ್ಚು, ಶೀಘ್ರಲಿಪಿ ಕಲಿಯುವ ವಿದ್ಯಾರ್ಥಿಗಳಿಗೆ ಭತ್ಯೆ ಮತ್ತು ಕಾನೂನು ಪದವೀಧರರಿಗೆ ಶಿಷ್ಯ ವೇತನವನ್ನೂ ಸರ್ಕಾರ ನೀಡುತ್ತಿದೆ.

ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ವಿವರಗಳನ್ನು ಕೋಷ್ಟಕ ೧೬.೧೨ರಲ್ಲಿ ಕೊಟ್ಟಿದೆ.

**ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ಪರಿಹಾರ ಕಾರ್ಯಕ್ರಮ**

ದೌರ್ಜನ್ಯಕ್ಕೊಳಗಾದ ಅಮಾಯಕ ಪರಿಶಿಷ್ಟ ಜಾತಿ/ಪಂಗಡದವರಿಗೆ ೨೦೦೦ ರೂ. ಗಳಿಂದ ೨ ಲಕ್ಷ ರೂ.ಗಳವರೆಗೆ ನಷ್ಟದ ಪ್ರಮಾಣ ಅನುಸರಿಸಿ ಸಹಾಯಧನ ಮತ್ತು ಪುನರ್ವಸತಿ ನೀಡಲಾಗುವುದು. ದೌರ್ಜನ್ಯಕ್ಕೊಳಗಾದ ವ್ಯಕ್ತಿ ಮೃತನಾದರೆ ರೂ. ೨ ಲಕ್ಷವನ್ನೂ, ಶಾಶ್ವತ ಅಂಗವಿಕಲನಾದರೆ ರೂ. ೧,೦೦,೦೦೦ ವನ್ನೂ, ವಾಸದ ಮನೆ ಅಥವಾ ಇತರೆ ಆಸ್ತಿಗಳು ಹಾಳಾದರೆ ೨,೦೦೦ ರೂಪಾಯಿಗಳಿಂದ ೨೦,೦೦೦ ರೂಪಾಯಿಗಳವರೆಗೆ, ಅತ್ಯಾಚಾರಕ್ಕೆ ಒಳಗಾದರೆ ೫೦,೦೦೦ ರೂಪಾಯಿಗಳನ್ನು ಪರಿಹಾರ ನೀಡಲಾಗುತ್ತದೆ.

**ಕೋಷ್ಟಕ–೧೬.೧೩:**

೨೦೦೧–೦೨, ೨೦೦೨–೦೩ ರ ಅಂತ್ಯದವರೆಗೆ ದೌರ್ಜನ್ಯದಲ್ಲಿ ನೊಂದ ಸಂತ್ರಸ್ತರಿಗೆ ನೀಡಿದ ಪರಿಹಾರ ಧನದ ವಿವರ

| ಕ್ರ.ಸಂ | ವರ್ಷ | ಪ್ರಕರಣಗಳ ಸಂಖ್ಯೆ | ಮಂಜೂರು ಮಾಡಿರುವ ಪರಿಹಾರ ಧನ ರೂ. | ಬಾಕಿ ಪ್ರಕರಣಗಳ ಸಂಖ್ಯೆ | ಬೇಕಾದ ಪರಿಹಾರ ಧನ ರೂ.ಗಳಲ್ಲಿ |
|---|---|---|---|---|---|
| ೧ | ೨೦೦೧–೦೨ | ೯೯ | ೧೨,೦೦,೦೦೦.೦೦ | – | – |
| ೨ | ೨೦೦೨–೦೩ | ೭೯ | ೨೩,೫೦,೩೫೦.೦೦ | – | – |
| ೩ | ೨೦೦೩–೦೪ | ೮೪ | ೫,೦೪೨, ೭೫೦ | ೪೨ | ೩೩,೦೦,೦೦೦ |

ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ – ಕೋಲಾರ

**ಕೋಷ್ಟಕ–೧೬.೧೨**

| | | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | | | | ವಿದ್ಯಾರ್ಥಿಗಳ ಸಂಖ್ಯೆ | | | | | |
|---|---|---|---|---|---|---|---|---|---|---|---|---|---|
| ಕ್ರ. ಸಂ. | ತಾಲೂಕು | ಮೆಟ್ರಿಕ್ ಪೂರ್ವ | ಕಾಲೇಜು ವಿದ್ಯಾರ್ಥಿ ನಿಲಯ ಗಳು | ವಸತಿ ಶಾಲೆ ಗಳು | ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು | ಅನುದಾನಿತ ವಿದ್ಯಾರ್ಥಿ ನಿಲಯಗಳು | ಒಟ್ಟು | ಮೆಟ್ರಿಕ್ ಪೂರ್ವ | ಕಾಲೇಜು ವಿದ್ಯಾರ್ಥಿ ನಿಲಯ ಗಳು | ವಸತಿ ಶಾಲೆ ಗಳು | ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು | ಅನುದಾನಿತ ವಿದ್ಯಾರ್ಥಿ ನಿಲಯ ಗಳು | ಒಟ್ಟು |
| ೧. | ಕೋಲಾರ | ೧೩ | ೮ | ೧ | – | ೧ | ೨೩ | ೧೨೦ | ೧೨೩ | ೧೨೫ | – | ೨೫ | ೩೯೩ |
| ೨. | ಮಾಲೂರು | ೭ | ೩ | – | – | – | ೧೦ | ೫೭೦ | ೪೧೯ | – | – | – | ೯೮೯ |
| ೩. | ಶಿಡ್ಲಘಟ್ಟ | ೭ | ೧ | ೧ | – | – | ೯ | ೫೭೦ | ೧೭೨ | ೭೫ | – | – | ೮೧೭ |
| ೪. | ಬಂಗಾರಪೇಟೆ | ೧೪ | ೩ | ೧ | ೧ | ೨ | ೨೧ | ೭೭೫ | ೨೨೫ | ೧೨೫ | ೧೫೦ | ೨೦೦ | ೧೪೭೫ |
| ೫ | ಮುಳಬಾಗಿಲು | ೯ | ೩ | – | – | – | ೧೨ | ೭೭೫ | ೪೪೫ | – | – | – | ೧೨೨೦ |
| ೬ | ಶ್ರೀನಿವಾಸಪುರ | ೯ | ೩ | – | ೧ | – | ೧೩ | ೫೩೫ | ೫೨೫ | – | ೨೫೦ | – | ೧೩೧೦ |
| ೭ | ಚಿಂತಾಮಣಿ | ೧೩ | ೪ | ೧ | ೧ | ೧ | ೨೦ | ೮೬೫ | ೬೧೨ | ೭೫ | ೨೫೦ | ೫೦ | ೧೮೫೨ |
| ೮ | ಚಿಕ್ಕಬಳ್ಳಾಪುರ | ೫ | ೪ | – | – | – | ೯ | ೪೯೦ | ೪೯೬ | – | – | – | ೯೮೬ |
| ೯ | ಗೌರಿಬಿದನೂರು | ೯ | ೧ | ೧ | – | – | ೧೧ | ೬೬೨ | ೪೧೯ | ೧೨೫ | – | – | ೧೨೦೬ |
| ೧೦. | ಬಾಗೇಪಲ್ಲಿ | ೮ | ೩ | ೧ | – | ೨ | ೧೪ | ೫೯೫ | ೬೦೯ | ೧೨೫ | – | ೧೫೦ | ೧೪೭೯ |
| ೧೧. | ಗುಡಿಬಂಡೆ | ೫ | ೧ | – | – | – | ೬ | ೩೧೫ | ೮೫ | – | – | – | ೪೦೦ |
| | **ಒಟ್ಟು** | **೯೯** | **೩೪** | **೬** | **೩** | **೬** | **೧೪೮** | **೬೨೭೨** | **೪೧೩೦** | **೬೫೦** | **೬೫೦** | **೪೨೫** | **೧೨೧೨೭** |

ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಕೋಲಾರ

೧೯೬೧ ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೩,೯೯,೦೧೨ ಜನ ಪರಿಶಿಷ್ಟ ಜಾತಿ ಮತ್ತು ೩೮೭ ಜನ ಪರಿಶಿಷ್ಟ ವರ್ಗದವರು ಇದ್ದರು. ಪರಿಶಿಷ್ಟ ಜಾತಿಯವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ೮೩,೧೦೭ ಜನ ಬಂಗಾರಪೇಟೆಯಲ್ಲಿದ್ದು, ಕೆ.ಜಿ.ಎಫ್. ನಲ್ಲಿ ಇವರ ಒಟ್ಟು ಸಂಖ್ಯೆ ೫೪,೫೨೯ ಆಗಿದ್ದಿತು. ರಾಜ್ಯದ ಎಲ್ಲಾ ಕಡೆಯಂತೆ ಇಲ್ಲಿಯೂ ಪರಿಶಿಷ್ಟ ಜಾತಿಯವರ ಜೀವನ ಅತ್ಯಂತ ಕೆಳ ಮಟ್ಟದಲ್ಲಿತ್ತು. ಆರ್ಥಿಕ ಸ್ವಾವಲಂಬನೆ ಇಲ್ಲದೇ ಅವರು ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದರು. ಸ್ವಾತಂತ್ರ್ಯನಂತರದಲ್ಲಿ ಇವರ ಜೀವನಮಟ್ಟವನ್ನು ಸುಧಾರಿಸುವ ಸರ್ವಪ್ರಯತ್ನಗಳೂ ನಡೆದಿವೆ. ಇದಕ್ಕಾಗಿ ಹಲವಾರು ಕಾನೂನಿನ ರಕ್ಷಣೆಯನ್ನೂ ಇವರಿಗೆ ನೀಡಲಾಗಿದೆ.

**ಕೋಷ್ಟಕ–೧೬.೧೪:** ೧೯೬೧ರ ಜನಗಣತಿಯಂತೆ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನಸಂಖ್ಯೆಯ ವಿವರ

| ಕ್ರ ಸಂ | ತಾಲೂಕು | ಪರಿಶಿಷ್ಟ ಜಾತಿಯ ಸಂಖ್ಯೆ | ಪರಿಶಿಷ್ಟ ವರ್ಗದ ಸಂಖ್ಯೆ |
|---|---|---|---|
| ೧. | **ಬಾಗೇಪಲ್ಲಿ** | ೨೫,೯೯ | ೨೩ |
| ೨. | **ಬಂಗಾರಪೇಟೆ** | ೮೩,೧೦೭ | ೬೮ |
| ೩. | **ಚಿಕ್ಕಬಳ್ಳಾಪುರ** | ೨೧,೧೩೩ | ೭ |
| ೪. | **ಚಿಂತಾಮಣಿ** | ೨೭,೧೧೮ | ೧೮ |
| ೫ | **ಗೌರಿಬಿದನೂರು** | ೩೩,೫೩೭ | ೪೫ |
| ೬ | **ಗುಡಿಬಂಡೆ** | ೫೬೦೫ | – |
| ೭ | **ಕೋಲಾರ** | ೩೩,೩೩೫ | ೬೪ |
| ೮. | **ಮಾಲೂರು** | ೨೩,೩೧೧ | ೨೫ |
| ೯. | **ಮುಳಬಾಗಿಲು** | ೨೪,೪೦೨ | ೩೮ |
| ೧೦. | **ಶಿಡ್ಲಘಟ್ಟ** | ೧೯,೪೬೪ | ೩೮ |
| ೧೧. | **ಶ್ರೀನಿವಾಸಪುರ** | ೨೩,೦೯೧ | ೩೫ |
| | **ಒಟ್ಟು** | **೩,೯೯,೦೧೨** | **೩೬೭** |

೧೯೭೧ ರ ಜನಗಣತಿಯಂತೆ ಕರ್ನಾಟಕದಲ್ಲಿ ಒಂದು ನೂರು ಪರಿಶಿಷ್ಟ ಜಾತಿಗಳಿದ್ದವು ಎಂದು ತಿಳಿದುಬರುತ್ತದೆ. ಕೆಲವು ಜಾತಿಗಳನ್ನು ಆಯಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಮಾತ್ರ ಪರಿಶಿಷ್ಟ ಜಾತಿಗಳೆಂದು ಸರ್ಕಾರ ಘೋಷಿಸಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಹಲವಾರು ಸೌಲಭ್ಯಗಳನ್ನು ಕೇಂದ್ರಸರ್ಕಾರವು ಕಲ್ಪಿಸಿಕೊಟ್ಟಿದೆ. ಭಾರತದ ಸಂವಿಧಾನದಲ್ಲಿ ಅನೇಕ ಅನುಚ್ಛೇದಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣದ ಸಲುವಾಗಿ ರೂಪಿಸಲಾಗಿದೆ. ಸರ್ಕಾರದ ಕಛೇರಿಗಳಲ್ಲಿ ಇಂತಿಷ್ಟು ಜನರನ್ನು ಈ ವರ್ಗದಿಂದ ನೇಮಕ ಮಾಡಿಕೊಳ್ಳಲೇಬೇಕೆಂಬ ಕಡ್ಡಾಯವಿದೆ. ರಾಜಕೀಯ ಕ್ಷೇತ್ರದಲ್ಲಿ ಇವರಿಗೆ ಸ್ಥಾನವನ್ನು ಕಲ್ಪಿಸಿಕೊಡಲು ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಯೋಗ್ಯ ಪ್ರಾತಿನಿಧ್ಯವನ್ನು ನೀಡುವ ಆದೇಶವಿದೆ. ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಲ್ಯಾಣಾಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ೧೯೪೦ ರಷ್ಟು ಹಿಂದಿನಿಂದಲೇ ಈ ಕಾರ್ಯಕ್ರಮಗಳು ರೂಪಗೊಂಡರೂ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬಂದದ್ದು ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೇ. ಇವು ೧೯೫೨ರಲ್ಲಿ ಪ್ರಾರಂಭವಾದರೂ ೧೯೫೬ ರವರೆಗೆ ಇದಕ್ಕೆ ಸರಿಯಾದ ಒಂದು ರೂಪ ರೇಷೆ ಇರಲಿಲ್ಲ. ಕರ್ನಾಟಕದ ಏಕೀಕರಣದ ನಂತರ ಪರಿಶಿಷ್ಟ ಜಾತಿಗಳ ಸೇವಾಡಳಿತವನ್ನು ಸಮಾಜ ಕಲ್ಯಾಣ ಖಾತೆಗೆ ವಹಿಸಲಾಗಿದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಕೋಲಾರದಲ್ಲಿ ೧೯೭೫ ರಲ್ಲಿ ಪ್ರಾರಂಭವಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಸಂಸ್ಥೆಯ ಉದ್ದೇಶವಾಗಿದೆ. ಇದರೊಂದಿಗೆ ಅವರ ಆರ್ಥಿಕ ಅಭಿವೃದ್ಧಿಯ ಸಮೀಕ್ಷೆ ನಡೆಸುವುದೂ ಒಂದು ಕಾರ್ಯಕ್ರಮವಾಗಿರುತ್ತದೆ.

**ಕೋಲಾರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿಗಮದ ಚಟುವಟಿಕೆಗಳು**

ನಿಗಮವು ಈ ಮುಂದಿನ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ: ೧) ಸ್ವಯಂ ಉದ್ಯೋಗ ಯೋಜನೆ, ೨) ಐ.ಎಸ್.ಬಿ.ಯೋಜನೆ, ೩) ಭೂ ಒಡೆತನ ಯೋಜನೆ, ೪) ನೇರ ಸಾಲ ಯೋಜನೆ (ಎಸ್.ಎಸ್.ಎಫ್.ಡಿ.ಸಿ), ೫) ಹೈನುಗಾರಿಕೆ ಯೋಜನೆ, ೬) ಮೈಕ್ರೋಕ್ರೆಡಿಟ್ ಯೋಜನೆ, ೭) ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ, ೮) ಗಂಗಾ ಕಲ್ಯಾಣ ಯೋಜನೆ ಮತ್ತು ೯) ವೈಯಕ್ತಿಕ ನೀರಾವರಿ, ಕೊಳವೆ ಬಾವಿ ಯೋಜನೆ

**ಸ್ವಯಂ ಉದ್ಯೋಗ ಯೋಜನೆ :** ಯೋಜನಾ ವೆಚ್ಚ ೧ ಲಕ್ಷದೊಳಗಿನ ಘಟಕಗಳಿಗೆ ಬ್ಯಾಲರ್ ಮೂಲಕ ಆರ್ಥಿಕ ಸೌಲಭ್ಯವನ್ನು ಒದಗಿಸಿದೆ. ಶೇ.೫೦ ಭಾಗ (ಗರಿಷ್ಟ ೧೦,೦೦೦–೦೦ ರೂ.) ಸಹಾಯ ಧನವನ್ನು ಕೊಟ್ಟು ಉಳಿದ ಹಣವನ್ನು ಬ್ಯಾಂಕುಗಳಿಂದ ಮಂಜೂರು ಮಾಡಿಸುವುದು.

**ಐ.ಎಸ್.ಬಿ. ಉದ್ಯಮಶೀಲತಾ ಯೋಜನೆ**

ಸಣ್ಣ ಕೈಗಾರಿಕೆ, ಸರಕು ಸಾಗಣೆ ವಾಹನ, ಟ್ರಾಕ್ಟರ್, ವ್ಯಾಪಾರ ಮುಂತಾದ ಉದ್ದೇಶಗಳಿಗೆ ಬ್ಯಾಂಕ್ ಮೂಲಕ ಸಾಲ ಮಂಜೂರು ಮಾಡಿಸುವುದು. ಯೋಜನಾ ವೆಚ್ಚ ರೂ.೫೦,೦೦೦ ದಿಂದ ರೂ.೧೦ ಲಕ್ಷದವರೆಗೆ ಶೇ.೫ ಫಲಾನುಭವಿಯ ಪಾಲು, ಶೇ. ೨೦ ನಿಗಮದಿಂದ (ಗರಿಷ್ಟ ೧೦ ಲಕ್ಷ ರೂ.) ಉಳಿದ ಶೇಕಡ ೭೫ ಭಾಗ ಬ್ಯಾಂಕ್ ಸಾಲ ರೂಪದಲ್ಲಿ ನೀಡುವುದು. ಈ ಯೋಜನೆಯ ಫಲಾನುಭವಿಗಳಾಗಲು ವಾರ್ಷಿಕ ವರಮಾನ ರೂ.೪೦,೦೦೦ ಗ್ರಾಮೀಣ ಪ್ರದೇಶದವರಿಗೆ ಹಾಗೂ ರೂ.೫೫,೦೦೦ ನಗರ ಪ್ರದೇಶದವರಿಗೆ ನಿಗದಿಪಡಿಸಲಾಗಿದೆ.

**ಭೂ ಒಡೆತನ ಯೋಜನೆ:**

ಭೂ ರಹಿತ ಪರಿಶಿಷ್ಟ ಜಾತಿ, ವರ್ಗಗಳ ಕೃಷಿ ಕಾರ್ಮಿಕರಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನು ಗರಿಷ್ಟ ರೂ.೬೦,೦೦೦ ಗಳನ್ನು ಘಟಕ ವೆಚ್ಚವಾಗಿ ಸರ್ಕಾರ ನಿಗದಿಪಡಿಸಿದೆ. ಇದರಲ್ಲಿ ಶೇ.೫೦ ಹಣವನ್ನು ಸಾಲವಾಗಿ ಕೊಡಲಾಗುತ್ತದೆ.

**ನೇರಸಾಲ ಯೋಜನೆ** (ಎಸ್.ಎಸ್.ಎಫ್.ಡಿ.ಸಿ.): ಎಸ್.ಎಸ್.ಎಫ್.ಡಿ.ಸಿ. ನವದೆಹಲಿ ಸಹಯೋಗದೊಂದಿಗೆ ನಿಗಮವು ನೇರಸಾಲವನ್ನು ಮಂಜೂರು ಮಾಡುವ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಘಟಕ ವೆಚ್ಚ ಒಂದು ಲಕ್ಷ ರೂ.ದಿಂದ ೩೦ ಲಕ್ಷ ರೂ.ಗಳವರೆಗೆ ಇದ್ದು ಈ ಘಟಕ ವೆಚ್ಚದಲ್ಲಿ ಶೇ.೯೫ರಷ್ಟನ್ನು ಸಾಲವಾಗಿ ನಿಗಮವು ಮಂಜೂರು ಮಾಡುತ್ತದೆ. ಕೈಗಾರಿಕೆ, ವಾಣಿಜ್ಯ, ವಾಹನಖರೀದಿ ಮುಂತಾದ ಯೋಜನೆಗಳಿಗೆ ಇದು ಸಾಲವನ್ನು ಮಂಜೂರಿ ಮಾಡುತ್ತದೆ. ಘಟಕ ವೆಚ್ಚದಲ್ಲಿ ಶೇಕಡಾ ೫ರಷ್ಟು ಅರ್ಜಿದಾರರ ಪಾಲು ಇದ್ದು ಉಳಿದ ಹಣ ಸಾಲ ರೂಪದಲ್ಲಿ ವಾರ್ಷಿಕ ಬಡ್ಡಿ ಶೇ.೬ ರಿಂದ ೮ ಇರುತ್ತದೆ. **ಹೈನುಗಾರಿಕೆ ಯೋಜನೆ:** ಹಾಲು ಉತ್ಪಾದಕರ ಸಹಕಾರ ಸಂಘದ ಮೂಲಕ ಎಸ್.ಎಸ್.ಎಫ್.ಡಿ.ಸಿ. ಸಹಯೋಗದೊಂದಿಗೆ ಪ್ರತೀ ಫಲಾನುಭವಿಗೆ ಎರಡು ಸೀಮೆ ಹಸುಗಳನ್ನು, ರೂ.೩೫,೦೦೦ ಘಟಕ ವೆಚ್ಚದಲ್ಲಿ ಖರೀದಿಸಿ ಕೊಡಲಾಗುತ್ತದೆ. ಕೇಂದ್ರ ಕಛೇರಿಯಿಂದ ನಿಗದಿ ಪಡಿಸಿರುವಂತೆ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸಲಾಗುವುದು. **ಮೈಕ್ರೋ ಕ್ರೆಡಿಟ್ ಯೋಜನೆ:** ಎಸ್.ಎಸ್.ಎಫ್.ಡಿ.ಸಿ. ಸಹಯೋಗದೊಂದಿಗೆ ಸಾಲವನ್ನು ವೈಯಕ್ತಿಕ ಹಾಗೂ ಸ್ವಯಂಸೇವಾ ಸಂಘಗಳು ರೂ.೨೫,೦೦೦ ಘಟಕವೆಚ್ಚದಲ್ಲಿ ಸಾಲದ ಮೊತ್ತವನ್ನು ಮಂಜೂರು ಮಾಡಲಾಗುತ್ತದೆ. ಇದರಲ್ಲಿ ಎ.ಎಸ್.ಎಫ್.ಡಿ.ಸಿ. ರೂ.೧೫,೦೦೦ ಹಣವನ್ನೂ, ಉಳಿದ ರೂ.೧೦,೦೦೦ ಗಳನ್ನು ಸಹಾಯ ಧನವಾಗಿ ಕೊಡಲಾಗುತ್ತದೆ. **ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ:** ಸಫಾಯಿ ಕರ್ಮಚಾರಿಗಳ ಅವಲಂಬಿತರಿಗೆ ರೂ.೫೦,೦೦೦ ಗಳನ್ನು ಘಟಕ ವೆಚ್ಚದಲ್ಲಿ (ಶೇ.೫೦ ಭಾಗ), (೧೦,೦೦೦ ಗರಿಷ್ಠ) ಸಹಾಯ ಧನ ಶೇ.೧೫ (ಗರಿಷ್ಠ ರೂ.೭೫೦೦) ಅವಧಿ ಸಾಲವನ್ನು ಕೊಟ್ಟು ಉಳಿದ ಭಾಗವನ್ನು ಬ್ಯಾಂಕಿನಿಂದ ಸಾಲವಾಗಿ ದೊರಕಿಸುವ ವ್ಯವಸ್ಥೆ ಮಾಡಲಾಗುತ್ತದೆ. **ಗಂಗಾ ಕಲ್ಯಾಣ ಯೋಜನೆ ಈ ಯೋಜನೆಯಡಿ:** ಪರಿಶಿಷ್ಟ ಜಾತಿ ಅಥವಾ ವರ್ಗಗಳಿಗೆ ಸೇರಿದ ಫಲಾಪೇಕ್ಷಿಗಳಿಗೆ ೮ ಎಕರೆ ಜಮೀನು

ಒಂದೇ ಕಡೆ ಇದ್ದಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದು ಪಂಪ್ ಅಳವಡಿಸಿ ವಿದ್ಯುದೀಕರಣ ಮಾಡಲಾಗುತ್ತದೆ. ೧೫ ಎಕರೆ ಇದ್ದಲ್ಲಿ ೩ ಕೊಳವೆ ಬಾವಿ ಕೊರೆಸಿ ವಿದ್ಯುದೀಕರಣ ಮಾಡಲಾಗುತ್ತದೆ.

**ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ:** ೨ ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿ/ವರ್ಗದವರಿಗೆ ರೂ.೭೫,೦೦೦ ವೆಚ್ಚದಲ್ಲಿ ಕೊಳವೆ ಬಾವಿಯನ್ನು ಕೊರೆಸಿಕೊಡಲಾಗುತ್ತದೆ. ಇದರಲ್ಲಿ ರೂ.೬೫,೦೦೦ಗಳನ್ನು ಸಹಾಯ ಧನವನ್ನಾಗಿಯೂ ರೂ.೧೦,೦೦೦ಅನ್ನು ಸಾಲವಾಗಿಯೂ ನೀಡಲಾಗುತ್ತದೆ. (ಕೋಷ್ಟಕ ೧೬.೧೫).

## ಹಿಂದುಳಿದ ವರ್ಗಗಳ ಕಲ್ಯಾಣ

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನು ಭಾರತ ಸಂವಿಧಾನವು ಹಿಂದುಳಿದ ವರ್ಗ ಎಂದು ಪರಿಗಣಿಸುತ್ತದೆ. ಈ ಕಾರಣಕ್ಕಾಗಿ ಸಂವಿಧಾನವು ದೇಶದ ವಿವಿಧ ಭಾಗಗಳಲ್ಲಿನ ಹಿಂದುಳಿದ ವರ್ಗಗಳ ಸಾಮಾಜಿಕ ಪರಿಸ್ಥಿತಿಯನ್ನು ಪರಿಶೀಲಿಸಲು ನಿಯೋಗವನ್ನು ರಚಿಸಲು ರಾಷ್ಟ್ರಾಧ್ಯಕ್ಷರಿಗೆ ಹಕ್ಕನ್ನು ನೀಡಿದೆ. ಪರಿಚ್ಛೇದ ೧೫ (೪) – (೧೬) ರ ಪ್ರಕಾರ ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ನಿಯೋಗಗಳನ್ನು ರಚಿಸಿ ಅದರ ಮುಖಾಂತರ ಹಿಂದುಳಿದ ಜಾತಿಗಳು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಮೀಸಲಾತಿಯೇ ಮುಂತಾದ ಸವಲತ್ತುಗಳನ್ನು ಅವರಿಗೆ ನೀಡುವ ಜವಾಬ್ದಾರಿಯನ್ನು ಕೊಟ್ಟಿದೆ. ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ತಿಳಿಯಲು ೧೯೫೩ ಜನವರಿ ೨೯ ರಂದು ಕಾಕಾ ಕೇಲ್ಕರ್ ನಿಯೋಗವನ್ನು ಭಾರತದ ರಾಷ್ಟ್ರಾಧ್ಯಕ್ಷರು ನಿಯಮಿಸಿದರು. ಈ ನಿಯೋಗ ೨೩೭೯ ಜಾತಿಗಳನ್ನು ಹಿಂದುಳಿದ ವರ್ಗಗಳೆಂದು ಗುರುತಿಸಿ, ಇದು ಪ್ರಜಾ ಸಂಖ್ಯೆಯಲ್ಲಿ ಶೇ. ೭೧ ಆಗುತ್ತದೆ ಎಂದು ನಿರ್ಣಯಿಸಿತು. ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಸಂಸತ್ತಿನ ಸದಸ್ಯ ಬಿ.ಪಿ. ಮಂಡಲ್ ರವರನ್ನು ಅಧ್ಯಕ್ಷರನ್ನಾಗಿ ಮಾಡಿ ನಿಯೋಗಯೊಂದನ್ನು ರಚಿಸಿತು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಬೇಕಾದ ಅಂಶಗಳನ್ನು ಈ ನಿಯೋಗ ನಿರ್ಧರಿಸಿ, ಇವರನ್ನು ಸಮಾಜದ ಪ್ರಮುಖ ವಾಹಿನಿಗೆ ತರುವ ಯತ್ನ ಮಾಡಬೇಕೆಂದು ಹೇಳಿತು.

ಕರ್ನಾಟಕ ಸರ್ಕಾರವು ೧೯೫೮ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ ೭೫ ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗಗಳಿಗಾಗಿ ಮೀಸಲಿಡುವಂತೆ ಆದೇಶಿಸಿತು. ಆನಂತರ ೧೯೫೯ರಲ್ಲಿ ಹೊರಡಿಸಲಾದ ಆದೇಶದಲ್ಲಿ ಹಿಂದುಳಿದ ವರ್ಗದವರಿಗೆ ವಿದ್ಯಾ ಸಂಸ್ಥೆಗಳಲ್ಲಿ ಶೇ.೬೫ ಮೀಸಲಾತಿ ನೀಡಬೇಕೆಂದು ಘೋಷಿಸಲಾಯಿತು. ಉಚ್ಚ ನ್ಯಾಯಾಲಯವು ಈ ಆದೇಶವನ್ನು ಅನೂರ್ಜಿತಗೊಳಿಸಿದ್ದರಿಂದ ಆರ್.ನಾಗನಗೌಡ ಅಧ್ಯಕ್ಷತೆಯಲ್ಲಿ ೧೯೬೦ರಲ್ಲಿ, ಕರ್ನಾಟಕ ಸರ್ಕಾರವು ಹಿಂದುಳಿದ ಆಯೋಗವನ್ನು ಸ್ಥಾಪಿಸಿತು. ಈ ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರವು ೧೯೬೨ರಲ್ಲಿ ಹೊರಡಿಸಿದ ಮೀಸಲಾತಿ ಆದೇಶವನ್ನು ಶ್ರೇಷ್ಠ ನ್ಯಾಯಲಯವು ೧೯೬೩ರಲ್ಲಿ ಅನೂರ್ಜಿತಗೊಳಿಸಿತು. ಆನಂತರ ಎಲ್.ಜಿ.ಹಾವನೂರ್‌ರವರ ಅಧ್ಯಕ್ಷತೆಯಲ್ಲಿ, ೧೯೭೨ರಲ್ಲಿ ರಚಿತವಾದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು, ಹಿಂದುಳಿದ ವರ್ಗಗಳನ್ನು ಗುರುತಿಸಲು ಅತ್ಯಂತ ಪ್ರಾಮಾಣಿಕ ಪ್ರಯತ್ನ ನಡೆಸಿ, ೧೯೭೫ರಲ್ಲಿ ತನ್ನ ವರದಿ ಮಂಡಿಸಿತು. ಈ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ೧೯೭೭ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾದ ಒಂದು ಇಲಾಖೆಯನ್ನು ಪ್ರಾರಂಭಿಸಿತು. ಅದುವರೆಗೆ, ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿದ್ದ ಕಾರ್ಯಕ್ರಮಗಳು ಈ ಇಲಾಖೆಗೆ ವರ್ಗಾವಣೆಗೊಂಡವು. ಹಾವನೂರು ಆಯೋಗದ ವರದಿಯ ಮೇಲೆ ಜಾರಿಗೊಳಿಸಲಾದ ಮೀಸಲಾತಿಯ ವಿರುದ್ಧ ಅನೇಕ ಪ್ರತಿಭಟನೆಗಳು ಹಾಗೂ ತೀರ್ಪುಗಳು ಹೊರಬಂದ ಕಾರಣ, ನ್ಯಾಯಮೂರ್ತಿ ಬಿ.ವೆಂಕಟಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ೧೯೮೩ರಲ್ಲಿ, ಎರಡನೇ ಹಿಂದುಳಿದ ವರ್ಗಗಳ ಆಯೋಗ ಸ್ಥಾಪನೆಗೊಂಡಿತು. ಈ ಆಯೋಗ ೧೯೮೬ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಆದರೆ ಈ ವರದಿಯ ವಿರುದ್ಧವೂ ಪ್ರತಿಭಟನೆಯಾದುದರಿಂದ ಸರ್ಕಾರವು ಇದನ್ನು ಜಾರಿಗೊಳಿಸದೆ, ಹೊಸ ಆಯೋಗದಿಂದ ಮತ್ತೊಂದು ವರದಿಯು ಸಿದ್ಧಗೊಂಡು ಅನುಮೋದನೆಗೊಳ್ಳುವವರೆಗಿನ ಅವಧಿಗೆ ಒಂದು ಮಧ್ಯಂತರ ಆಜ್ಞೆಯನ್ನು ಅಕ್ಟೋಬರ್ ೧೯೮೬ರಲ್ಲಿ ಹೊರಡಿಸಿತು. ಆನಂತರ ನ್ಯಾಯಮೂರ್ತಿ ಓ.ಚಿನ್ನಪ್ಪರೆಡ್ಡಿಯವರ

**ಕೋಷ್ಟಕ ೧೬ . ೧೫**

**ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವಿವಿಧ ಯೋಜನೆಗಳಡಿ ಸಾಧಿಸಿದ ಪ್ರಗತಿ**

(ಲಕ್ಷ ರೂ.ಗಳಲ್ಲಿ)

| ಯೋಜನೆಯ ಹೆಸರು | ೨೦೦೧–೦೨ | | | | ೨೦೦೨–೦೩ | | | | ೨೦೦೩–೦೪ | | | |
|---|---|---|---|---|---|---|---|---|---|---|---|---|
| | ಫಲಾನುಭವಿಗಳ ಸಂಖ್ಯೆ | | ಸಹಾಯ ಧನ | | ಫಲಾನುಭವಿಗಳ ಸಂಖ್ಯೆ | | ಸಹಾಯ ಧನ | | ಫಲಾನುಭವಿಗಳ ಸಂಖ್ಯೆ | | ಸಹಾಯ ಧನ | |
| | ಪಜಾ | ಪವ | ಪಜಾ | ಪವ | ಪಜಾ | ಪವ | ಪಜಾ | ಪವ | ಪಜಾ | ಪವ | ಪಜಾ | ಪವ |
| ಸ್ವಯಂ ಉದ್ಯೋಗ ಯೋಜನೆ | ೫೪ | ೭೦ | ೩೨೫೨ | ೪.೧೨ | ೪೫೨ | ೪೭ | ೧೩.೭೬ | ೧೯೦ | ೨೦೭ | ೫೫ | ೧೫.೬೪ | ೨.೧೦ |
| ಐ.ಎಸ್.ಬಿ.ಯೋಜನೆ | ೧೪ | ೦೭ | ೦.೪೮ | – | ೧೩ | ೦೬ | – | – | ೧೪ | ೦೪ | ೯.೭೩ | ೩.೮೦ |
| ಭೂ ಒಡೆತನ ಯೋಜನೆ | ೪೮ | ೨೮ | ೧೨.೭೨ | ೭.೬೯ | ೫೭ | ೦೯ | ೧೫.೭೨ | ೨.೬೯ | ೬೬ | ೫೪ | ೩೬.೯೬ | ೧೯.೪೦ |
| ಸಫಾಯಿ ಕರ್ಮಚಾರಿ ಪುನರ್ ವಸತಿ ಯೋಜನೆ | ೬೨ | – | ೬.೧೦ | – | ೨೬ | – | ೨೬.೬೦ | – | ೩೬೧ | – | ೮೧.೯೬ | – |
| ನೇರಸಾಲ ಯೋಜನೆ | ೨೯ | ೦೩ | ೦.೨೦ | – | ೨೯೧ | ೦೩ | ೨೯.೧೦ | ೦.೩೦ | ೮೫ | ೩ | ೧೦೬.೯೫ | ೯.೯೩ |
| ಎ) ಗಂಗಾ ಕಲ್ಯಾಣ ಯೋಜನೆ | ೩೭ | ೦೬ | ೮೦.೩೭ | ೨೦.೦೮ | – | – | – | – | ೬೦ | ೧೦ | ೩೯.೦೦ | ೬.೫೦ |
| ಬಿ) ವೈಯಕ್ತಿಕ ಕೊಳವೆ ಬಾವಿ ಯೋಜನೆ | ೧೩೭ | ೪೪ | ೮೫.೪೮ | ೨೮.೬೦ | ೧೨೮ | ೩೮ | ೮೩.೨೦ | ೨೪.೭೦ | | | | |

ಆಧಾರ: ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಕೋಲಾರ

ಅಧ್ಯಕ್ಷತೆಯಲ್ಲಿ, ಮೂರನೇ ಹಿಂದುಳಿದ ವರ್ಗಗಳ ಏಕವ್ಯಕ್ತಿ ಆಯೋಗವನ್ನು ಮಾರ್ಚ್ ೧೯೮೮ರಲ್ಲಿ ರಚಿಸಿತು. ಈ ಆಯೋಗವು ಏಪ್ರಿಲ್ ೧೯೯೦ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ ಪ್ರತೀ ಜಾತಿ, ಮತ ಮತ್ತು ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ, ಬಡತನದ ಹಂತ, ಜೀವನರೀತಿ, ಹವ್ಯಾಸಗಳು ಇತ್ಯಾದಿಗಳನ್ನು ಗಮನದಲ್ಲಿರಿಸಿ ಏಪ್ರಿಲ್ ೧೯೯೪ ಮತ್ತು ಜುಲೈ ೧೯೯೪ ರಲ್ಲಿ ಮೀಸಲಾತಿ ನಿಯಮಾವಳಿಗಳ ಕುರಿತಂತೆ ಎರಡು ಸರ್ಕಾರಿ ಆದೇಶಗಳನ್ನು ಹೊರಡಿಸಿ, ಮೀಸಲಾತಿ ಪ್ರಮಾಣವನ್ನು ಮೊದಲೊಮ್ಮೆ ಶೇ.೫೭ಕ್ಕೆ, ಆನಂತರ ಶೇ.೭೩ಕ್ಕೆ ಹೆಚ್ಚಿಸಿತು. ಆದರೆ ಇದರಿಂದ ಅಸಮಾಧಾನಗೊಂಡ ಹಲವರು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದರು. ರಾಜ್ಯಗಳಲ್ಲಿನ ಮೀಸಲಾತಿಯು ಯಾವುದೇ ಸಂದರ್ಭದಲ್ಲಿಯೂ ಶೇ.೫೦ರ ಪ್ರಮಾಣವನ್ನು ಮೀರಬಾರದೆಂದು ಸರ್ವೋಚ್ಚ ನ್ಯಾಯಾಲಯವು ಸೆಪ್ಟೆಂಬರ್ ೧೯೯೪ರಲ್ಲಿ ಮಧ್ಯಂತರ ತೀರ್ಪು ನೀಡಿತು. ಈ ತೀರ್ಪಿಗೊಳಪಟ್ಟು ಸರ್ಕಾರವು ಆದೇಶ ಸಂಖ್ಯೆ ೧೫೦.ಬಿಸಿಎ. ೯೪ ದಿನಾಂಕ ೧೭–೯–೧೯೯೪ರ ಅನುಬಂಧದಲ್ಲಿ ಮುಂದೆ ತಿಳಿಸಿರುವಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗದಿಗೊಳಿಸಿದೆ. ಪ್ರವರ್ಗ–೧: ಶೇ.೪; ಪ್ರವರ್ಗ–೨ಎ: ಶೇ.೧೫; ಪ್ರವರ್ಗ–೨ಬಿ: ಶೇ.೪; ಪ್ರವರ್ಗ–೩ಎ: ಶೇ.೪; ಪ್ರವರ್ಗ–೩ಬಿ: ಶೇ.೫; ಪರಿಶಿಷ್ಟಜಾತಿ: ಶೇ.೧೫; ಪರಿಶಿಷ್ಟ ಪಂಗಡ: ಶೇ.೩; ಒಟ್ಟು ಶೇ.೫೦.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–೧ರ ಅಭ್ಯರ್ಥಿಗಳನ್ನು ಹೊರತುಪಡಿಸಿ ರಾಜ್ಯಾಧೀನ ಸೇವೆಗಳಲ್ಲಿ, ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ಯಮಗಳಲ್ಲಿ, ರಾಜ್ಯ ಸರ್ಕಾರದ ಅನುದಾನಿತ, ಮಾನ್ಯತೆ ಪಡೆದ ಸಂಸ್ಥೆಗಳ, ನೇಮಕಾತಿಯಲ್ಲಿ ಮೀಸಲಾತಿಯ ಪ್ರಯೋಜನ ಪಡೆಯಲು ಅಭ್ಯರ್ಥಿಯ ತಂದೆ ತಾಯಿ ಅಥವಾ ಪೋಷಕರು ಈ ಕೆಳಕಂಡ ಉದ್ಯೋಗ ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಅರ್ಹರಾಗಿರುವುದಿಲ್ಲ. ಅಂದರೆ ೧, ಅಭ್ಯರ್ಥಿಯ ತಂದೆ ತಾಯಿ ಅಥವಾ ಪೋಷಕರು ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೇ ದರ್ಜೆಯ ಪತ್ರಾಂಕಿತ ಅಧಿಕಾರಿಗಳಾಗಿ ಸೇವೆಸಲ್ಲಿಸುತ್ತಿದ್ದಲ್ಲಿ, ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮವಾದ ಹುದ್ದೆಗಳನ್ನು ಹೊಂದಿದ್ದಲ್ಲಿ, ಅಥವಾ ಖಾಸಗಿ ಕೈಗಾರಿಕೆ ಸಂಸ್ಥೆಗಳ ಉದ್ಯೋಗಿಯಾಗಿದ್ದು ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆ ಇಲ್ಲದ ವೇತನ ಶ್ರೇಣಿಯನ್ನು ಪಡೆಯುತ್ತಿದ್ದಲ್ಲಿ; ೨. ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ; ೩. ಮಾರಾಟ ತೆರಿಗೆ ಪಾವತಿದಾರರಾಗಿದ್ದಲ್ಲಿ; ೪. ಎಂಟು ಹೆಕ್ಟೇರ್ ಮಳೆ ಆಧಾರಿತ ಅಥವಾ ಒಣ ಭೂಮಿ ಅಥವಾ ಸಮಾನಾಂತರ ತರಿ/ಬಾಗಾಯ್ತು ಜಮೀನು (ಭೂ ಸುಧಾರಣಾ ಕಾಯ್ದೆ ಮೇರೆಗೆ) ಹೊಂದಿದ್ದಲ್ಲಿ. ಮೇಲ್ಕಂಡ ವರ್ಗಗಳಲ್ಲಿ ವರ್ಗೀಕರಿಸಲಾದ ಉದ್ಯೋಗಸ್ಥರು, ಜಮೀನುದಾರರು, ಮೀಸಲಾತಿಯ ಪ್ರಯೋಜನ ಪಡೆಯುವಂತಿಲ್ಲ.

**ಕಲ್ಯಾಣ ಕಾರ್ಯಕ್ರಮಗಳು:** ಹಿಂದುಳಿದ ವರ್ಗಗಳ ಇಲಾಖೆಯು ಈ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ಇವನ್ನು ಈ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ.

**ಕೋಲಾರ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:** ಜಿಲ್ಲೆಯಲ್ಲಿ ೫೨ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಎಂಟು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಿವೆ. ಒಟ್ಟು ಅರವತ್ತು ನಿಲಯಗಳಿದ್ದು ಅವುಗಳಲ್ಲಿ ೨,೮೫೦ ಬಾಲಕರು, ೪೦೦ ಬಾಲಕಿಯರು ಇದ್ದಾರೆ. ಒಟ್ಟು ೩,೨೫೦ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿ, ಸಮವಸ್ತ್ರ ಪಠ್ಯಪುಸ್ತಕ, ಲೇಖನ ಸಾಮಗ್ರಿ, ಹಾಸಿಗೆ, ಸೋಪು, ಎಣ್ಣೆಗಳನ್ನು ಇಲಾಖೆಯಿಂದ ನೀಡಲಾಗುತ್ತಿದೆ. ಇದರೊಂದಿಗೆ ವೈದ್ಯಕೀಯ ನೆರವು, ಕ್ರೀಡಾ ಸಾಮಗ್ರಿಗಳನ್ನೂ ನೀಡಲಾಗುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ ೨೦೦೦–೦೧, ೨೦೦೧–೦೨ ೨೦೦೨–೦೩ ಮತ್ತು ೨೦೦೩–೦೪ರಲ್ಲಿ ಮೆಟ್ರಿಕ್ ಪೂರ್ವ ಬಾಲಕರು ಬಾಲಕಿಯರ ಹಾಗೂ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೧೬.೧೬ರಲ್ಲಿ ಕೊಟ್ಟಿದೆ.

**ಕೋಷ್ಟಕ ೧೬.೧೬**

| ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳು | ಬಾಲಕರ ಸಂಖ್ಯೆ | ಬಾಲಕಿಯರ ಸಂಖ್ಯೆ | ಒಟ್ಟು ನಿಲಯಗಳು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ಖರ್ಚು ಲಕ್ಷ ರೂ. ಗಳಲ್ಲಿ |
|---|---|---|---|---|---|---|
| ೨೦೦೦-೦೧ | ೫೨ | ೩೭೬೦ | ೩೫೦ | ೫೯ | ೪೧೧೦ | ೨೪೮.೧೨೩ |
| ೨೦೦೧-೦೨ | ೫೨ | ೩೦೪೫ | ೪೦೦ | ೬೦ | ೩೪೪೫ | ೨೫೭.೦೭೦ |
| ೨೦೦೨-೦೩ | ೫೨ | ೩೩೫೦ | ೪೦೦ | ೬೦ | ೩೭೫೦ | ೨೬೪.೩೨೮ |

ಆಧಾರ: ಜಿಲ್ಲಾಧಿಕಾರಿಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೋಲಾರ

೨೦೦೦–೦೧ರಿಂದ ೨೦೦೨–೦೩ರವರೆಗಿನ ಮೂರು ವರ್ಷಗಳ ಜಿಲ್ಲೆಯಲ್ಲಿಯ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ ಹಾಗೂ ಸುಧಾರಣೆಗಾಗಿ ಮಾಡಿದ ವೆಚ್ಚದ ವಿವರ ಕೋಷ್ಟಕ ೧೬.೧೭ರಲ್ಲಿ ನೀಡಿದೆ.

**ಕೋಷ್ಟಕ ೧೬.೧೭**

| ವರ್ಷ | ಮೆಟ್ರಿಕ್ ಪೂರ್ವನಿಲಯಗಳ ನಿರ್ವಹಣೆ | | ಮೆಟ್ರಿಕ್ ಪೂರ್ವ ನಿಲಯಗಳ ಸುಧಾರಣೆಗೆ ಮಾಡಿದ ವೆಚ್ಚ | |
|---|---|---|---|---|
| | ವೆಚ್ಚ (ಲಕ್ಷ ರೂ.ಗಳಲ್ಲಿ) | ನಿಲಯಗಳ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) | ನಿಲಯಗಳು |
| ೨೦೦೦-೦೧ | ೨೧೮.೭೫ | ೫೯ | ೫೦೦ | ೩ |
| ೨೦೦೧-೦೨ | ೨೫೩.೪೮ | ೬೦ | ೪.೯೯ | ೪೪ |
| ೨೦೦೨-೦೩ | ೨೮೨.೨೬ | ೬೦ | ೩೨೫ | ೭ |

ಆಧಾರ: ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೋಲಾರ

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :**

ಜಿಲ್ಲೆಯಲ್ಲಿ ಆರು ಮೆಟ್ರಿಕ್ ನಂತರದ ಬಾಲಕರ ಮತ್ತು ನಾಲ್ಕು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಿವೆ. ಈ ಹತ್ತು ನಿಲಯಗಳಲ್ಲಿ ೪೦೦ ಬಾಲಕರು, ೨೪೦ ಬಾಲಕಿಯರು ಇದ್ದಾರೆ. ಒಟ್ಟು ೬೪೦ ವಿದ್ಯಾರ್ಥಿಗಳಿಗೆ ಉಚಿತ ಊಟ–ವಸತಿಗಳನ್ನು ಒದಗಿಸಲಾಗುತ್ತಿದೆ.

ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಗೆ ಇಲ್ಲಿಯವರೆಗೆ ಸರ್ಕಾರ ಮಾಡಿದ ವೆಚ್ಚ ಹಾಗೂ ಫಲಾನುಭವಿಗಳ ಸಂಖ್ಯೆಯನ್ನು ಕೋಷ್ಟಕ ೧೬.೧೮ರಲ್ಲಿ ನೀಡಿದೆ.

**ಕೋಷ್ಟಕ ೧೬.೧೮**

| ಕ್ರ.ಸಂ. | ವಿವಿಧ ಯೋಜನೆಗಳು | ವೆಚ್ಚ ರೂ. ಲಕ್ಷಗಳು | ಫಲಾನುಭವಿಗಳ ಸಂಖ್ಯೆ |
|---|---|---|---|
| ೧ | **ಕಾನೂನು ಪದವೀಧರರಿಗೆ ತರಬೇತಿ ಭತ್ಯೆ** | ೨.೮೬ | ೯ |
| ೨ | **ಮಾಂಗಲ್ಯ ಭಾಗ್ಯ** | ೨.೧೦ | ೪೨ |
| ೩ | **ಬೆರಳಚ್ಚು–ಕಂಪ್ಯೂಟರ್ ತರಬೇತಿ** | ೦.೪೩ | ೨೧ |
| | **ಒಟ್ಟು** | **೫.೩೯** | **೭೨** |

ಆಧಾರ: ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೋಲಾರ

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮತ್ತು ಬಾಲಕ, ಬಾಲಕಿಯರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೧೬.೧೯ ಕೊಡಲಾಗಿದೆ.

**ಕೋಷ್ಟಕ ೧೬.೧೯**

| ಕ್ರಸಂ | ವರ್ಷ | ಬಾಲಕರ ವಿದ್ಯಾರ್ಥಿ ನಿಲಯಗಳು | | ಬಾಲಕಿಯರ ವಿದ್ಯಾರ್ಥಿ ನಿಲಯಗಳು | |
|---|---|---|---|---|---|
| | | ಸಂಖ್ಯೆ | ಬಾಲಕರ ಸಂಖ್ಯೆ | ಸಂಖ್ಯೆ | ಬಾಲಕಿಯರ ಸಂಖ್ಯೆ |
| ೧ | ೨೦೦೦-೦೧ | ೩೫೦ | ೧೫೦ | ೨೦೦ | – |
| ೨ | ೨೦೦೧-೦೨ | ೩೫೦ | ೧೫೦ | ೨೦೦ | ೪೦ |
| ೩. | ೨೦೦೨-೦೩ | ೩೫೦ | ೨೦೦ | ೨೦೦ | ೪೦ |
| ೪. | ೨೦೦೩-೦೪ | ೩೫೦ | ೨೦೦ | ೨೦೦ | ೪೦ |

ಆಧಾರ: ಜಿಲ್ಲಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೋಲಾರ

**ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರ:** ಜಿಲ್ಲೆಯಲ್ಲಿ ಎರಡು ಮಹಿಳಾ ಶ್ರೇಯೋಭಿವೃದ್ಧಿ ಕೇಂದ್ರಗಳಿದ್ದು, ಅಲ್ಲಿರುವ ಮಕ್ಕಳಿಗೆ ಮಧ್ಯಾಹ್ನದ ಊಟ, ಸಮವಸ್ತ್ರ ಆಟಿಕೆ ಸಾಮಾನುಗಳನ್ನು ಒದಗಿಸಿ ಅಕ್ಷರಾಭ್ಯಾಸವನ್ನು ಮಾಡಿಸಲಾಗುತ್ತಿದೆ.

**ಹೊಲಿಗೆ ತರಬೇತಿ ಕೇಂದ್ರ:** ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳೆಯರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಅನುಕೂಲವಾಗುವಂತೆ ಅವರಿಗೆ ಬೇಕಾದ ತರಬೇತಿ ನೀಡಲು ಕೋಲಾರದಲ್ಲಿ ಒಂದು ಹೊಲಿಗೆ ತರಬೇತಿ ಕೇಂದ್ರವಿದೆ. ಇಲ್ಲಿ ನಿರುದ್ಯೋಗಿ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ತರಬೇತಿ ನೀಡಿ ಮಾಹೆಯಾನ ತಲಾ ರೂ.೩೦೦ರಂತೆ ಸ್ಟೈಫಂಡ್ ಕೊಡಲಾಗುತ್ತಿದೆ. ಹೊಲಿಗೆ ತರಬೇತಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ಕೊಡುವ ವ್ಯವಸ್ಥೆ ಇದೆ. ಈ ಕೇಂದ್ರದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ನಿಲಯಗಳ ವಿದ್ಯಾರ್ಥಿಗಳಿಗೆ ಬೇಕಾದ ಸಮವಸ್ತ್ರಗಳನ್ನು ಈ ಮಹಿಳೆಯರು ಹೊಲಿಯುತ್ತಾರೆ.

**ಖಾಸಗಿ ಅನುದಾನಿತ ನಿಲಯಗಳು:** ಜಿಲ್ಲೆಯಲ್ಲಿ ಎರಡು ಖಾಸಗಿ ವಿದ್ಯಾರ್ಥಿ ನಿಲಯಗಳಿದ್ದು, ಹಿಂದುಳಿದ ವರ್ಗಗಳ ೧೧೦ ಬಾಲಕರು, ಅಲ್ಪಸಂಖ್ಯಾತ ಸಮುದಾಯದ ೫೦ ಬಾಲಕರು, ಒಟ್ಟು ೧೬೦ ವಿದ್ಯಾರ್ಥಿಗಳು ಇದ್ದು, ಊಟದ ವೆಚ್ಚಕ್ಕಾಗಿ ಮಾಹೆಯಾನ ತಲಾ ರೂ.೩೫೦ ಅನುದಾನ ಮಂಜೂರು ಮಾಡಲಾಗುತ್ತದೆ. ಹನೀಫಿಯಾ ಸೋಷಿಯಲ್ ವಿದ್ಯಾ ಸಂಸ್ಥೆ, ಮಂಡಿಕಲ್ ಇವರು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯವನ್ನು ನಿರ್ವಹಿಸುತ್ತಿದ್ದಾರೆ. ಈ ಕಟ್ಟಡ ನಿರ್ಮಿಸಲು ರೂ.೧.೦೦ ಲಕ್ಷ ಸಹಾಯ ಧನವನ್ನು ಇಲಾಖೆಯು ಮಂಜೂರು ಮಾಡಿದೆ.

**ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ನಿಲಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರಾತಿ:** ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತ ಇಲಾಖೆಯಿಂದ ನಡೆಸಲ್ಪಡುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೂ ಅನುದಾನಿತ ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ ಆಶ್ರಯ ಹೊಂದಿದ್ದು ಯಾವುದೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದರೂ, ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರೆ ಅಂತಹ ವಿದ್ಯಾರ್ಥಿಗಳಿಗೆ ತಲಾ ರೂ.೭೫ ರಿಂದ ರೂ.೪೦೦ರವರೆಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾಗುವುದು.

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಿಕೆ:** ಜಿಲ್ಲೆಯ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ೫ ರಿಂದ ೧೦ ರವರೆಗಿನ ತರಗತಿಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ತಲಾ ರೂ.೭೫ ಮತ್ತು ರೂ.೨೦೦ ರಂತೆ ವಿದ್ಯಾರ್ಥಿವೇತನವನ್ನು ಇಲಾಖೆಯಿಂದ ಮಂಜೂರು ಮಾಡಲಾಗುತ್ತಿದೆ.

**ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡಿಕೆ:** ಜಿಲ್ಲೆಯ ಕಾಲೇಜುಗಳಲ್ಲಿ ಪಿ.ಯು.ಸಿ., ಪದವಿ, ವೃತ್ತಿಪರ ಮತ್ತು ತಾಂತ್ರಿಕ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ.೩೦೦ರಿಂದ ರೂ.೫೦೦ರ ದರದಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

**ಹೆಚ್ಚುವರಿ ಭೋಜನ ವೆಚ್ಚ ಮಂಜೂರಾತಿ:** ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ೫ ಕಿ.ಮೀ. ದೂರದಿಂದ ಕಾಲೇಜುಗಳಿಗೆ ಬಂದು, ಕೇಂದ್ರ ಸ್ಥಾನದಲ್ಲಿ ವಾಸವಿರುವ ಹಿಂದುಳಿದ ವರ್ಗಗಳ ಪ್ರವರ್ಗ–೧ ರ ವಿದ್ಯಾರ್ಥಿಗಳಿಗೆ ಮಾಹೆಯಾನ ತಲಾ ರೂ.೨೦೦ ರಂತೆ ಹೆಚ್ಚುವರಿ ಭೋಜನ ವೆಚ್ಚ ಮಂಜೂರು ಮಾಡಲಾಗುವುದು. ಅದೇ ರೀತಿ ತಾಂತ್ರಿಕ ಕೋರ್ಸುಗಳಾದ ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಬಿ.ಇ., ಹೋಮಿಯೋಪತಿ ಮತ್ತು ಯುನಾನಿ ಕೋರ್ಸುಗಳಲ್ಲಿ ಅಧ್ಯಯನ ಮಾಡುವ ಹಿಂದುಳಿದ ವರ್ಗಗಳ ೨ಎ,೨ಬಿ,೩ಎ,೩ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾಹೆಯಾನ ರೂ.೨೦೦ ರಂತೆ ೧೦ ತಿಂಗಳ ಅವಧಿಗೆ ಊಟದ ವೆಚ್ಚ ನೀಡಲಾಗುವುದು.

**ಶುಲ್ಕ ವಿನಾಯತಿ ಮರುಪಾವತಿ:** ಜಿಲ್ಲೆಯ ಶಾಲೆಗಳಲ್ಲಿ ೧೦ ನೇ ತರಗತಿ ಹಾಗೂ ಕಾಲೇಜುಗಳಲ್ಲಿನ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.೧೧೦೦೦ ಒಳಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನಿಗಧಿ ಪಡಿಸಿದ ಶುಲ್ಕವನ್ನು ಈ ಇಲಾಖೆಯಿಂದ ಮಂಜೂರು ಮಾಡಿ ಶಿಕ್ಷಣ ಸಂಸ್ಥೆಗಳಿಗೆ ಮರುಪಾವತಿಸಲಾಗುವುದು.

**ಬೆರಳಚ್ಚು – ಶೀಘ್ರಲಿಪಿ ತರಬೇತಿ:** ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಮಾಹೆಯಾನ ತಲಾ ರೂ.೫೦ ರಿಂದ ೧೦ ತಿಂಗಳಿಗೆ ಶಿಷ್ಯ ವೇತನ ಮಂಜೂರು ಮಾಡಲಾಗುವುದು.

**ತಾಂತ್ರಿಕ ಕಾಲೇಜು**ಗಳಲ್ಲಿ ಐ.ಟಿ.ಐ. ಡಿಪ್ಲೋಮಾ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿದ್ದರೆ ಅವರಿಗೆ ಮಾಹೆಯಾನ ತಲಾ ರೂ.೧೫೦ ರಂತೆ ೧೦ ತಿಂಗಳಿಗೆ ಶಿಷ್ಯ ವೇತನ ಮಂಜೂರು ಮಾಡಲಾಗುವುದು.

**ಕಾನೂನು ಪದವೀಧರರಿಗೆ ಶಿಷ್ಯ ವೇತನ:** ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರು ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಪಡೆದು ವಕೀಲ ವೃತ್ತಿಯನ್ನು ಉತ್ತಮ ಪಡಿಸಿಕೊಳ್ಳಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ತರಬೇತಿ ಪಡೆಯುವ ಕಾನೂನು ಪದವೀಧರರಿಗೆ ಮಾಹೆಯಾನ ತಲಾ ರೂ.೧೦೦೦ ದಂತೆ ನಾಲ್ಕು ವರ್ಷಗಳ ಅವಧಿಗೆ ಶಿಷ್ಯವೇತನ ಮಂಜೂರು ಮಾಡಲಾಗುತ್ತಿದೆ.

**ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿ ನಿಲಯಗಳ ಸುಧಾರಣೆ:** ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ಇಲಾಖಾ ವಿದ್ಯಾರ್ಥಿ ನಿಲಯಗಳಿಗೆ ಅತ್ಯವಶ್ಯಕವಾಗಿ ಬೇಕಾದ ಪಾತ್ರೆ ಪೀಠೋಪಕರಣ, ಹಾಸಿಗೆ, ಡೈನಿಂಗ್ ಟೇಬಲ್ ಇತ್ಯಾದಿಗಳನ್ನು ಒದಗಿಸುವುದನ್ನು ಸುಧಾರಣಾ ಕಾರ್ಯಕ್ರಮದಲ್ಲಿ ಮಾಡಲಾಗುವುದು.

**ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ:** ಜಿಲ್ಲೆಯಲ್ಲಿ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ನಿಲಯಗಳಿಗೆ ಸೂಕ್ತವಾದ ಕಟ್ಟಡಗಳನ್ನು ನಿರ್ಮಿಸಲು ಮತ್ತು ಈಗಿರುವ ಸ್ವಂತ ಕಟ್ಟಡಗಳನ್ನು ದುರಸ್ತಿ ಪಡಿಸಲು ಕಟ್ಟಡಗಳ ನಿರ್ಮಾಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಬೆಳ್ಳಿ ಬೆಳಕು ಕಾರ್ಯಕ್ರಮ:** ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿರುವ ಹಿಂದುಳಿದ ಪ್ರದೇಶಗಳಲ್ಲಿನ ಕುಗ್ರಾಮಗಳಲ್ಲಿ ವಾಸಿಸುವ ಪ್ರವರ್ಗ–೧ ರ ಜನರಿಗೆ ಮನೆ, ಶೌಚಾಲಯ, ರಸ್ತೆ ಚರಂಡಿ, ವಿದ್ಯುದ್ದೀಪ, ಸಮುದಾಯ ಭವನವನ್ನು ನಿರ್ಮಿಸಿ ಮಾದರಿ ಗ್ರಾಮವನ್ನಾಗಿ ಮಾಡುವ ಯೋಜನೆಯೇ ಬೆಳ್ಳಿಬೆಳಕು ಕಾರ್ಯಕ್ರಮ.

**ಮಾಂಗಲ್ಯ ಭಾಗ್ಯ ಕಾರ್ಯಕ್ರಮ:** ಹಿಂದುಳಿದ ವರ್ಗಗಳ ಪ್ರವರ್ಗ–೧ ಮತ್ತು ಪ್ರವರ್ಗ–೨ (ಎ) ರಲ್ಲಿ ಬರುವ ಜನಾಂಗದವರ ಜ್ಯೇಷ್ಠ ಪುತ್ರಿಗೆ ರೂ.೫೦೦೦ ರಂತೆ ಸಹಾಯ ಧನ ಮಂಜೂರು ಮಾಡಲಾಗುತ್ತಿದೆ.

ಪ್ರಧಾನ ಮಂತ್ರಿಗಳ ೧೫ ಅಂಶಗಳ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮದಲ್ಲಿ ಅಲ್ಪ ಸಂಖ್ಯಾತರ ವರ್ಗಗಳಿಗೆ ಸೇರಿದ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಕ್ಕರು, ಪಾರ್ಸಿಗಳು, ಆಂಗ್ಲೋ ಇಂಡಿಯನ್ ಜನಾಂಗದವರಿಗೆ ಕಲ್ಪಿಸಿದ ಸೌಲಭ್ಯಗಳು ಅವರ ರಕ್ಷಣೆ ಕುರಿತ ಕಾರ್ಯಕ್ರಮಗಳ ಬಗ್ಗೆ ವಿಚಾರ ಗೋಷ್ಠಿ ಹಾಗೂ ಡಿ. ದೇವರಾಜ ಅರಸು ಅವರ ಹುಟ್ಟುಹಬ್ಬದ ದಿನಾಚರಣೆಯನ್ನು ನೆರವೇರಿಸುವ ಕಾರ್ಯಕ್ರಮವೂ ಇದೆ.

**ಕೋಷ್ಟಕ ೧೬.೨೦**

ವಿವಿಧ ಪ್ರವರ್ಗಗಳಿಗೆ ೨೦೦೦–೦೧, ೨೦೦೧–೦೨ ಮತ್ತು ೨೦೦೨–೦೩ ನೇ ಸಾಲುಗಳಲ್ಲಿ ಆದ ಖರ್ಚಿನ ವಿವರ

| ವರ್ಗ | ವರ್ಷ | ಮೊತ್ತ ಲಕ್ಷ ರೂ. ಗಳಲ್ಲಿ | ಫಲಾನುಭವಿಗಳು |
|---|---|---|---|
| **೨ಎ, ೨ಬಿ, ೩ಎ, ೩ಬಿ** | ೨೦೦೦–೦೧ | ೧೫೪.೦೪ | ೩೫೬ |
| **೨ಎ, ೨ಬಿ, ೩ಎ, ೩ಬಿ** | ೨೦೦೧–೦೨ | ೧೭೮.೩೧೬ | ೨೫೦ |
| **೨ಎ, ೨ಬಿ, ೩ಎ, ೩ಬಿ** | ೨೦೦೨–೦೩ | ೨೧೮.೨೬ | ೩೦೯ |

೨೦೦೦–೦೧ ಹಾಗೂ ೨೦೦೧–೦೨ನೇ ಸಾಲಿನಲ್ಲಿ ಭೋಜನ ವೆಚ್ಚ ಪಡೆದ ಬಾಲಕ, ಬಾಲಕಿಯರ ಸಂಖ್ಯೆ ಹಾಗೂ ಒಟ್ಟು ವೆಚ್ಚವು ಕ್ರಮವಾಗಿ ೨೨೨ ಹಾಗೂ ೨.೨೨ ಲಕ್ಷ ರೂ.ಗಳಾಗಿದೆ.

**ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ**

ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ ೫೨ರಷ್ಟು ಇರುವ ಹಿಂದುಳಿದ ವರ್ಗಗಳ ಜನರಿಗೆ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವನ್ನು ಕಲ್ಪಿಸಿ, ಅವರನ್ನು ಸ್ವಯಂ ಉದ್ಯೋಗಿಗಳಾಗಿಸುವುದು ಹಾಗೂ ಈ ವರ್ಗದ ಜನರು ವೃತ್ತಿ ಕುಶಲತೆ ಬೆಳೆಸಿಕೊಂಡು, ಸ್ವಯಂ ಉದ್ಯೋಗಿಗಳಾಗಲು ಅಗತ್ಯವಿರುವ ತರಬೇತಿ ನೀಡುವ ಮತ್ತು ಆರ್ಥಿಕ ಅಸಮಾನತೆಗೆ ಒಳಗಾದ ಈ ದುರ್ಬಲ ವರ್ಗಗಳ ಜನರ ಸರ್ವಾಂಗೀಣ ಅಭಿವೃದ್ಧಿಯ ಉದ್ದೇಶದಿಂದ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ೧೯೭೭ರಲ್ಲಿ ಸ್ಥಾಪನೆಗೊಂಡಿತು. ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ರಿಯಾಯಿತಿ ಬಡ್ಡಿದರದಲ್ಲಿ ಸಾಲಸೌಲಭ್ಯ ಒದಗಿಸುವುದು ಮತ್ತು ನಿರುದ್ಯೋಗಿ ಯುವಕರಿಗೆ ವೃತ್ತಿಕುಶಲತೆ ಬೆಳೆಸಿಕೊಳ್ಳಲು ನಿಗಮವು ವಿವಿಧ ಯೋಜನೆಯಡಿ ನೆರವು ಒದಗಿಸುತ್ತಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕೋಲಾರ ಜಿಲ್ಲಾ ಕಚೇರಿಯು ಜಿಲ್ಲಾ ವ್ಯವಸ್ಥಾಪಕರ ನೇತೃತ್ವದಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

೧) ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ, ೨) ಗಂಗಾಕಲ್ಯಾಣ ನೀರಾವರಿ ಯೋಜನೆ, ೩) ವೃತ್ತಿಪರ ತರಬೇತಿ ಕಾರ್ಯಕ್ರಮಗಳು, ೪) ಅರಿವು ಯೋಜನೆ, ೫) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಗಳು (೨೦೦೩ನೇ ಸಾಲಿನಿಂದ) ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅವಧಿ ಸಾಲ ಯೋಜನೆಯಡಿ ಈ ಮುಂದಿನ ವಲಯ ಯೋಜನೆಗಳಿಗೆ ಸಾಲಸೌಲಭ್ಯ ಕಲ್ಪಿಸಲಾಗಿದೆ. ೧) ವ್ಯವಸಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು, ೨) ಕುಶಲಕರ್ಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ೩) ಸೇವಾವಲಯ ೪) ಸಾರಿಗೆ ವಲಯ ಹಾಗೂ ನ್ಯೂ ಸ್ವರ್ಣಿಮಾ ಯೋಜನೆ (ಮಹಿಳೆಯರಿಗೆ ಮಾತ್ರ).

ಪ್ರಾರಂಭಗೊಂಡಾಗಿನಿಂದಲೂ, ಈ ನಿಗಮವು ಹಿಂದುಳಿದ ವರ್ಗಗಳ ಕುಶಲಕರ್ಮಿಗಳಿಗೆ ಹಾಗೂ ಗ್ರಾಮೀಣ ಗುಡಿ ಕೈಗಾರಿಕೆಗಳಿಗೆ ಆರ್ಥಿಕ ನೆರವಾಗಿ ಚೈತನ್ಯ ಸಾಫ್ಟ್ ಲೋನ್ ಸ್ಕೀಂ, ವೃತ್ತಿ ತರಬೇತಿ, ವಾಹನಚಾಲನೆ, ಕಂಪ್ಯೂಟರ್ ಫೋರ್‌ಮನ್‌ಶಿಪ್, ಎಲೆಕ್ಟ್ರಾನಿಕ್ ಸರ್ವಿಸಿಂಗ್ ಅಂಡ್ ರಿಪೇಯರ್ಸ್, ಗಂಗಾಕಲ್ಯಾಣ ಹಾಗೂ ಅರಿವು ಈ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕೋಲಾರವು ವಿವಿಧ ಯೋಜನೆಯಡಿ ೨೦೦೦-೨೦೦೧ ರಿಂದ ೨೦೦೩-೨೦೦೪ರವರೆಗಿನ ಸಾಲುಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೋಷ್ಟಕ ೧೬.೨೧ರಲ್ಲಿ ನೀಡಿದೆ.

**ಕೋಷ್ಟಕ ೧೬.೨೧**

| ಕ್ರ. ಸಂ. | ಯೋಜನೆಗಳು | ೨೦೦೦-೦೧ | | ೨೦೦೧-೦೨ | | ೨೦೦೨-೦೩ | | ೨೦೦೩-೦೪ | |
|---|---|---|---|---|---|---|---|---|---|
| | | ಸಾಧನೆ | ಆರ್ಥಿಕ ಲಕ್ಷ ರೂ. | ಸಾಧನೆ | ಆರ್ಥಿಕ ಲಕ್ಷ ರೂ. | ಸಾಧನೆ | ಆರ್ಥಿಕ ಲಕ್ಷ ರೂ. | ಸಾಧನೆ | ಆರ್ಥಿಕ ಲಕ್ಷ ರೂ. |
| ೧ | ನೇರಸಾಲ | ೬೨ | ೪೬.೪೫ | ೭೦ | ೨೯.೯೯ | ೩ | ೧೪.೨೨ | ೪೯ | ೨೩.೨೫ |
| ೨ | ನ್ಯೂ ಸ್ವರ್ಣಿಮಾ | – | – | – | – | ೧೧೩ | ೧೧.೩ | ೩೬೫ | ೪೯.೪೩ |
| ೩ | ಕಂಪ್ಯೂಟರ್ ತರಬೇತಿ | ೧೫ | – | – | – | ೧೦ | ೧.೧೦ | – | – |
| ೪ | ವಾಹನ ತರಬೇತಿ | | | | | | | | |
| ೫ | ಚೈತನ್ಯ (ಬ್ಯಾಂಕ್ ಮೂಲಕ ಸಾಲ ವಿವರಣೆ) | ೭೦೨ | ೩೧೪೯ | ೫೨೬ | ೧೪೫೩ | ೩೫೭ | ೧೩೦.೪೮ | ೫೯೨ | ೬೮.೧ |
| ೬ | ಗಂಗಾಕಲ್ಯಾಣ | | | | | | | | |
| | ೧) ವೈಯಕ್ತಿಕ ವರ್ಗ-೧ | – | – | ೬ | ೭೪೯ | ೧೨ | ೭೮೦ | ೩೧ | ೧೩೬ |
| | ೨) ಸಾಮೂಹಿಕ ವರ್ಗ ೩ಎ ವರ್ಗ ೩ಬಿ | – | – | ೬ | ೭೪೯ | – | – | ೬ | ೩೧೨ |
| | ಒಟ್ಟು | ೮೬ | ೩೬೨.೦೮ | ೬೪೮ | ೧೯೦.೯೭ | ೫೪೪ | ೧೬೫.೬೬ | ೭೪೪ | ೧೯ |

ಮೂಲ: ಜಿಲ್ಲಾ ವ್ಯವಸ್ಥಾಪಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕೋಲಾರ

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ೧೯೮೬ರಲ್ಲಿ ಸ್ಥಾಪನೆಗೊಂಡಿದೆ. ಮತೀಯ ಅಲ್ಪ ಸಂಖ್ಯಾತರಾದ ಮುಸ್ಲಿಮರು, ಕ್ರಿಶ್ಚಿಯನ್ನರು, ಜೈನರು, ಬೌದ್ಧರು, ಸಿಖ್ಖರು, ಪಾರ್ಸಿಗಳು ಮತ್ತು ಆಂಗ್ಲೋ ಇಂಡಿಯನ್ ಜನಾಂಗದವರ ಏಳಿಗೆಗಾಗಿ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವುದು ನಿಗಮದ ಉದ್ದೇಶವಾಗಿದೆ. ಸ್ವಾವಲಂಬನೆ ಸಾಫ್ಟ್ ಲೋನ್ ಯೋಜನೆ, ವೃತ್ತಿ ತರಬೇತಿ ಯೋಜನೆ ಹಾಗೂ ಗಂಗಾಕಲ್ಯಾಣ ಯೋಜನೆ ಮುಂತಾದ ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಿಗಮದ್ದಾಗಿದೆ.

**ಸ್ವಾವಲಂಬನ ಸಾಫ್ಟ್ ಲೋನ್ ಯೋಜನೆ:** ಅಲ್ಪಸಂಖ್ಯಾತರು ಕೈಗೊಳ್ಳುವ ವ್ಯಾಪಾರ ಸೇವಾ ಉದ್ದಿಮೆಗಳು, ಕೈಗಾರಿಕೆಗಳು ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳ ಮೂಲಕ ರೂ. ಒಂದು ಲಕ್ಷದವರೆಗಿನ ವೆಚ್ಚವಾಗುವ ಯೋಜನೆಗಳಿಗೆ ಸಾಲ ಸೌಲಭ್ಯ ಒದಗಿಸಿಕೊಡಲಾಗುತ್ತದೆ. ಈ ಸೌಲಭ್ಯ ಪಡೆಯುವ ಫಲಾನುಭವಿಗಳ ಕುಟುಂಬದ ವಾರ್ಷಿಕ ವರಮಾನವು ೨೨,೦೦೦ ರೂ. ಮೀರಿರಬಾರದು. ಯೋಜನಾ ವೆಚ್ಚದ ಶೇಕಡಾ ೨೦ ಭಾಗದ ಹಣವನ್ನು ನಿಗಮವು ಮಾರ್ಜಿನ್ ಹಣ ಸಾಲದ ರೂಪದಲ್ಲಿ ಮಂಜೂರು ಮಾಡುವುದು ಹಾಗೂ ಯೋಜನಾ ವೆಚ್ಚದಲ್ಲಿ ಶೇ.೫೦ರಷ್ಟು

ಅಥವಾ ಗರಿಷ್ಟ ೫೦೦೦ ರೂ.ಗಳಷ್ಟು ಧನಸಹಾಯವನ್ನು ಪ್ರತಿ ಫಲಾನುಭವಿಗೆ ಮಂಜೂರು ಮಾಡಲಾಗುವುದು. ಮಾರ್ಜಿನ್ ಹಣ ಸಾಲಕ್ಕೆ ಶೇಕಡಾ ೭ರಷ್ಟು ಬಡ್ಡಿದರವನ್ನು ನಿಗಮವು ವಿಧಿಸುವುದು.

**ತರಬೇತಿ ಯೋಜನೆಗಳು:** ನಿಗಮವು ನಿರುದ್ಯೋಗ ವಿದ್ಯಾವಂತ ಯುವಕರಿಗೆ ಹಾಗೂ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವೃತ್ತಿ ತರಬೇತಿ ಯೋಜನೆಗಳಲ್ಲಿ ಕಂಪ್ಯೂಟರ್ ತರಬೇತಿ, ಫೋರ್‌ಮನ್ ತರಬೇತಿ ವಾಹನ ಚಾಲನ ತರಬೇತಿ, ಟೈಲರಿಂಗ್, ಎಂಬ್ರಾಯಿಡರಿ, ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್, ಬೂಟು ತಯಾರಿಕೆ, ಚರ್ಮದ ಬಟ್ಟೆ ತಯಾರಿಕೆ, ಫ್ಯಾಶನ್ ಡಿಸೈನಿಂಗ್ ತಯಾರಿಕಾ ತಂತ್ರಜ್ಞಾನ, ರೇಷ್ಮೆ ಹಾಗೂ ಹತ್ತಿ ಬಟ್ಟೆ ನೇಯ್ಗೆ ಈ ಕಸುಬುಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದಕ್ಕೆ ಸರ್ಕಾರವು ಅನುದಾನ ನೀಡುತ್ತಿದೆ.

**ಗಂಗಾ ಕಲ್ಯಾಣ ಯೋಜನೆ:** ಮತೀಯ ಅಲ್ಪಸಂಖ್ಯಾತರಲ್ಲಿ ಇಬ್ಬರಿಂದ ನಾಲ್ಕು ಜನರಿರುವ ರೈತರುಗಳಿಗೆ ಕನಿಷ್ಠ ಎಂಟು ಎಕರೆ ಜಮೀನು ಇರುವ ಇಬ್ಬರಿಂದ ನಾಲ್ಕು ಜನರ ಕುಟುಂಬದವರಿಗೆ, ಎರಡು ಕೊಳವೆ ಬಾವಿ ತೆಗೆಯಲು ತಗಲುವ ವೆಚ್ಚ ಹಾಗೆಯೇ ೮ ರಿಂದ ೧೫ ಎಕರೆ ಜಮೀನು ಇರುವವರಿಗೆ, ಮೂರು ಕೊಳವೆ ಬಾವಿ ಕೊರೆಯಲು ಹಾಗೂ ಸಂಪೂರ್ಣ ನೀರಾವರಿ ಸೌಲಭ್ಯ ಪಡೆದುಕೊಳ್ಳಲು ಆಗುವ ವೆಚ್ಚವನ್ನು ನಿಗಮ ಅನುದಾನ ರೂಪದಲ್ಲಿ ಒದಗಿಸುತ್ತವೆ. ನೆಲಮಟ್ಟದಲ್ಲಿ ದೊರೆಯುವ ನದಿ, ಹಳ್ಳಗಳಿಂದ ದೊರೆಯುವ ನೀರನ್ನು ಏತ ನೀರಾವರಿ ಯೋಜನೆ ಮೂಲಕ ಗಂಗಾ ಕಲ್ಯಾಣ ಯೋಜನೆಯಡಿ ಅಳವಡಿಸಿ, ಯೋಜನೆಗೆ ತಗಲುವ ಸಂಪೂರ್ಣ ವೆಚ್ಚವನ್ನು ಧನಸಹಾಯರೂಪದಲ್ಲಿ ನಿಗಮ ನೀಡುವುದು. ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕ ಕಚೇರಿಯಿಂದ ಆಯ್ಕೆಗೊಂಡ ೨ರಿಂದ ೪ ಎಕರೆ ಜಮೀನು ಹೊಂದಿರುವವರು ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿ ಒಂದು ಕೊಳವೆ ಬಾವಿ ಕೊರೆದು, ಪಂಪನ್ನು ಅಳವಡಿಸಿಕೊಡಲು ಆಗುವ ವೆಚ್ಚವನ್ನು ಧನಸಹಾಯ ರೂಪದಲ್ಲಿ ಪಡೆಯುವರು, ಆದರೆ ಈ ಮೊತ್ತ ೬೫,೦೦೦ ರೂ.ಗಳಿಗೆ ಮೀರಬಾರದು.

ಅರಿವು ಯೋಜನೆಯಡಿ ವೃತ್ತಿಪರ ವಿದ್ಯಾಭ್ಯಾಸಕ್ಕಾಗಿ ಅಂದರೆ ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಹಾಗೂ ಬಿ.ಡಿ.ಎಸ್ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ೨೫,೦೦೦ ರೂ. ಸಾಲ ಸೌಲಬ್ಯ ಒದಗಿಸಲಾಗುವುದು. ವಿದ್ಯಾಭ್ಯಾಸ ಪೂರ್ಣಗೊಂಡ ನಂತರ ನಿಗಮದಿಂದ ಪಡೆದ ಸಾಲವನ್ನು ಶೇ. ಎರಡರ ಬಡ್ಡಿದರದಲ್ಲಿ ಮನಿ ಪಾವತಿ ಮಾಡಬೇಕಾಗುವುದು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಕೋಲಾರವು ಕೋಲಾರ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಡಿ ೨೦೦೨–೦೩ ಹಾಗೂ ೨೦೦೩–೦೪ ಸಾಲಿನಲ್ಲಿ ಸಾಧಿಸಿದ ಪ್ರಗತಿ ವಿವರವನ್ನು ಕೋಷ್ಟಕ ೧೬.೨೨ರಲ್ಲಿ ನೀಡಿದೆ.

**ಕೋಷ್ಟಕ ೧೬.೨೨**

| ಕ್ರ.ಸಂ. | ಯೋಜನೆಗಳು | ವರ್ಷಗಳು | | | | | |
|---|---|---|---|---|---|---|---|
| | | ೨೦೦೨–೦೩ | | | ೨೦೦೩–೦೪ | | |
| | | ಗುರಿ | ಸಾಧನೆ | ಆರ್ಥಿಕ | ಗುರಿ | ಸಾಧನೆ | ಆರ್ಥಿಕ |
| ೧ | ೨ | ೩ | ೪ | ೫ | ೬ | ೭ | ೮ |
| ೧) | **ಸ್ವಾವಲಂಬನೆ** | ೩೩೦ | ೧೯ | ೨೦.೩೦ | ೧೬೩ | ೧೨೫ | ೧೫.೯ |
| ೨) | **ವಾಹನ ತರಬೇತಿ** | ೪೦ | ೪೦ | ೧.೨೫ | ೪೦ | ೪೦ | ೦.೭೬ |
| ೩) | **ಕಂಪ್ಯೂಟರ್ ತರಬೇತಿ** | ೧೮ | ೧೮ | ೦.೯೭ | ೨೫ | – | – |
| ೪) | **ಜರಿ ಮತ್ತು ಎಂಬ್ರಾಯಿಡರಿ ತರಬೇತಿ** | – | – | – | ೧೦ | ೨೦ | ೦.೩೬ |
| ೫) | **ನೇರ ಸಾಲ** | – | ೨೪ | ೧೦.೫೦ | ೧೦ | ೩೯ | ೧೪.೦೯ |
| ೬) | **ಅರಿವು ಸಾಲ** | ೨೦ | ೮ | ೩.೮೫ | ೩೫ | ೫೯ | ೧೧.೦೫ |

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ೭) | ಗಂಗಾ ಕಲ್ಯಾಣ | | | | | | |
| | ವೈಯಕ್ತಿಕ | ೨೦ | ೮ | ೫೨೦ | ೧೧ | ೧೧ | ೬೫ |
| | ಸಾಮೂಹಿಕ | ೩೦ | ೨ | ೫೦೬ | ೨ | – | – |
| ೮) | ಆಟೋರಿಕ್ಷಾ | ೫ | ೫ | ೩೨೫ | – | – | – |
| ೯) | ಮೈಕ್ರೋಲೋನ್ | – | – | – | ೯೮ | ೨೬ | ೨೪೭ |
| | ಒಟ್ಟು | ೪೩೬ | ೨೪ | ೫೦೩೮ | ೪೧೩ | ೩೯ | ೫೦೫೨ |

ಮೂಲ: ಜಿಲ್ಲಾ ವ್ಯವಸ್ಥಾಪಕರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ – ಕೋಲಾರ

## ಧಾರ್ಮಿಕ ದತ್ತಿ ಸಂಸ್ಥೆಗಳು

ಹಳೆಯ ಮೈಸೂರು ಪ್ರದೇಶದ ಮುಜರಾಯಿ ಸಂಸ್ಥೆಗಳನ್ನು ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಮೂರು ಗುಂಪುಗಳಾಗಿ ವಿಭಾಗಿಸಲಾಗಿದೆ. ಅವುಗಳನ್ನು ಹಿರಿಯ, ಕಿರಿಯ ಮತ್ತು ಗ್ರಾಮೀಣ ಸಂಸ್ಥೆಗಳೆಂದು ಕರೆಯಲಾಗಿದೆ. ಇವುಗಳಲ್ಲಿ ವಾರ್ಷಿಕ ಆದಾಯ ೧೦೦೦–೦೦ ರೂ.ಗಳಿಗಿಂತ ಹೆಚ್ಚಿರುವ ಸಂಸ್ಥೆಗಳನ್ನು ಹಿರಿಯ ಸಂಸ್ಥೆಗಳೆಂದೂ, ಒಂದುನೂರು ರೂಪಾಯಿಗಳಿಗಿಂತ ಹೆಚ್ಚಿರುವ ಸಂಸ್ಥೆಗಳನ್ನು ಕಿರಿಯ ಸಂಸ್ಥೆಗಳೆಂದೂ, ಒಂದು ನೂರಕ್ಕಿಂತ ಕಡಿಮೆ ಆದಾಯ ಇರುವ ಸಂಸ್ಥೆಗಳನ್ನು ಗ್ರಾಮೀಣ ಸಂಸ್ಥೆಗಳೆಂದೂ ಮತ್ತು ಹತ್ತು ಲಕ್ಷಕ್ಕಿಂತ ಹೆಚ್ಚು ಆದಾಯವಿರುವ ಸಂಸ್ಥೆಗಳನ್ನು ನಿಗದಿತ ಸಂಸ್ಥೆಗಳೆಂದೂ ವಿಂಗಡಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಹಲವಾರು ಹಳೆಯ ಧಾರ್ಮಿಕ ಸಂಸ್ಥೆಗಳು ಇವೆ. ಇವು ಮುಜರಾಯಿ ಇಲಾಖೆಗೆ ಸೇರಿವೆ. ಜಿಲ್ಲಾಧಿಕಾರಿ ಕಛೇರಿಯ ಒಂದು ಭಾಗವು ಮುಜರಾಯಿ ಆಡಳಿತದ ಹೊಣೆಯನ್ನು ಹೊತ್ತಿದೆ. ಇದಕ್ಕೆ ಒಬ್ಬ ಉಪಆಯುಕ್ತರು ಅವರಿಗೆ ಸಹಾಯಕವಾಗಿ ಇಬ್ಬರು ಅಧಿಕಾರಿಗಳು ಇರುತ್ತಾರೆ. ಜಿಲ್ಲೆಯಲ್ಲಿ ೧೯೬೫–೬೬ ರಲ್ಲಿ ೫೦ ಹಿರಿಯ ಮುಜರಾಯಿ ಮತ್ತು ೧೭೮ ಕಿರಿಯ ಮುಜರಾಯಿ ದೇವಸ್ಥಾನಗಳು, ೧೮ ಮಠಗಳು, ೫ ಛತ್ರಗಳು ಮತ್ತು ೧೧೨ ಗ್ರಾಮ ಮುಜರಾಯಿ ಸಂಸ್ಥೆಗಳು, ಎರಡು ಜೈನ ಬಸ್ತಿಗಳು, ನಾಲ್ಕು ಗ್ರಾಮ ಜೈನ ಬಸ್ತಿಗಳು, ನಾಲ್ಕು ಹಿರಿಯ ಮತ್ತು ನಾಲ್ಕು ಕಿರಿಯ ಮುಸ್ಲಿಂ ಸಂಸ್ಥೆಗಳಿದ್ದವು. ಈ ಎಲ್ಲಾ ಸಂಸ್ಥೆಗಳು ಟ್ರಸ್ಟ್‌ಗಳ ಆಡಳಿತಕ್ಕೆ ಒಳಪಟ್ಟಿದ್ದವು. ಇಂದಿಗೂ ಇಲ್ಲಿ ಪೂಜೆ–ಪುರಸ್ಕಾರಗಳು ನಡೆಯುತ್ತಿದ್ದು, ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವಗಳಂದು ವಿಶೇಷ ಪೂಜೆ ನಡೆಯುತ್ತದೆ. ಇದರೊಂದಿಗೆ ರಥೋತ್ಸವಗಳೂ ಆಕರ್ಷಕವಾಗಿ ನೆರವೇರುತ್ತವೆ.

ಕೋಲಾರ ಜಿಲ್ಲೆಯಲ್ಲಿನ ೨೦೦೩–೦೪ನೇ ಸಾಲಿನಲ್ಲಿದ್ದಂತೆ ಹಿರಿಯ, ಕಿರಿಯ ಮತ್ತು ಗ್ರಾಮೀಣ ಮುಜರಾಯಿ ಸಂಸ್ಥೆಗಳ ಪಟ್ಟಿಯನ್ನು ಈ ಕೆಳಗಿನ ಕೋಷ್ಟಕ ೧೬.೨೩ರಲ್ಲಿ ಕೊಟ್ಟಿದೆ.

**ಕೋಷ್ಟಕ–೧೬.೨೩: ಜಿಲ್ಲೆಯ ಮುಜರಾಯಿ ಸಂಸ್ಥೆಗಳ ಸಂಖ್ಯೆ**

| ಕ್ರಸಂ | ತಾಲೂಕು | ಹಿರಿಯ ಸಂಸ್ಥೆ | ಕಿರಿಯ ಸಂಸ್ಥೆ | ಗ್ರಾಮೀಣ ಸಂಸ್ಥೆ | ಒಟ್ಟು |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧. | ಕೋಲಾರ | ೧೫೦ | ೨೦೦ | ೧೪ | ೩೬೪ |
| ೨. | ಬಂಗಾರಪೇಟೆ | ೮೬ | ೧೫೪ | ೪೩ | ೨೮೩ |
| ೩. | ಮಾಲೂರು | ೨೯ | ೧೫೭ | ೧೯ | ೨೦೫ |
| ೪. | ಮುಳಬಾಗಿಲು | ೭೧ | ೧೨೭ | ೧೩೭ | ೩೩೫ |
| ೫. | ಶ್ರೀನಿವಾಸಪುರ | ೧೮ | ೧೮೦ | ೪೬ | ೨೪೪ |
| ೬ | ಚಿಂತಾಮಣಿ | ೫೨ | ೨೩೨ | ೧೨ | ೨೯೬ |
| ೭ | ಗೌರಿಬಿದನೂರು | ೮೨ | ೩೪ | ೧೪ | ೧೩೦ |
| ೮. | ಬಾಗೇಪಲ್ಲಿ | ೨೪ | ೭೬ | ೧೫ | ೧೧೫ |

| ೧ | ೨ | ೩ | ೪ | ೫ | ೬ |
|---|---|---|---|---|---|
| ೯. | ಶಿಡ್ಲಘಟ್ಟ | ೪೩ | ೧೧ | ೫೯ | ೨೨ |
| ೧೦. | ಚಿಕ್ಕಬಳ್ಳಾಪುರ | ೫೯ | ೧೧ | ೪೩ | ೨೨ |
| ೧೧. | ಗುಡಿಬಂಡೆ | ೧೫ | ೨ | ೦ | ೪೨ |

ಮೂಲ: ಜಿಲ್ಲಾಧಿಕಾರಿಯವರ ಕಛೇರಿ, ಕೋಲಾರ

## ವಕ್ಫ್ ಸಂಸ್ಥೆಗಳು

೧೯೫೪ ರ ಕೇಂದ್ರ ವಕ್ಫ್ ಕಾನೂನು ೧೫–೧೧–೧೯೫೫ರಿಂದ ಹಳೇ ಮೈಸೂರಿನಲ್ಲಿ ಜಾರಿಗೆ ಬಂದಿತು (ಗೆಜೆಟ್ ಆಫ್ ಇಂಡಿಯಾ – ಭಾಗ –೨). ೧೯೫೯, ೧೯೬೪ ಮತ್ತು ೧೯೬೮ ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ೧೯೫೪ರ ಕೇಂದ್ರ ವಕ್ಫ್ ಕಾನೂನಿಗಿಂತ ಮೊದಲು ಮೈಸೂರು ಪ್ರದೇಶದ ಮುಸಲ್ಮಾನರ ಮುಜರಾಯಿ ಸಂಸ್ಥೆಗಳ ಆಡಳಿತವು ದತ್ತಿ ಇಲಾಖೆಯ ಕೈಕೆಳಗಿತ್ತು. ೧೯೬೧ ರಲ್ಲಿ ೧೧ ಜನ ಸದಸ್ಯರಿರುವ ವಕ್ಫ್ ಮಂಡಲಿಯನ್ನು ರಚಿಸಲಾಯಿತು. ನಂತರದ ವರ್ಷಗಳಲ್ಲಿ ಹೈದರಾಬಾದ್ ಪ್ರದೇಶದಲ್ಲಿದ್ದ ಎಲ್ಲಾ ಪ್ರಾದೇಶಿಕ ಸಮಿತಿಗಳನ್ನು ರದ್ದು ಮಾಡಲಾಯಿತು. ಮುಖ್ಯ ಸಾರ್ವಜನಿಕ ಟ್ರಸ್ಟ್ ಅಧಿನಿಯಮದ ಪ್ರಕಾರ ನೋಂದಣಿಯಾಗಿರುವ ಎಲ್ಲಾ ಆಸ್ತಿಗಳೂ ತಾವಾಗಿಯೇ ವಕ್ಫ್ ಮಂಡಲಿಗೆ ಸೇರಿತು. ಮೈಸೂರು ಪ್ರದೇಶದ ದತ್ತಿ ಇಲಾಖೆಯ ವಶದಲ್ಲಿದ್ದ ೪೫೨ ಮುಸ್ಲಿಂ ಮುಜರಾಯಿ ಸಂಸ್ಥೆಗಳನ್ನೂ ವಕ್ಫ್ ಮಂಡಲಿಗೆ ವರ್ಗಾಯಿಸಲಾಯಿತು. ೧೯೫೯ ವಕ್ಫ್ ಅಧಿನಿಯಮಕ್ಕೆ ಅನುಸಾರವಾಗಿ ಕರ್ನಾಟಕ ಸರ್ಕಾರವು ೧೯೬೪ ರಲ್ಲಿ ನಿಯಮಗಳನ್ನು ರೂಪಿಸಿತು. ಈ ಮಂಡಲಿಯನ್ನು ೧೯೬೬, ೧೯೭೭ ಮತ್ತು ೧೯೮೨ ರಲ್ಲಿ ಪುನರ್ರಚಿಸಲಾಯಿತು.

## ವಕ್ಫ್ ಅಭಿವೃದ್ಧಿ ಕಾರ್ಪೋರೇಷನ್

ಮಂಡಲಿಯು ಕರ್ನಾಟಕ ಸರ್ಕಾರದ ಅನುಮತಿಯನ್ನು ಪಡೆದು ೧೯೭೮ ರಲ್ಲಿ ವಕ್ಫ್ ಅಭಿವೃದ್ಧಿ ಕಾರ್ಪೋರೇಷನ್ (ಲಿಮಿಟೆಡ್) ಅನ್ನು ರೂಪಿಸಿತು. ಇದರ ಅಧಿಕೃತ ಪಾಲು ಬಂಡವಾಳವು ಒಂದು ಕೋಟಿ ರೂ. ಮತ್ತು ೫೦ ಲಕ್ಷ ರೂ.ಗಳ ಸಂದಾಯದ ಬಂಡವಾಳದಿಂದ ಆರಂಭವಾಯಿತು. ಈ ಕಾರ್ಪೋರೇಷನ್‌ನಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಒಂಬತ್ತು ಜನ ನಿರ್ದೇಶಕರು ಇರುತ್ತಾರೆ. ರಾಜ್ಯದ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿ ಪಡಿಸುವುದೇ ಈ ಕಾರ್ಪೋರೇಷನ್‌ನ ಮುಖ್ಯ ಉದ್ದೇಶ. ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ಮಾಡುವುದು, ವಕ್ಫ್ ಆಸ್ತಿಗಳನ್ನು ಗುತ್ತಿಗೆಗೆ ಪಡೆಯುವುದು, ಸಣ್ಣ ಕೈಗಾರಿಕೆಗಳನ್ನು ನಡೆಸಲು ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು, ಹೌಸಿಂಗ್ ಕೋ–ಆಪರೇಟಿವ್, ಬಳಕೆದಾರರ ಸಂಘ, ಕೈಗಾರಿಕಾ ಸಹಕಾರ ಸಂಘ ಮತ್ತು ರೈತರ ಸಹಕಾರ ಸಂಘಗಳ ಸ್ಥಾಪನೆಗೆ ನೆರವು ನೀಡುವುದು, ಯಾತ್ರಾರ್ಥಿಗಳಿಗೆ ಅನುಕೂಲವನ್ನು ಒದಗಿಸಲು ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡುವುದು ಮತ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು – ಮೊದಲಾದವು ಇದರ ಉದ್ದೇಶಗಳಾಗಿವೆ. ೨೦೦೪–೦೫ಕ್ಕೆ ಜಿಲ್ಲೆಯಲ್ಲಿ ಒಟ್ಟು ೧೯೮ ಮಸೀದಿಗಳು, ೧೩೭ ದರ್ಗಾ ಮತ್ತು ಮಕಾನ್‌ಗಳು, ೧೦೦ ಈದ್ಗಾಗಳು, ೩೦೫ ಕಬರಸ್ಥಾನ್‌ಗಳು, ೨೮ ಅಶರ್‌ಖಾನ್‌ಗಳು ಹಾಗೂ ೪೪ ಮದರಸಾ ಮತ್ತು ಮಕ್ತಬ್‌ಗಳು ಇದ್ದವೆಂದು ತಿಳಿದುಬರುತ್ತದೆ. (ಮೂಲ: ವಕ್ಫ್ ಸಲಹಾ ಸಮಿತಿ, ಕೋಲಾರ)

**ಕೋಷ್ಟಕ ೧೬.೨೪: ಕೋಲಾರ ಜಿಲ್ಲೆಯಲ್ಲಿನ ವಕ್ಫ್ ಸಂಸ್ಥೆಗಳಿಗೆ ನೀಡಲಾದ ಅನುದಾನ**

| ವರ್ಷ | ವಕ್ಫ್ ಸಂಖ್ಯೆ | ಅನುದಾನ ಲಕ್ಷ ರೂ.ಗಳಲ್ಲಿ |
|---|---|---|
| ೧೯೯೭–೯೮ | ೪೨ | ೯.೪೫ |
| ೧೯೯೮–೯೯ | ೩೪ | ೧೭೭೦ |
| ೧೯೯೯–೨೦೦೦ | ೬೩ | ೧೭೭೦ |
| ೨೦೦೦–೦೧ | ೮೧ | ೨೪.೭೫ |
| ೨೦೦೧–೦೨ | ೫೨ | ೧೬.೬೫ |
| ೨೦೦೩–೦೪ | ೫೨ | – |

ಮೂಲ: ವಕ್ಫ್ ಅಭಿವೃದ್ಧಿ ಕಾರ್ಪೋರೇಷನ್, ಬೆಂಗಳೂರು.

**ಕೋಷ್ಟಕ ೧೬.೨೫:**
**ಕೋಲಾರ ಜಿಲ್ಲೆಯಲ್ಲಿ ವಕ್ಫ್ ಸಂಸ್ಥೆಗಳು ವಕ್ಫ್ ಸಲಹಾ ಸಮಿತಿಯಿಂದ ಪಡೆಯುತ್ತಿರುವ ವಂತಿಗೆ ವಿವರ**

| ವರ್ಷ | ವಂತಿಗೆ ಹಣ (ರೂ. ಗಳಲ್ಲಿ) |
|---|---|
| ೧೯೯೯-೨೦೦೦ | ೪೮,೧೪೯ |
| ೨೦೦೦-೦೧ | ೧,೦೬,೯೦೫ |
| ೨೦೦೧-೦೨ | ೧,೧೬,೩೩೦ |
| ೨೦೦೨-೦೩ | ೧,೬೭,೦೮೪ |

ಆಧಾರ: ವಕ್ಫ್ ಸಲಹಾ ಸಮಿತಿ, ಕೋಲಾರ

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

ಕೋಲಾರ ಜಿಲ್ಲೆಯಲ್ಲಿ ಬಡ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೆಲಸ ಮಾಡುತ್ತಿದೆ. ಈ ಇಲಾಖೆ ಮುಖ್ಯವಾಗಿ ಬಡತನ ರೇಖೆಗಿಂತ ಕೆಳಗಿರುವ ಅಥವಾ ಬಡತನದ ಅಂಚಿನಲ್ಲಿರುವ ಮಹಿಳೆಯರ ಪ್ರಗತಿಯತ್ತ ಗಮನವಿಟ್ಟು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸುತ್ತಿದೆ.

ಮಹಿಳೆ ಕೇವಲ ಗೃಹಿಣಿಯಾಗಿದ್ದು, ಗೃಹಕಾರ್ಯಕ್ಕಷ್ಟೇ ತನ್ನನ್ನು ತೊಡಗಿಸಕೊಂಡರೆ ಸಾಲದು. ಅವಳು ಸಾಮಾಜಿಕವಾಗಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ ಹೆಣ್ಣು ಮಕ್ಕಳು ಸುಖ ಸೌಲಭ್ಯಗಳನ್ನು ಹೊಂದಿರಬೇಕಾದರೆ ಮತ್ತು ರಾಷ್ಟ್ರದ ಅಭಿವೃದ್ಧಿವಾಹಿನಿಯಲ್ಲಿ ಬರಬೇಕಾದರೆ, ಅವರು ತಮ್ಮನ್ನು ವಿವಿಧ ಉತ್ಪಾದನಾ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳುವ ಕೌಶಲ್ಯವನ್ನು ಬೆಳೆಸಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದಬೇಕು. ಇದರೊಂದಿಗೆ ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಈ ಇಲಾಖೆಯ ಮುಖಾಂತರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದಲ್ಲದೇ ಮಕ್ಕಳ ಉಳಿವು, ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಜಿಲ್ಲಾ ಪಂಚಾಯಿತಿ ಕೋಲಾರವು ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ನಿರ್ಗತಿಕ ಮಕ್ಕಳಿಗಾಗಿ ಕುಟೀರಗಳು, ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು, ಅಂಗನವಾಡಿ ಕಟ್ಟಡಗಳ ನಿರ್ಮಾಣ, ವಿಧವೆಯರ ಮತ್ತು ದೇವದಾಸಿಯರ ಪುನರ್ವಿವಾಹಕ್ಕಾಗಿ ಹಣಕಾಸು ನೆರವು, ಮಹಿಳಾ ಮಂಡಳಿಗಳಿಗೆ ಪ್ರೋತ್ಸಾಹಧನ ಮುಂತಾದ ಯೋಜನೆಗಳು ಹಾಗೂ ಗ್ರಾಮೀಣಪ್ರದೇಶ ಹೆಣ್ಣುಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿವೇತನ, ವೃತ್ತಿಪರ ತರಬೇತಿ ಪಡೆಯುವವರಿಗೆ ಧನ ಸಹಾಯ ಸಂಕಷ್ಟದಲ್ಲಿರುವ ಮಕ್ಕಳಿಗೆ ಶಿಷ್ಯವೇತನ, ಜಾಗೃತಿ, ಮಹಿಳಾ ಕಾನೂನು ಪದವೀಧರರಿಗೆ ಧನಸಹಾಯ ಬಾಲಕಾರ್ಮಿಕರ ಪುನರ್ ವಸತಿ, ಹೆಣ್ಣು ಮಕ್ಕಳ ವಸತಿ ನಿಲಯ, ರಾಷ್ಟ್ರೀಯ ಹೆರಿಗೆ ಭತ್ಯೆ ಹಾಗೂ ಬಾಲಿಕಾ ಸಮೃದ್ಧಿ ಯೋಜನೆ ಮುಂತಾದ ರಾಜ್ಯ ವಲಯ ಯೋಜನೆಗಳನ್ನು ಜಿಲ್ಲಾ ಪಂಚಾಯಿತಿ ಅನುಷ್ಠಾನಗೊಳಿಸುತ್ತಿದೆ.

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:** ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಮತ್ತು ಮಕ್ಕಳಿಗೆ ಕೊಡುವ ಸಮತೋಲನ ಆಹಾರವು ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುತ್ತದೆ. ಆದ್ದರಿಂದ ಮಕ್ಕಳ ಮತ್ತು ಹೆಂಗಸರ ಸರ್ವಾಂಗೀಣ ಅಭಿವೃದ್ಧಿಗೆ ಬುನಾದಿ ಹಾಕುವ ದೃಷ್ಟಿಯಿಂದ, ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವನ್ನು ಕಾರ್ಯಗತಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಪೌಷ್ಠಿಕ ಆಹಾರಗಳನ್ನು ಇವರಿಗೆ ಒದಗಿಸಲಾಗುತ್ತಿದೆ. ಅದಲ್ಲದೆ ರೋಗ ನಿರೋಧಕ ಚುಚ್ಚುಮದ್ದು ನೀಡಿಕೆ, ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡುವುದು ಮುಂತಾದವುಗಳನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ನರಳುತ್ತಿರುವ ೦-೬ ವಯೋವರ್ಗದ ಮಕ್ಕಳಿಗೆ, ಗರ್ಭಿಣಿ ಹಾಗೂ ಬಾಣಂತಿಯಲ್ಲಿ ಪ್ರತಿದಿನ ಪೌಷ್ಠಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುತ್ತದೆ.

ಜಿಲ್ಲೆಯಲ್ಲಿ ೧೧ ತಾಲೂಕುಗಳಲ್ಲಿ ೨,೩೬೧ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ೨೦೦೩–೦೪ನೇ ಸಾಲಿನಲ್ಲಿ ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ ೩೩೭೪೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು ೧,೫೨,೦೨೯ ಮಕ್ಕಳು ೧೫,೩೧೦ ಗರ್ಭಿಣಿಯರು, ೧೫,೪೭೧ ಬಾಣಂತಿಯರು ಹಾಗೂ ಪ್ರಾಯಪೂರ್ವ ಬಾಲಕಿಯರು, ೪೭೨೨ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಫಲಾನುಭವಿಗಳೆಂದು ಪರಿಗಣಿಸಿ ಸೌಲಭ್ಯಗಳನ್ನು ನೀಡಲಾಗಿದೆ.

**ಅಂಗನವಾಡಿ ಕೇಂದ್ರಗಳು:** ಜಿಲ್ಲೆಯ ೧೧ ತಾಲೂಕುಗಳಲ್ಲಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆಡಳಿತ ವೆಚ್ಚಕ್ಕಾಗಿ ಮತ್ತು ಪೌಷ್ಟಿಕ ಆಹಾರ ಸರಬರಾಜಿಗಾಗಿ ಹಣವನ್ನು ವೆಚ್ಚ ಮಾಡಲಾಗಿದೆ. ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಮತ್ತು ಸಹಾಯಕಿಯರು ಈ ಯೋಜನೆಯಡಿಯಲ್ಲಿ ಫಲಾನುಭವಿಗಳೆಂದು ಪರಿಗಣಿಸಿ ಅವರಿಗೆ ಈ ಸೌಲಭ್ಯಗಳನ್ನು ನೀಡಲಾಗಿದೆ.

**ಕೋಷ್ಟಕ ೧೬.೨೬**

**ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳು ಪ್ರಾರಂಭಗೊಂಡ ವರ್ಷ ಹಾಗೂ ಮಂಜೂರಾದ ಕೇಂದ್ರಗಳ ವಿವರ**

| ತಾಲೂಕುಗಳ ಹೆಸರು | ಪ್ರಾರಂಭವಾದ ವರ್ಷ | ಅಂಗನವಾಡಿ ಕೇಂದ್ರಗಳು |
|---|---|---|
| **ಚಿಕ್ಕಬಳ್ಳಾಪುರ** | ೧೯೭೭–೭೮ | ೧೬೮ |
| **ಮಾಲೂರು** | ೧೯೮೧–೮೨ | ೧೫೭ |
| **ಬಂಗಾರಪೇಟೆ** | ೧೯೮೧–೮೨ | ೩೭೫ |
| **ಮುಳಬಾಗಿಲು** | ೧೯೮೫–೮೬ | ೧೮೮ |
| **ಬಾಗೇಪಲ್ಲಿ** | ೧೯೮೬–೮೭ | ೧೫೪ |
| **ಶ್ರೀನಿವಾಸಪುರ** | ೧೯೮೮–೮೯ | ೨೧೫ |
| **ಚಿಂತಾಮಣಿ** | ೧೯೮೮–೮೯ | ೨೫೭ |
| **ಗೌರಿಬಿದನೂರು** | ೧೯೯೦–೯೧ | ೨೮೨ |
| **ಕೋಲಾರ** | ೧೯೯೦–೯೧ | ೩೭೩ |
| **ಶಿಡ್ಲಘಟ್ಟ** | ೧೯೯೦–೯೧ | ೧೬೭ |
| **ಗುಡಿಬಂಡೆ** | ೧೯೯೧–೯೨ | ೫೭ |

ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ – ಜಿಲ್ಲಾ ಕಚೇರಿ, ಕೋಲಾರ

**ಅಂಗನವಾಡಿ ಕಟ್ಟಡಗಳ ನಿರ್ಮಾಣ**

ಕೋಲಾರ ಜಿಲ್ಲೆಯಲ್ಲಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ೧೯೯೯–೨೦೦೦ನೇ ಸಾಲಿನ ರೂ.೧೦ ಲಕ್ಷಗಳ ಅನುದಾನವನ್ನು ಒದಗಿಸಲಾಯಿತು. ಇದಲ್ಲದೆ ನಮ್ಮ ಮಗಳು– ನಮ್ಮ ಶಕ್ತಿ ಯೋಜನೆಯಡಿ ಪ್ರಸಕ್ತ ಸಾಲಿಗೆ ಒದಗಿಸಲಾಗಿದ್ದ ರೂ.೩೦ ಲಕ್ಷಗಳನ್ನು ಸಹ ಅಂಗನವಾಡಿ ಕಟ್ಟಡದ ನಿರ್ಮಾಣಕ್ಕೆ ಉಪಯೋಗಿಸಿದೆ. ಒಟ್ಟು ೮೦ ಕಟ್ಟಡಗಳನ್ನು ನಿರ್ಮಿಸಲು ಅದೇ ವರ್ಷ ಕ್ರಮ ತೆಗೆದುಕೊಳ್ಳಲಾಯಿತು. ಕಟ್ಟಡದ ನಿರ್ಮಾಣಕ್ಕಾಗಿ ಹಣವನ್ನು ನಿರ್ಮಿತಿ ಕೇಂದ್ರ ಹಾಗೂ ಭೂ ಸೇನಾ ನಿಗಮಕ್ಕೆ ಬಿಡುಗಡೆ ಮಾಡಲಾಯಿತು. ಇಲಾಖೆಯಿಂದ ಪ್ರತೀ ಕಟ್ಟಡಕ್ಕೆ ರೂ.೫೦೦೦೦ ಗಳನ್ನು ಒದಗಿಸಿದ್ದು, ಇದಕ್ಕಾಗಿ ಬೇಕಾಗಿದ್ದ ಉಳಿದ ಹಣವನ್ನು ಜಿಲ್ಲಾ ಪಂಚಾಯಿತಿಯಿಂದ ಪಡೆಯಲಾಯಿತು.

### ಅಂಗನವಾಡಿ ತರಬೇತಿ ಕೇಂದ್ರ

ಕೆಂಗಲ್ ಹನುಮಂತಯ್ಯ ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕೇಂದ್ರ ಬೇತಮಂಗಲ (ಬಂಗಾರಪೇಟೆ ತಾಲೂಕು)ದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ೩ ತಿಂಗಳ ವೃತ್ತಿ ತರಬೇತಿ ಹಾಗೂ ಪುನಶ್ಚೇತನ ತರಬೇತಿಗಳನ್ನು ನೀಡಲಾಗುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಛೇರಿಯಿಂದ ತರಬೇತಿ ಶಿಬಿರದ ಖರ್ಚಿಗೆ ಅನುದಾನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಲಾಗುತ್ತಿದೆ.

### ನಿರ್ಗತಿಕ ಮಕ್ಕಳಿಗಾಗಿ ಕುಟೀರಗಳು

ನಿರ್ಗತಿಕ ಮಕ್ಕಳಿಗೆ ಪುನರ್ ವಸತಿ ಒದಗಿಸಿ ಆ ಮೂಲಕ ಅವರ ರಕ್ಷಣೆ ಹಾಗೂ ಪಾಲನೆ ಪೋಷಣೆ ಮಾಡಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುಭವಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಕಾರ್ಯವನ್ನು ಜಾರಿಗೊಳಿಸಲಾಗಿದೆ. ಈ ಸಂಸ್ಥೆಗಳಿಗೆ ಪ್ರತೀ ಮಗುವಿನ ನಿರ್ವಹಣೆಗೆ ಮಾಹೆಯಾನ ೪೦೦ ರೂ.ಗಳನ್ನು ಅನುದಾನವಾಗಿ ಪಡೆಯಲು ಅವಕಾಶವಿರುತ್ತದೆ. ಇದರಲ್ಲಿ ಶೇ.೧೦ ರಷ್ಟು ಖರ್ಚನ್ನು ಸ್ವಯಂ ಸಂಸ್ಥೆಗಳು ಭರಿಸಬೇಕಾಗುತ್ತದೆ.

ಈ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ನೋಂದಾಯಿತ ಸೇವಾ ಸಂಸ್ಥೆಗಳನ್ನು ಮುಂದೆ ನೀಡಿದೆ.

ಸೇಂಟ್ ಪಾಲ್ಸ್ ಬಾಯ್ಸ್ ಹೋಂ, ಮಾರಿಕುಪ್ಪಂ, ಕೆ.ಜಿ.ಎಫ್. ಮಿಲ್ಲರ್ ವೆಲ್ಫೇರ್ ಟ್ರಸ್ಟ್, ಮಿಲ್ಸ್ ನಗರ, ಕೋಲಾರ, ಆಜಾದ್ ದರುಲ್ ಉಲುಮ್, ಮಹಮದ್‌ಪುರ, ಚಿಂತಾಮಣಿ, ಕೆ.ವಿ.ಟ್ರಸ್ಟ್, ಕಂದವಾರ, ಚಿಕ್ಕಬಳ್ಳಾಪುರ, ಸ್ವಾಮಿ ಶಿವಾನಂದ ಸೇವಾಶ್ರಮ, ಗೌರಿಬಿದನೂರು

### ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು:

ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ ೩ ವರ್ಷದೊಳಗಿನ ಮಕ್ಕಳಿಗೆ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸುವ ಹಾಗೂ ಈ ಕೇಂದ್ರಗಳನ್ನು ನಡೆಸುವ ಅನುಭವಿ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡುವ ವ್ಯವಸ್ಥೆಯೂ ಇದೆ. ೧೯೯೯–೨೦೦೦ ನೇ ಸಾಲಿನಲ್ಲಿ ೨೫ ಶಿಶುಪಾಲನಾ ಕೇಂದ್ರಗಳಿಗೆ ಅದರ ವೆಚ್ಚಕ್ಕಾಗಿ ರೂ.೧.೯೦ ಲಕ್ಷಗಳನ್ನು, ಪೂರಕ ಪೌಷ್ಟಿಕ ಆಹಾರಕ್ಕಾಗಿ ರೂ.೭,೬೭,೮೪೮ಗಳನ್ನು ಖರ್ಚು ಮಾಡಿದೆ.

೨೦೦೦–೦೧ರಿಂದ ೨೦೦೩–೦೪ನೇ ಸಾಲುಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ತೆರೆಯಲಾದ ಶಿಶುಪಾಲನಾ ಕೇಂದ್ರಗಳ ವಿವರ:

**ಕೋಷ್ಟಕ ೧೬.೨೭**

| ವರ್ಷ | ಕೇಂದ್ರಗಳ ಸಂಖ್ಯೆ | ಮಕ್ಕಳ ಸಂಖ್ಯೆ | ವೆಚ್ಚ ಲಕ್ಷ ರೂ. |
|---|---|---|---|
| ೨೦೦೦–೦೧ | ೩೫ | ೮೨೫ | ೬.೨೦ |
| ೨೦೦೧–೦೨ | ೩೫ | ೮೨೫ | ೬.೨೩ |
| ೨೦೦೨–೦೩ | ೩೫ | ೮೨೫ | ೬.೮೩ |
| ೨೦೦೩–೦೪ | ೩೫ | ೮೨೫ | ೧೧.೨೫ |

### ವಿಧವೆಯರ ಮತ್ತು ದೇವದಾಸಿಯರ ಪುನರ್ ವಿವಾಹ

೧೮ ರಿಂದ ೩೫ ವರ್ಷದೊಳಗಿನ ದೇವದಾಸಿಯರನ್ನು ವಿವಾಹವಾದಲ್ಲಿ ಪ್ರೋತ್ಸಾಹ ಧನ ರೂ.೧೦,೦೦೦ಗಳನ್ನು ಈ ಇಲಾಖೆ ನೀಡುವುದು. ರೂ.೧೦,೦೦೦ ಪೈಕಿ ರೂ.೨,೫೦೦ ಗಳನ್ನು ಮಾತ್ರ ಫಲಾನುಭವಿಗಳಿಗೆ ನಗದು ರೂಪದಲ್ಲಿ ಕೊಟ್ಟು

ಉಳಿದ ರೂ.೭,೫೦೦ ಗಳನ್ನು ಬ್ಯಾಂಕಿನಲ್ಲಿ ಫಲಾನುಭವಿ ಹಾಗೂ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಜಂಟಿ ಖಾತೆಯ ನಿಗದಿತ ಠೇವಣಿಯಲ್ಲಿಡಲಾಗುವುದು. ೧೯೯೯–೨೦೦೦ ನೇ ಸಾಲಿನಲ್ಲಿ ನಾಲ್ವರು ವಿಧವೆಯರಿಗೆ, ಒಟ್ಟು ೪೦,೦೦೦ ರೂ.ಗಳ ಪ್ರೋತ್ಸಾಹ ಧನವನ್ನು ನೀಡಿದೆ. ೨೦೦೩–೦೪ನೇ ಸಾಲಿನಲ್ಲಿ ಇಬ್ಬರು ವಿಧವೆಯರಿಗೆ ರೂ.೨೦,೦೦೦ಗಳ ಪ್ರೋತ್ಸಾಹಧನ ನೀಡಲಾಗಿದೆ.

**ರಾಜ್ಯ ವಲಯದ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನ:** ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವುದು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ ೫ ರಿಂದ ೧೦ನೇ ತರಗತಿಯವರೆಗಿನ ವಿದ್ಯಾರ್ಥಿಯನಿರಿಗೆ ಶಿಷ್ಯ ವೇತನವನ್ನು ಕೊಡಲಾಗುತ್ತಿದೆ.

೨೦೦೦–೦೧, ೨೦೦೧–೦೨ ಹಾಗೂ ೨೦೦೨–೦೩ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಅನುಕ್ರಮವಾಗಿ ೩,೦೦೦, ೩,೮೦೨ ಹಾಗೂ ೧,೬೮೦ ಗ್ರಾಮೀಣ ವಿದ್ಯಾರ್ಥಿನಿಯರಿಗೆ ಹಾಜರಿ ವೇತನ ಮಂಜೂರು ಮಾಡಿದ್ದು, ಅದು ಕ್ರಮವಾಗಿ ರೂ. ೧೨ ಲಕ್ಷ ರೂ.೧೩ ಲಕ್ಷ ಹಾಗೂ ರೂ.೬.೧೭ ಲಕ್ಷ ಆಗಿದೆ. ಅದರಂತೆ ೨೦೦೩–೦೪ನೇ ಸಾಲಿನಲ್ಲಿ ೨೪೯ ವಿದ್ಯಾರ್ಥಿಗಳಿಗೆ ೧.೦೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ವೃತ್ತಿಪರ ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ಆರ್ಥಿಕ ಸಹಾಯ:** ಮಹಿಳೆಯರ ಸ್ಥಾನಮಾನ ಹೆಚ್ಚಿಸಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಹಿಂದುಳಿದ ಮಹಿಳೆಯರಿಗೆ ಅವಶ್ಯಕವಿರುವ ನೈಪುಣ್ಯತೆ, ಕೌಶಲ್ಯ ಒದಗಿಸಲು ಟಿ.ವಿ., ರೇಡಿಯೋ, ಗಡಿಯಾರ ರಿಪೇರಿ, ಕಂಪ್ಯೂಟರ್ ತರಬೇತಿ, ಮೋಟಾರ್ ರಿವೈಂಡಿಂಗ್ ಮುಂತಾದ ಕೋರ್ಸುಗಳಲ್ಲಿ ತರಬೇತಿ ಪಡೆಯಲು ಸಹಾಯ ಧನ ನೀಡಲಾಗುತ್ತಿದೆ.

**ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಶಿಷ್ಯ ವೇತನ:** ಈ ಯೋಜನೆಯಡಿಯಲ್ಲಿ ೫ನೇ ತರಗತಿಯಿಂದ ಪದವಿ ತರಗತಿಯವರೆಗೆ ಓದುತ್ತಿರುವ ದೇವದಾಸಿಯರ ಮಕ್ಕಳು, ಕೈದಿಗಳ ಮಕ್ಕಳು, ವೇಶ್ಯೆಯರ ಮಕ್ಕಳು ಹಾಗೂ ಕುಡಿತದ ದುಶ್ಚಟಕ್ಕೆ ಬಲಿಯಾದವರ ಮಕ್ಕಳಿಗೆ ಆರ್ಥಿಕ ಸಹಾಯ ನೀಡಲಾಗುವುದು. ೨೦೦೩–೦೪ನೇ ಸಾಲಿನಲ್ಲಿ ಏಳು ವಿದ್ಯಾರ್ಥಿಗಳಿಗೆ ರೂ.೧೩,೦೦೦ ಅನ್ನು ಮಂಜೂರು ಮಾಡಲಾಗಿದೆ.

**ಸಾಂತ್ವನ:** ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ಸಹಾಯ ಮತ್ತು ಕಾನೂನು ಸಹಾಯ ನೀಡುವುದು, ಸ್ವಾವಲಂಬಿಗಳಾಗಲು ವೃತ್ತಿ ತರಬೇತಿ ನೀಡುವುದು. ೨೦೦೩–೦೪ರಲ್ಲಿ ಕೋಲಾರ ಜಿಲ್ಲೆಯಲ್ಲಿ ಯೋಜನೆ ಪ್ರಾರಂಭಗೊಂಡಿದ್ದು ಇಲ್ಲಿಯವರೆಗೆ ೩೮ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸುವ ಸ್ವಯಂ ಸೇವಾ ಸಂಸ್ಥೆಯಾದ ಮಹಿಳಾ ಜಾಗೃತಿ ವೇದಿಕೆಗೆ ೧,೩೨,೪೦೦ ರೂ.ಗಳನ್ನು ಅನುದಾನವಾಗಿ ಒದಗಿಸಲಾಗಿದೆ.

**ಜಾಗೃತಿ:** ಈ ಯೋಜನೆಯನ್ನು ಜಿಲ್ಲೆಯ ಮುಳಬಾಗಿಲು ಮತ್ತು ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮಾತ್ರ ಜಾರಿಗೊಳಿಸಲಾಗಿದೆ. ೧೪ ರಿಂದ ೧೮ ವರ್ಷ ವಯೋಮಿತಿಯಿರುವ ಬಾಲಕಿಯರಿಗೆ ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಮಕ್ಕಳ ಆರೈಕೆ, ಗೃಹ ನಿರ್ವಹಣೆ, ಪೌಷ್ಟಿಕ ಆಹಾರ ಇತ್ಯಾದಿ ವಿಷಯಗಳಲ್ಲಿ ಅರಿವು ಮೂಡಿಸುವುದು ಹಾಗೂ ಭವಿಷ್ಯತ್ತಿನ ಜೀವನಕ್ಕೆ ಅವರನ್ನು ಅನುವುಗೊಳಿಸುವುದು ಇದರ ಉದ್ದೇಶವಾಗಿದೆ. ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಲು ಪ್ರತೀ ತಾಲ್ಲೂಕಿನಲ್ಲೂ ವರ್ಷದಲ್ಲಿ ೩೧ ಬಾಲಕಿಯರನ್ನು ಆಯ್ಕೆ ಮಾಡಿಕೊಂಡು ತರಬೇತಿ ನೀಡಲಾಗುವುದು. ತರಬೇತಿ ಹೊಂದಿ ಆಯ್ಕೆಯಾದ ಬಾಲಕಿಯರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಮಾಡಲು ಅನುಕುಲವಾಗುವಂತೆ ಒಂದು ಸೈಕಲ್ ಮತ್ತು ಅವರ ಭವಿಷ್ಯತ್ತಿನ ಜೀವ ನಿರ್ವಹಣೆಗೆ ಅನುಕೂಲವಾಗುವಂತೆ ಅವರ ಹೆಸರಿನಲ್ಲಿ ರೂ.೧೦೦೦ ಗಳ ರಾಷ್ಟ್ರೀಯ ಉಳಿತಾಯ ಪತ್ರವನ್ನು ನೀಡಲಾಗುವುದು.

**ಕಾನೂನು ಪದವೀಧರರಿಗೆ ಸಹಾಯ ಧನ:** ಕಾನೂನು ಪದವಿ ಪಡೆದಿರುವ ಮಹಿಳೆಯರಿಗೆ, ಕಾನೂನು ಆಡಳಿತದಲ್ಲಿ ತರಬೇತಿ ಪಡೆಯಲು ಅನುಕೂಲವಾಗುವಂತೆ ಪ್ರತಿ ತಿಂಗಳೂ ರೂ.೧೦೦೦ ಗಳ ಧನ ಸಹಾಯವನ್ನು ನಾಲ್ಕು ವರ್ಷಗಳವರೆಗೆ ನೀಡಲಾಗುವುದು.

**ಬಾಲ ಕಾರ್ಮಿಕರ ಪುನರ್ವಸತಿ ಯೋಜನೆ:** ಬಾಲ ಕಾರ್ಮಿಕರನ್ನು ಪುನರ್ವಸತಿಗೊಳಿಸುವ ಉದ್ದೇಶದಿಂದ ೧೪ ವರ್ಷದೊಳಗಿನ ಬಾಲ ಕಾರ್ಮಿಕರನ್ನು ವಿದ್ಯಾವಂತರನ್ನಾಗಿ ಮಾಡಬೇಕಾಗುತ್ತದೆ. ಪ್ರತೀ ಜಿಲ್ಲೆಯಲ್ಲೂ ವಿಶೇಷ ಶಾಲೆಯನ್ನು ತೆರೆದು ೬ ತಿಂಗಳವರೆಗೆ ಬಾಲ ಕಾರ್ಮಿಕರಿಗೆ ಅನೌಪಚಾರಿಕ ಶಿಕ್ಷಣ, ಪೌಷ್ಟಿಕ ಆಹಾರ, ಮನರಂಜನಾ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ಆರು ತಿಂಗಳ ನಂತರ ಅವರು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ಸಾಮಾನ್ಯ ಶಾಲೆಗೆ ದಾಖಲು ಮಾಡಲಾಗುತ್ತದೆ. ಈ ಕಾಲಾವಧಿಯಲ್ಲಿ ಅವರು ಆರೋಗ್ಯವನ್ನು ಕಾಪಾಡಿಕೊಂಡಿರಲು ಬೇಕಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟಿರುವ ಸಮಿತಿಯು ಯೋಗ್ಯವಾದ ಸೇವಾ ಸಂಸ್ಥೆಯನ್ನು ಗುರುತಿಸಿ ಬಾಲ ಕಾರ್ಮಿಕರಿಗೆ ವಿಶೇಷ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಲಾಗುತ್ತಿದೆ.

**ಹೆಣ್ಣು ಮಕ್ಕಳ ವಸತಿ ನಿಲಯ:** ಹೆಣ್ಣು ಮಕ್ಕಳು ವಸತಿ ಸೌಕರ್ಯವಿಲ್ಲದೆ ಶಾಲೆ ಬಿಡುವುದನ್ನು ತಪ್ಪಿಸಲು ಜಿಲ್ಲೆಯ ಗೌರಿಬಿದನೂರು ಹಾಗೂ ಕೋಲಾರ ತಾಲೂಕುಗಳಲ್ಲಿ ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಸರ್ಕಾರದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ತರಗತಿಗಳಲ್ಲಿ ಓದುತ್ತಿರುವ ಗ್ರಾಮಾಂತರ ಹೆಣ್ಣು ಮಕ್ಕಳಿಗೆ ಈ ವಸತಿ ನಿಲಯದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಜಿಲ್ಲೆಯ ಗೌರಿಬಿದನೂರು ಹಾಗೂ ಕೋಲಾರಗಳಿಂದ ೧೦೦ ಹೆಣ್ಣು ಮಕ್ಕಳು ಪ್ರಯೋಜನ ಪಡೆದಿದ್ದು ೨೦೦೩–೦೪ರಲ್ಲಿ ೭,೨೮,೦೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆ:** ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ಗರ್ಭಿಣಿಯರಿಗೆ ಹೆರಿಗೆ ಸಮಯದಲ್ಲಿ ಪೌಷ್ಟಿಕ ಆಹಾರ ಕೊರತೆಯನ್ನು ನೀಗಿಸಲು ಮತ್ತು ವೈದ್ಯಕೀಯ ನೆರವನ್ನು ಪಡೆಯಲು ಸಹಾಯವಾಗಲೆಂದು ಹೆರಿಗೆ ಭತ್ಯೆಯಾಗಿ ಪ್ರತೀ ಮಹಿಳೆಗೆ ರೂ.೫೦೦ ಗಳನ್ನು ಕೊಡಲಾಗುತ್ತಿದೆ.

ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆಯಡಿ ಜಿಲ್ಲೆಯಲ್ಲಿ ಹೆರಿಗೆ ಭತ್ಯೆ ಪಡೆದ ಭೂ ರಹಿತ ಕಾರ್ಮಿಕ ಮಹಿಳೆಯರ ಸಂಖ್ಯೆ ೨೩೧೪ ಆಗಿದ್ದು, ಅದಕ್ಕಾಗಿ ಆದ ವೆಚ್ಚವು ರೂ.೧೧,೫೭,೦೦೦ ಆಗಿದೆ.

**ಬಾಲಿಕಾ ಸಮೃದ್ಧಿ ಯೋಜನೆ:** ಹೆಣ್ಣು ಮಗುವಿನ ಸ್ಥಾನಮಾನ ಹೆಚ್ಚಿಸುವ ಮತ್ತು ಕುಟುಂಬದ ಮತ್ತು ಸಮಾಜದಲ್ಲಿರುವ ಹೆಣ್ಣಿನ ಬಗ್ಗೆ ಇರುವ ಕ್ರೂರ ಭಾವನೆಯನ್ನು ಬದಲಾಯಿಸುವ ದೃಷ್ಟಿಯಿಂದ, ಈ ಯೋಜನೆಯನ್ನು ರೂಪಿಸಲಾಗಿದೆ. ೧೫–೬–೧೯೯೭ ರ ನಂತರ ಹುಟ್ಟಿದ ಹೆಣ್ಣು ಮಗುವಿಗೆ ಕೊಡುಗೆ ರೂಪದಲ್ಲಿ ರೂ.೫೦೦ ಗಳನ್ನು ನೀಡಲಾಗುವುದು.

**ಸ್ತ್ರೀ ಶಕ್ತಿ ಯೋಜನೆ:** ಗ್ರಾಮೀಣ ಪ್ರದೇಶದಲ್ಲಿ ಬಡತನರೇಖೆಗಿಂತ ಕಡಿಮೆ ಆದಾಯವಾಗುವ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶ ಈ ಯೋಜನೆಯದ್ದಾಗಿದೆ. ಕೋಲಾರ ಜಿಲ್ಲೆಯಲ್ಲಿ ಇದುವರೆವಿಗೂ ೬೫೦೦ ಸ್ತ್ರೀ ಶಕ್ತಿ ಗುಂಪುಗಳು ರಚನೆಯಾಗಿದ್ದು ರೂ.೭೧,೭೭,೮೧೬ಗಳನ್ನು ಉಳಿತಾಯ ಮಾಡಲಾಗಿದೆ. ೨೦೦೩–೦೪ನೇ ಸಾಲಿನಲ್ಲಿ ೪೨೭೬ ಗುಂಪುಗಳಿಗೆ ಇಲಾಖೆ ಮತ್ತು ಎಸ್.ಜಿ.ಎಸ್.ವೈ.ವತಿಯಿಂದ ರೂ.೨೯೫.೩೧ ಲಕ್ಷ ಸುತ್ತು ನಿಧಿಗಾಗಿ ಬಿಡುಗಡೆ ಮಾಡಿದ್ದು ಅರ್ಹ ಗುಂಪಿಗೆ ಹಣ ಪಾವತಿಸಿದೆ ಹಾಗೂ ೪,೨೭೬ ಗುಂಪುಗಳಿಗೆ ಲೆಕ್ಕ ಪತ್ರ ಸಾಲ ನಿರ್ವಹಣೆ ಮತ್ತು ಸಾಮಾಜಿಕ ತರಬೇತಿ ನೀಡಲಾಗುತ್ತದೆ.

**ಸ್ವಶಕ್ತಿ:** ವಿಧವೆಯರು, ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ವೃತ್ತಿ ತರಬೇತಿ ನೀಡಲಾಗುವುದು. ಅವರು ಉತ್ಪಾದನಾ ಘಟಕವನ್ನು ಪ್ರಾರಂಭಿಸಲು ಧನಸಹಾಯವನ್ನು ಮಾಡಲಾಗುವುದು.

## ಸಾಮಾಜಿಕ ಶಾಸನಗಳನ್ವಯ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ಕಾರ್ಯಕ್ರಮಗಳು

**ವೀಕ್ಷಣಾಲಯ**

ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳನ್ನು ಪೊಲೀಸ್ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸೂಚನೆಯ ಮೂಲಕ ವೀಕ್ಷಣಾಲಯಕ್ಕೆ ದಾಖಲು ಮಾಡಿಕೊಳ್ಳಲಾಗುತ್ತದೆ. ಈ ಮಕ್ಕಳು ಬೆಳೆದ ವಾತಾವರಣ ಅವರ ನಡುವಳಿಕೆಗಳನ್ನು ತಿಳಿಯುವ ಸಲುವಾಗಿ ಪರಿವೀಕ್ಷಣಾಧಿಕಾರಿಗಳು ವಿವರವಾದ ತನಿಖೆಯನ್ನು ನಡೆಸಲು ಮಕ್ಕಳನ್ನು ಮೂರು ತಿಂಗಳ ಕಾಲ ವೀಕ್ಷಣಾಲಯದಲ್ಲಿ ಇಡಲಾಗುವುದು. ಬಾಲಾಪರಾಧಿಗಳನ್ನು ಬಾಲ ನ್ಯಾಯಾಲಯದ ಮುಂದೆ ಮತ್ತು ಇತರ ಮಕ್ಕಳನ್ನು ಬಾಲ ಕಲ್ಯಾಣ ಮಂಡಳಿಯ ಮುಂದೆ ಹಾಜರು ಪಡಿಸಿ ಮಕ್ಕಳ ಮುಂದಿನ ಪುನರ್‌ವಸತಿಯ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ. ಬಾಲ ನ್ಯಾಯ ಕಾಯ್ದೆ ೧೯೪೬ರ ಅಡಿಯಲ್ಲಿ ಇಲಾಖೆಯು ಕೆ.ಜಿ.ಎಫ್.ನಲ್ಲಿ ಒಂದು ವೀಕ್ಷಣಾಲಯವನ್ನು ನಡೆಸುತ್ತಿದೆ. ನಿರ್ಲಕ್ಷ್ಯಕ್ಕೆ ಗುರಿಯಾದ ೧೦ ವರ್ಷದೊಳಗಿನ (ಬಾಲಕ) ಮತ್ತು ೧೮ ವರ್ಷದೊಳಗಿನ (ಬಾಲಕಿಯರ) ಬಾಲಾಪರಾಧಿಗಳನ್ನು ಬಾಲ ನ್ಯಾಯ ಕಾಯ್ದೆ ನಿಯಮಗಳ ಮೇರೆಗೆ ಇಲ್ಲಿ ದಾಖಲಿಸಿಕೊಳ್ಳಲಾಗುವುದು. ವೀಕ್ಷಣಾಲಯದ ಪರಿವೀಕ್ಷಣಾಧಿಕಾರಿಗಳು ಇವರ ಬಗ್ಗೆ ತನಿಖೆ ಮಾಡಿ ವರದಿಗಳನ್ನು ಬಾಲ ನ್ಯಾಯಾಲಯ ಅಥವಾ ಬಾಲ ನ್ಯಾಯ ಮಂಡಳಿಗೆ ಸಲ್ಲಿಸುತ್ತಾರೆ.

**ಕೋಷ್ಟಕ ೧೬.೨೮: ವೀಕ್ಷಣಾಲಯ ತನಿಖೆಗೆ ಒಳಪಟ್ಟ ಮಕ್ಕಳ ವಿವರ**

| ವರ್ಷ | ಪ್ರಾರಂಭದ ನಿವಾಸಿಗಳ ಸಂಖ್ಯೆ | | ದಾಖಲಾದ ನಿವಾಸಿಗಳ ಸಂಖ್ಯೆ | | ಬಿಡುಗಡೆಯಾದ ನಿವಾಸಿಗಳ ಸಂಖ್ಯೆ | | ವರ್ಷದ ಅಂತ್ಯದಲ್ಲಿ ನಿವಾಸಿಗಳ ಸಂಖ್ಯೆ | |
|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧೯೯೭-೯೮ | ೧೭ | ೦೧ | ೧೦೦ | ೦೪ | ೧೦೫ | ೦೩ | ೧೨ | ೦೨ |
| ೧೯೯೮-೯೯ | ೧೨ | ೨ | ೧೦೦ | ೦೫ | ೯೧ | ೦೪ | ೨೧ | ೦೩ |
| ೧೯೯೯-೨೦೦೦ | ೨೧ | ೦೩ | ೮೫ | ೧೦ | ೯೩ | ೦೯ | ೧೩ | ೦೪ |
| ೨೦೦೦-೦೧ | ೧೩ | ೦೪ | ೮೧ | ೧೭ | ೭೯ | ೧೭ | ೧೫ | ೦೪ |
| ೨೦೦೧-೦೨ | ೧೫ | ೦೪ | ೭೩ | ೧೩ | ೭೮ | ೧೫ | ೧೦ | ೦೨ |
| ೨೦೦೨-೦೩ | ೧೦ | ೦೨ | ೭೯ | ೧೩ | ೭೬ | ೧೩ | ೧೩ | ೦೨ |
| ೨೦೦೩-೦೪ | ೧೩ | ೦೨ | ೬೬ | ೧೨ | ೭೮ | ೧೨ | ೦೧ | ೦೨ |

ಮೂಲ: ವೀಕ್ಷಣಾಲಯದ ಪರಿವೀಕ್ಷಣಾಧಿಕಾರಿ – ಕೆ.ಜಿ.ಎಫ್.

**ಬಾಲಮಂದಿರ**

ಕೆ.ಜಿ.ಎಫ್. ನಲ್ಲಿ ಒಂದು ಬಾಲ ಮಂದಿರವನ್ನು ನಡೆಸಲಾಗುತ್ತಿದೆ. ಬಾಲ ನ್ಯಾಯಾಲಯ ಅಥವಾ ಬಾಲ ನ್ಯಾಯ ಮಂಡಳಿಯು ಬಾಲ ಮಂದಿರಕ್ಕೆ ಸೇರಿಸಲು ತೀರ್ಮಾನ ತೆಗೆದುಕೊಂಡ ಮಕ್ಕಳನ್ನು ಇಲ್ಲಿ ಸೇರಿಸಿಕೊಳ್ಳಲಾಗುವುದು. ಈ ಬಾಲ ಮಂದಿರದಲ್ಲಿ ಮಕ್ಕಳಿಗೆ ಊಟ, ವಸತಿ, ವೈದ್ಯೋಪಚಾರ, ಶಿಕ್ಷಣ ಮತ್ತು ತರಬೇತಿಗಳನ್ನು ನೀಡಲಾಗುವುದು.

೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ನೇ ಸಾಲುಗಳಲ್ಲಿ ಕೆ.ಜಿ.ಎಫ್.ದ ಬಾಲಮಂದಿರದಲ್ಲಿ ದಾಖಲುಗೊಂಡ ಮಕ್ಕಳ ಸಂಖ್ಯೆಯು ಕ್ರಮವಾಗಿ ೯೧, ೯೧ ಹಾಗೂ ೮೦ ಆಗಿದ್ದು ಅವರ ಪುನರ್ವಸತಿಗಾಗಿ ಮಾಡಿದ ವೆಚ್ಚವು ಕ್ರಮವಾಗಿ ರೂ.೪,೬೦,೪೦೨ ಹಾಗೂ ೪,೬೨,೯೩೧ ಆಗಿದ್ದಿತು. ೨೦೦೩-೦೪ನೇ ಸಾಲಿನಲ್ಲಿ ೬೮ ಮಕ್ಕಳು ಆಶ್ರಯ ಪಡೆದಿರುತ್ತಾರೆ.

**ಸ್ವೀಕಾರ ಕೇಂದ್ರ :** ಪೋಷಣೆ, ರಕ್ಷಣೆ ಮತ್ತು ಆಶ್ರಯದ ಅಗತ್ಯವಿರುವ ಮತ್ತು ಅನೈತಿಕ ವ್ಯವಹಾರಗಳ ಕಾರಣವಾಗಿ ಪುನರ್ವಸತಿಗಾಗಿ ನ್ಯಾಯಾಲಯ ಕಳುಹಿಸಿರುವ ಮಹಿಳೆಯರನ್ನು ಮತ್ತು ಬಾಲಕಿಯರನ್ನು ಸ್ವೀಕರಿಸಲು ಕೆ.ಜಿ.ಎಫ್. ನಲ್ಲಿ ಒಂದು ಸ್ವೀಕಾರ ಕೇಂದ್ರವನ್ನು ನಡೆಸಲಾಗುತ್ತಿದೆ. ಕೇಂದ್ರದಲ್ಲಿರುವ ಈ ಮಹಿಳೆಯರಿಗೆ ಊಟ, ವಸತಿ, ಊಟೋಪಚಾರಗಳನ್ನು ಮಾಡಿ ಸರಳ ವೃತ್ತಿಗಳಲ್ಲಿ ತರಬೇತಿಯನ್ನು ಕೊಡಲಾಗುವುದು. ಪ್ರಸ್ತುತ (೨೦೦೩-೦೪)ದಲ್ಲಿ ಇಬ್ಬರು ನಿವಾಸಿಗಳು ಆಶ್ರಯ ಪಡೆದಿರುತ್ತಾರೆ.

**ಬಾಲಸೇವಾ ಸಂಸ್ಥೆ:**

ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನಲ್ಲಿ ಬಾಲ ಸೇವಾ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆ ಕೊಳಚೆ ಪ್ರದೇಶದ ಮಕ್ಕಳಿಗೆ ಕ್ರೀಡಾ ಕೇಂದ್ರಗಳನ್ನು ಸ್ಥಾಪಿಸಿ ಸೂಕ್ತವಾದ ಮಾರ್ಗದರ್ಶನ ನೀಡುವುದು. ಈ ಮೂಲಕ ಬಾಲಾಪರಾಧಗಳನ್ನು ತಡೆಗಟ್ಟಲು ಬಾಲ ಸೇವಾ ಸಂಸ್ಥೆ ಪ್ರಯತ್ನಿಸುತ್ತಿದೆ. ಕೆ.ಜಿ.ಎಫ್.ನ ನಾಲ್ಕು ಕೊಳಚೆ ಪ್ರದೇಶಗಳಲ್ಲಿ ಕ್ರೀಡಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ. ಕೊಳಚೆ ಪ್ರದೇಶದ ಜನರಿಗೆ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ತಿಳುವಳಿಕೆ ನೀಡಿ ಆ ಸೌಲಭ್ಯಗಳನ್ನು ಪಡೆಯಲು ಅನುಕೂಲ ಮಾಡಿಕೊಡಲಾಗುತ್ತಿದೆ. ೨೦೦೩-೦೪ನೇ ಸಾಲಿನಲ್ಲಿ ೨೦೦ ಮಕ್ಕಳು ಪಡೆದಿರುವರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಬಡತನದ ಅಂಚಿನಲ್ಲಿರುವ ಮಹಿಳೆಯರ ಅಭಿವೃದ್ಧಿಗಾಗಿ ಮತ್ತು ಅವರ ಸಾಮರ್ಥ್ಯವನ್ನು ಹೆಚ್ಚಿಸಿ ಅವರನ್ನು ಸ್ವಾವಲಂಬಿಗಳಾಗಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

**ಮನೆ ಬೆಳಕು:** ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಬ್ಯಾಂಕುಗಳ ಮೂಲಕ ರೂ.೨೫,೦೦೦ ರವರೆಗೆ ಸಾಲ ಸೌಲಭ್ಯವನ್ನು ಕೊಡಿಸುವ ವ್ಯವಸ್ಥೆ ಮಾಡಿ, ನಿಗಮವು ಈ ಸಾಲಕ್ಕೆ ಶೇ. ೨೫ ಅಥವಾ ಗರಿಷ್ಠ ರೂ. ೫೦೦೦ ಗಳ ಸಬ್ಸಿಡಿಯನ್ನು ನೀಡುವುದು. **ಉದ್ಯೋಗಿನಿ:** ಮಹಿಳಾ ಉದ್ಯಮಿಗಳು ವ್ಯಾಪಾರ ಮತ್ತು ಸೇವಾ ಚಟುವಟಿಕೆಗಳನ್ನು ಕೈಗೊಳ್ಳಲು ಬ್ಯಾಂಕುಗಳ ಮೂಲಕ ಗರಿಷ್ಠ ರೂ.೫೦,೦೦೦ ಸಾಲ ನೀಡುವ ವ್ಯವಸ್ಥೆ ಮಾಡಿದೆ. ಸಾಲದ ಮೊತ್ತದ ಶೇ.೨೫ ರಷ್ಟು ಸಬ್ಸಿಡಿಯನ್ನು ನಿಗಮ ಕೊಡುತ್ತದೆ. ವಿಧವೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮಹಿಳೆಯರಿಗೆ ಮತ್ತು ಅಂಗವಿಕಲ ಮಹಿಳೆಯರಿಗೆ ಇವರುಗಳಿಗೆ ಸಾಲವನ್ನು ನೀಡುವ ವ್ಯವಸ್ಥೆಮಾಡಿರುವುದಲ್ಲದೆ ಸಾಲದ ಮೊತ್ತದಲ್ಲಿ ಶೇ.೪೦ರಷ್ಟು ಸಬ್ಸಿಡಿಯನ್ನು ನೀಡಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ (೨೦೦೩-೦೪) ೧೧೯ ಮಹಿಳೆಯರಿಗೆ ೭,೦೨,೫೦೦ ರೂ.ಗಳ ಸಬ್ಸಿಡಿಯನ್ನು ಬಿಡುಗಡೆ ಮಾಡಲಾಗಿದೆ. **ಇತರೆ ತರಬೇತಿ ಕಾರ್ಯಕ್ರಮ :** ಮಹಿಳೆಯರು ಸ್ವಯಂ ಉದ್ಯೋಗಿಗಳಾಗ ಬಯಸಿದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅವರಿಗೆ ತರಬೇತಿಯನ್ನು ನೀಡುವ ವ್ಯವಸ್ಥೆ ಮಾಡಿದೆ. ಈ ಯೋಜನೆಯ ಪ್ರಕಾರ ಫಲಾನುಭವಿಗಳ ಕೌಟುಂಬಿಕ ವಾರ್ಷಿಕ ಆದಾಯ ರೂ.೧೨,೦೦೦ ಗಳಿಗಿಂತ ಕಡಿಮೆಯಾಗಿರಬೇಕು. ತರಬೇತಿಗೆ ಬರುವ ಮಹಿಳೆಗೆ ಮಾಸಿಕ ರೂ.೧೦೦ ಗಳ ಶಿಷ್ಯ ವೇತನವನ್ನು ನೀಡುವ ವ್ಯವಸ್ಥೆ ಇದೆ. ತರಬೇತಿ ಸಮಯದಲ್ಲಿ ಕಚ್ಚಾ ಸಾಮಗ್ರಿಗಳಿಗೆ, ಕಟ್ಟಡದ ಬಾಡಿಗೆ, ಶಿಕ್ಷಕರಿಗೆ ವೇತನ ಮುಂತಾದವುಗಳನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತದೆ. ೧೯೯೯-೨೦೦೦ ನೇ ಸಾಲಿನಲ್ಲಿ ಕೆ.ಜಿ.ಎಫ್.ನ ಲಿಡ್ಕರ್ ಸಂಸ್ಥೆಯ ಮೂಲಕ ೩೦ ಮಹಿಳೆಯರಿಗೆ ೩ ತಿಂಗಳ ಕಾಲ ಸುರಕ್ಷಿತ ಕೈ ಕವಚಗಳ ತಯಾರಿಕೆಯಲ್ಲಿ ತರಬೇತಿ ನೀಡಲಾಗಿತ್ತು. ಇದಲ್ಲದೆ ಹೊಲಿಗೆ ತರಬೇತಿಯಲ್ಲಿ ಮೂರು ಮಹಿಳಾ ಮಂಡಳಿಗಳ ಮೂಲಕ ಹತ್ತು ಮಹಿಳೆಯರಿಗೆ ತರಬೇತಿ ನೀಡಲಾಗಿತ್ತು. **ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮ :** ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ ಸ್ವಯಂ ಉದ್ಯೋಗ ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಹಣಕಾಸಿನ ಸಂಸ್ಥೆಗಳು ಬ್ಯಾಂಕುಗಳು ಮುಂತಾದವುಗಳ ಬಗ್ಗೆ ಅಲ್ಲದೆ ಸರ್ಕಾರಿ ವಲಯಗಳಲ್ಲಿ ಸಿಗಬಹುದಾದ ಆರ್ಥಿಕ ಸಹಾಯದ ಬಗ್ಗೆ ಮಾಹಿತಿ ನೀಡುವ ವ್ಯವಸ್ಥೆ ಇದೆ. ಇದನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮಾಡಲಾಗುತ್ತದೆ. ಈ ಕಾರ್ಯಕ್ರಮವನ್ನು ತಂಡ ತಂಡವಾಗಿ ಮಾಡಿ, ಪ್ರತಿ ತಂಡದಲ್ಲಿಯೂ ೧೦೦ ಮಹಿಳೆಯರಿದ್ದು, ೨ ದಿನಗಳ ಕಾಲ ಈ ಕಾರ್ಯಕ್ರಮವನ್ನು ಜಾಗೃತಿ ಎನ್ನುವ ಶೀರ್ಷಿಕೆಯಡಿ ನಡೆಸಲಾಗುತ್ತಿದೆ. **ಕಂಪ್ಯೂಟರ್ ತರಬೇತಿ:** ಮಹಿಳೆಯರಿಗೆ ನಾಲ್ಕು ತಿಂಗಳ ಮತ್ತು ಆರು ತಿಂಗಳ ಎರಡು ಕಂಪ್ಯೂಟರ್ ತರಬೇತಿ ತರಗತಿಗಳನ್ನು (ಕೋರ್ಸ್‌ಗಳನ್ನು) ಉಚಿತವಾಗಿ ನಡೆಸಲಾಗುತ್ತಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ೫೦ ಅಂಕಗಳು ಪಡೆದಿರುವ ಮಹಿಳೆಯರಿಗೆ ನಾಲ್ಕು ತಿಂಗಳ ಕೋರ್ಸಿನಲ್ಲಿ, ಪಿ.ಯು.ಸಿ. ಯಲ್ಲಿ ಶೇ.೫೦ ಅಂಕಗಳು ಮತ್ತು ಪದವಿ ಪರೀಕ್ಷೆಯಲ್ಲಿ ಶೇ.೪೫ ರಷ್ಟು ಅಂಕಗಳನ್ನು ಪಡೆದಿರುವ ಮಹಿಳೆಯರಿಗೆ ೬ ತಿಂಗಳ ತರಬೇತಿಯನ್ನು ನೀಡಲಾಗುವುದು. ೨೦೦೦ ನೇ ಸಾಲಿನ ವರ್ಷದಲ್ಲಿ ೮೪ ಮಹಿಳೆಯರಿಗೆ ತರಬೇತಿ ನೀಡಲು ರೂ.೨,೦೮,೦೦೦ ಗಳನ್ನು ವೆಚ್ಚ ಮಾಡಲಾಗಿದೆ.

## ಅಂಗವಿಕಲರ ಕಲ್ಯಾಣ

ಅಂಗವಿಕಲತೆಗೆ ಕೇವಲ ಸಹಾನುಭೂತಿ ವ್ಯಕ್ತಪಡಿಸಿದರೆ ಸಾಲದು. ಅಂಗವಿಕಲರು ಎಲ್ಲರಂತೆ ಬದುಕುವುದಕ್ಕೆ ಅಗತ್ಯವಾದ ನೆರವು ನೀಡುವುದು ಮತ್ತು ಅವರಿಗೆ ಬಾಳಿನಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು, ಸಮಾಜದ ಮತ್ತು ಸರ್ಕಾರದ ಜವಾಬ್ದಾರಿ. ಸ್ವಾತಂತ್ರ್ಯ ಪೂರ್ವದಲ್ಲಿ ಅಂಗವಿಕಲರ ಕಲ್ಯಾಣದ ಬಗ್ಗೆ ಸರ್ಕಾರ ಹೆಚ್ಚು ಗಮನ ಹರಿಸಿರಲಿಲ್ಲ ಆದರೆ ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಈ ಸಂಬಂಧಿಸಿದ ಕಾರ್ಯಗಳನ್ನು ಮೊದಲು ಮಹಿಳಾ ಮತ್ತು ಕಲ್ಯಾಣ ಇಲಾಖೆಯೇ ಮಾಡುತ್ತಿತ್ತು. ನಂತರ ರಾಜ್ಯ ಸರ್ಕಾರ ೧-೮-೮೮ ರಂದು ಅಂಗವಿಕಲರ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ತೆರೆಯಿತು. ದೇಹದ ಯಾವುದಾದರೂ ಒಂದು ಅಥವಾ ಹೆಚ್ಚು ಅಂಗಾಂಗಗಳು ಊನವಾಗಿದ್ದು, ಅದರಿಂದ ಅವರ ಶಕ್ತಿ, ಸಾಮರ್ಥ್ಯಗಳು ಕ್ಷೀಣಗೊಂಡಿದ್ದರೆ, ಅಥವಾ ಯಾವುದೇ ವ್ಯಕ್ತಿ ತನ್ನ ದೈನಂದಿನ ಕ್ರಿಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ ಅಂತಹ ವ್ಯಕ್ತಿಯನ್ನು ಅಂಗವಿಕಲನೆಂದು ಪರಿಗಣಿಸಲಾಗುತ್ತದೆ. ಅಂಗವಿಕಲತೆಯಲ್ಲಿ ದೈಹಿಕ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣ ದೋಷದಿಂದ ಕೂಡಿರುವವರು, ಕುಷ್ಠರೋಗ ನಿವಾರಿತ ಅಂಗವಿಕಲರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಕಲತೆಯುಳ್ಳವರು ಎಂದು ವರ್ಗೀಕರಣ ಮಾಡಲಾಗಿದೆ.

ಅಂಗವಿಕಲರು ಎಲ್ಲರಂತೆ ಬದುಕಲು ಬೇಕಾದದ್ದು ಶಿಕ್ಷಣ ಮತ್ತು ಉದ್ಯೋಗ. ಅವರು ಆರಿಸಿಕೊಳ್ಳುವ ವೃತ್ತಿಗೆ ಬೇಕಾದ ತರಬೇತಿ ಅಷ್ಟೇ ಆದರೆ ಸಾಲದು ಅವರು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಟ್ಟು, ಸಾಮಾಜಿಕ ಭದ್ರತೆಯ ಬಗ್ಗೆ ಆಶ್ವಾಸನೆ ನೀಡಬೇಕು. ಹೀಗಾದಲ್ಲಿ ಅವರು ದೇಶದ ಕ್ರಿಯಾಶೀಲ ಪ್ರಜೆಗಳಾಗುವುದರಲ್ಲಿ ಸಂದೇಹವಿಲ್ಲ. ಅಂಗವಿಕಲರ ಕಲ್ಯಾಣಕ್ಕಾಗಿ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿದ್ದು ಅವುಗಳನ್ನು ಕಾರ್ಯಗತಗೊಳಿಸುತ್ತಿದೆ.

### ಶೈಕ್ಷಣಿಕ ಯೋಜನೆಗಳು

ಒಂದರಿಂದ ಐದನೇ ತರಗತಿಯಲ್ಲಿ ಓದುತ್ತಿರುವ ಅಂಗವಿಕಲರಿಗೆ ಮಾಹೆಯಾನ ರೂ.೨೫, ೫ ರಿಂದ ೯ನೇ ತರಗತಿಯವರೆಗೆ ಓದುತ್ತಿರುವ ಅಂಗವಿಕಲರಿಗೆ ಮಾಹೆಯಾನ ರೂ.೩೫, ೯ ರಿಂದ ಪಿಯುಸಿವರೆಗೆ ಓದುತ್ತಿರುವ ಅಂಗವಿಕಲರಿಗೆ ರೂ.೯೫, ದ್ವಿತೀಯ ಪದವಿಯ ನಂತರದ ಅಂಗವಿಕಲ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೧೨೫, ಸ್ನಾತಕೋತ್ತರ ಪದವಿಯವರಿಗೆ ಅಥವಾ ಡಿಪ್ಲೋಮೋ ವಿದ್ಯಾರ್ಥಿಗಳಿಗೆ ಹಾಗೂ ತಾಂತ್ರಿಕ ಪದವಿ ಅಂಗವಿಕಲ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೧೬೫/- ರಂತೆ ಕೊಡಲು ಅವಕಾಶವಿದೆ. ವಿದ್ಯಾರ್ಥಿ ವೇತನದ ಜೊತೆಗೆ ಅಂಥ ವಿದ್ಯಾರ್ಥಿಗಳಿಗಾಗಿ ಸಾರಿಗೆ ಭತ್ಯೆವನ್ನು ನೀಡಲಾಗುವುದು.

೨೦೦೦-೦೧, ೨೦೦೧-೦೨ ಹಾಗೂ ೨೦೦೨-೦೩ ಈ ಸಾಲುಗಳಲ್ಲಿ ಜಿಲ್ಲೆಯಲ್ಲಿ ವಿದ್ಯಾರ್ಥಿ ವೇತನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಹಾಗೂ ಬಿಡುಗಡೆ ಆದ ಅನುದಾನ ಹಾಗೂ ವೆಚ್ಚಗಳನ್ನು ಕೋಷ್ಟಕ ೧೬.೩೧ರಲ್ಲಿ ಕೊಟ್ಟಿದೆ.

**ಕೋಷ್ಟಕ ೧೬.೨೯**

| ಕ್ರ.ಸಂ | ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ (ರೂ. ಗಳಲ್ಲಿ) | ಬಿಡುಗಡೆ ಅನುದಾನ ರೂ.ಗಳಲ್ಲಿ |
|---|---|---|---|---|
| ೧ | ೨೦೦೦-೦೧ | ೯೭ | ೪೦೦೦೦೦ | ೪,೦೦,೦೦೦ |
| ೨ | ೨೦೦೧-೦೨ | ೪೧೧ | ೪೦೫೦೦೦ | ೪,೪೫,೦೦೦ |
| ೩ | ೨೦೦೨-೦೩ | ೪೨೫ | ೪೧೦೦೦೦ | ೪,೧೦,೦೦೦ |

ಮೂಲ: ಜಿಲ್ಲಾ ಕಚೇರಿ ಅಂಗವಿಕಲರ ಅಭಿವೃದ್ಧಿ ಇಲಾಖೆ, ಕೋಲಾರ

**ತ್ರಿಚಕ್ರ ವಾಹನಗಳ ವಿತರಣೆ:** ಜಿಲ್ಲೆಯಲ್ಲಿ ೨೦೦೨-೦೩ ಹಾಗೂ ೨೦೦೩-೦೪ನೇ ಸಾಲುಗಳಲ್ಲಿ ಕ್ರಮವಾಗಿ ೪೪ ಹಾಗೂ ೨೮ ಅಂಗವಿಕಲರಿಗೆ ತ್ರಿಚಕ್ರವಾಹನ ನೀಡಲಾಗಿದೆ.

**ಅಂಗವಿಕಲರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯ ಯೋಜನೆ: (ಆಧಾರ ಯೋಜನೆ)**

ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ೧೧ ಪುರುಷರು, ಏಳು ಮಹಿಳೆಯರು ಸೇರಿದಂತೆ ೧೮ ಅಂಗವಿಕಲರಿಗೆ ಆಧಾರ ಪೆಟ್ಟಿಗೆಗಳನ್ನು ಹಾಗೂ ತಲಾ ೬೦೦೦ ರೂ.ಗಳ ಚೆಕ್‌ಅನ್ನು ವಿತರಿಸಲಾಗಿದೆ. ಈ ಯೋಜನೆಯಡಿ ಸ್ವಯಂ ಉದ್ಯೋಗಿಗಳಾಗಲು ಸಣ್ಣ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಲು ಧನಸಹಾಯ ನೀಡಲಾಗುವುದು. ವ್ಯಾಪಾರ ಮಾಡಲು ಬಂಡವಾಳ ರೂಪದಲ್ಲಿ ರೂ.೬೦೦೦ ಗಳ ಬಡ್ಡಿರಹಿತ ಸಾಲವನ್ನು ನೀಡಲು ಸಹ ಅವಕಾಶವಿದೆ.

ವಿದ್ಯಾರ್ಥಿವೇತನ: ಜಿಲ್ಲೆಯಲ್ಲಿ ೨೦೦೩-೦೪ನೇ ಸಾಲಿನಲ್ಲಿ ೧೬೫ ಅಂಗವಿಕಲ ವಿದ್ಯಾರ್ಥಿಗಳಿಗೆ ೧.೬೧ ಲಕ್ಷ ರೂ. ವಿದ್ಯಾರ್ಥಿವೇತನ ಮಂಜೂರು ಮಾಡಿದೆ. ಪ್ರತಿಭಾವಂತ ಅಂಗವಿಕಲರಿಗೆ ಸ್ವಯಂ ಉದ್ಯೋಗ ಪ್ರೋತ್ಸಾಹ ನೀಡುವ ಯೋಜನೆಯಡಿ ಜಿಲ್ಲೆಯಲ್ಲಿ ೮ ಜನ ಅಂಧರಿಗೆ ಬ್ರೈಲ್ ಓದುವ ಸಲಕರಣೆ ನೀಡಲಾಗಿದೆ.

**ಪ್ರತಿಭಾವಂತ ಅಂಗವಿಕಲರಿಗೆ ಪ್ರೋತ್ಸಾಹ ಧನ**

ಶೇ. ೬೦ ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲರಿಗೆ ಪ್ರೋತ್ಸಾಹ ನೀಡಲು ಈ ವಿಶೇಷ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸಿದೆ. ಜಿಲ್ಲೆಯಲ್ಲಿ ೨೦೦೩-೦೪ನೇ ಸಾಲಿನಲ್ಲಿ ೧೨ ವಿದ್ಯಾರ್ಥಿಗಳಿಗೆ ೧೦,೦೦೦ ರೂ.ಗಳ ಪ್ರೋತ್ಸಾಹಧನ ನೀಡಲಾಗಿದೆ.

**ಕೋಷ್ಟಕ ೧೬.೩೦: ಪ್ರೋತ್ಸಾಹ ಧನ ಬಹುಮಾನ ಯೋಜನೆ**

| ಕ್ರ.ಸಂ | ವರ್ಷ | ಎಸ್.ಎಸ್.ಎಲ್.ಸಿ. | ಪಿ.ಯು.ಸಿ. | ಬಿ.ಎ/ ಬಿ.ಎಸ್‌ಸಿ/ ಬಿ.ಕಾಮ್. | ಎಂ.ಎ./ ಎಂ.ಎಸ್‌ಸಿ | ಒಟ್ಟು |
|---|---|---|---|---|---|---|
| ೧ | ೨೦೦೧-೦೧ | ೦೧ | ೦೨ | - | - | ೦೩ |
| ೨. | ೨೦೦೧-೦೨ | ೦೪ | ೦೬ | - | - | ೧೦ |
| ೩. | ೨೦೦೨-೦೩ | ೦೨ | ೦೪ | ೦೩ | ೦೧ | ೧೦ |
| ೪. | ೨೦೦೩-೦೪ | ೦೧ | ೦೫ | ೦೩ | - | ೦೯ |

ಮೂಲ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ

**ಗುರುತಿನ ಚೀಟಿ ವಿತರಣೆ:** ಜಿಲ್ಲೆಯ ವಿವಿಧ ಬಗೆಯ ಅಂಗವಿಕಲರಿಗೆ ೧೬೬೩ ಗುರುತಿನ ಚೀಟಿಗಳನ್ನು ವಿತರಣೆ ಮಾಡಿದೆ. **ಅಂಗವಿಕಲರ ದಿನಾಚರಣೆ:** ಈ ಯೋಜನೆಯಡಿ ಜಿಲ್ಲೆಯ ಅಂಗವಿಕಲರಿಗೆ ವಿಶ್ವ ಅಂಗವಿಕಲರ ದಿನಾಚರಣೆ ಸಂದರ್ಭದಲ್ಲಿ ೨೩-೧೨-೨೦೦೩ರಂದು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಜಿಲ್ಲೆಯ ಒಂದೂವರೆ ಸಾವಿರಕ್ಕಿಂತ ಹೆಚ್ಚು ಅಂಗವಿಕಲರು ಇದರಲ್ಲಿ ಭಾಗವಹಿಸಿದ್ದರು. ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ೩೩೮ ಕ್ರೀಡಾಪಟುಗಳು ಬಹುಮಾನ ಪಡೆದರು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ೮೦ ಅಂಗವಿಕಲರಿಗೆ ಪ್ರತಿಭಾ ಪುರಸ್ಕಾರ ಬಹುಮಾನ ವಿತರಿಸಲಾಯಿತು. **ಟೆಲಿಫೋನ್ ಬೂತ್:** ಜಿಲ್ಲೆಯ ಮೂವರು ಅಂಗವಿಕಲರಿಗೆ ಟೆಲಿಫೋನ್ ಬೂತ್‌ಗಳನ್ನು ವಿತರಿಸಲಾಗಿದೆ. **ಉಚಿತ ಬಸ್ ಪಾಸ್:** ೨೦೦೩-೦೪ನೇ ಸಾಲಿನಲ್ಲಿ ರಿಯಾಯಿತಿ ದರದಲ್ಲಿ ೧,೩೯೮ ಅಂಗವಿಕಲರಿಗೆ ಬಸ್ ಪಾಸ್ ವಿತರಿಸಲಾಗಿದೆ.

**ಇತರ ಕಲ್ಯಾಣ ಯೋಜನೆಗಳು**

**ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನ:** ವೃದ್ಧಾಪ್ಯ ವೇತನ ಯೋಜನೆಯನ್ನು ಕರ್ನಾಟಕ ಸರ್ಕಾರವು ೧೯೬೫ ರಲ್ಲಿ ಪ್ರಾರಂಭಿಸಿತು. ಅದೇ ವರ್ಷದಲ್ಲಿ ೨೬೫ ವೃದ್ಧರು ಇದರ ಸೌಲಭ್ಯವನ್ನು ಪಡೆದರು. ಇದಕ್ಕಾಗಿ ರೂ.೪೧೨೫ ಗಳನ್ನು

ವೆಚ್ಚ ಮಾಡಲಾಯಿತು ೭೦ ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿದ್ದು, ಆತನಿಗೆ ೨೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿರುವ ಹಾಗೂ ಯಾವುದೇ ವಿಧವಾದ ಆದಾಯವೂ ಇರದ, ವ್ಯಕ್ತಿಯು ವೃದ್ಧಾಪ್ಯ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಅಂಗವಿಕಲರಾದರೆ, ಈ ವೇತನ ಪಡೆಯಲು ಕನಿಷ್ಠ ೬೫ ವರ್ಷವಾಗಿರಬೇಕು. ಕಾಲಕ್ರಮೇಣ, ಈ ವಯೋಮಿತಿಯನ್ನು ಅಂಗವಿಕಲರಿಗೆ ೧೯೭೪ರಲ್ಲಿ ೪೫ ವರ್ಷಕ್ಕೂ, ೧೯೭೭ರಲ್ಲಿ ೧೭ ವರ್ಷಕ್ಕೂ ಇಳಿಸಲಾಯಿತು. ೧೯೭೯ರಲ್ಲಿ ಅಂಗವಿಕಲರಿಗೆ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು. ಇದೇ ಸೌಲಭ್ಯವನ್ನು ಬುದ್ಧಿಮಾಂದ್ಯ ವ್ಯಕ್ತಿಗಳಿಗೂ ಕೊಡಲಾಯಿತು. ವೃದ್ಧಾಪ್ಯ ವೇತನದ ದರವನ್ನು ೧೯೯೧ ರ ಏಪ್ರಿಲ್ ನಿಂದ ರೂ.೭೫ ಗಳಿಗೂ ೧೯೯೬ ರಿಂದ ೧೦೦ ಗಳಿಗೂ ಹೆಚ್ಚಿಸಲಾಯಿತು. ಈ ಯೋಜನೆ ಪ್ರಾರಂಭವಾದಾಗಿನಿಂದ ಮಾರ್ಚ್ ೨೦೦೧ ರವರೆಗೆ ಪರಿಶಿಷ್ಟ ಜಾತಿಯವರು, ಪರಿಶಿಷ್ಟ ಪಂಗಡದವರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರು ಫಲಾನುಭವಿಗಳಾಗಿದ್ದಾರೆ.

೧೯೯೮ ರಿಂದ ೨೦೦೪ ರವರೆಗೆ ವೃದ್ಧಾಪ್ಯ ವೇತನ ಸೌಲಭ್ಯ ಪಡೆದ ಫಲಾನುಭವಿಗಳ ತಾಲೂಕುವಾರು ಮಾಹಿತಿಯನ್ನು ಕೋಷ್ಟಕದಲ್ಲಿ ನೋಡಬಹುದು. ಅದೇ ರೀತಿ ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಕೊಟ್ಟಿರುವ ವೇತನದ ಅಂಕಿ ಅಂಶಗಳನ್ನು ಈ ಮುಂದಿನ ಕೋಷ್ಟಕಗಳಲ್ಲಿ ನೀಡಿದೆ.

**ಕೋಷ್ಟಕ ೧೬.೩೧: ಕೋಲಾರ ಜಿಲ್ಲೆಯಲ್ಲಿ ವಿತರಣೆಯಾದ ವೃದ್ಧಾಪ್ಯ ವೇತನದ ವಿವರ**

| ತಾಲ್ಲೂಕಿನ ಹೆಸರು | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
|---|---|---|---|---|---|---|
| **ಬಾಗೇಪಲ್ಲಿ** | ೧೦೭೪ | ೧೧೨೯ | ೧೯೯೮ | ೧೨೪೯ | ೧೩೦೨ | ೧೧೪೧ |
| **ಬಂಗಾರಪೇಟೆ** | ೧೩೫೫ | ೧೪೫೬ | ೧೫೦೧ | ೧೫೪೯ | ೧೬೦೬ | ೧೭೩೫ |
| **ಚಿಕ್ಕಬಳ್ಳಾಪುರ** | ೧೭೫೩ | ೧೮೪೮ | ೧೯೪೪ | ೨೦೪೬ | ೨೨೮೮ | ೨೩೭೪ |
| **ಚಿಂತಾಮಣಿ** | ೧೭೦೦ | ೧೬೪೦ | ೧೯೭೯ | ೨೧೨೭ | ೧೧೮೦ | ೨೯೬೦ |
| **ಗೌರಿಬಿದನೂರು** | ೯೦೪ | ೯೩೬ | ೯೮೭ | ೧೦೭೯ | ೧೧೮೦ | ೧೭೬೧ |
| **ಗುಡಿಬಂಡೆ** | ೫೯೬ | ೬೧೫ | ೬೪೨ | ೬೫೮ | ೬೬೮ | ೭೧೦ |
| **ಕೋಲಾರ** | ೧೦೧೭ | ೧೨೧೯ | ೧೪೯೫ | ೧೭೫೭ | ೧೯೬೪ | ೨೨೪೯ |
| **ಮಾಲೂರು** | ೧೬೮೫ | ೧೭೪೯ | ೧೮೦೨ | ೧೮೬೪ | ೧೯೩೬ | ೨೦೫೭ |
| **ಮುಳಬಾಗಿಲು** | ೩೫೪೨ | ೩೭೩೧ | ೩೮೫೧ | ೧೪೮೯೧ | ೨೦೧೦ | ೩೭೭೯ |
| **ಶಿಡ್ಲಘಟ್ಟ** | ೧೬೫೧ | ೧೭೪೭ | ೧೮೨೮ | ೧೯೨೬ | ೩೦೩೧ | ೨೨೨೧ |
| **ಶ್ರೀನಿವಾಸಪುರ** | ೨೪೯೫ | ೨೬೮೧ | ೨೮೧೩ | ೨೯೩೩ | ೩೦೩೧ | ೪೨೯೦ |
| **ಕೆ.ಜಿ.ಎಫ್.** | ೭೮೪೭ | ೭೯೪೯ | ೮೦೪೫ | ೮೧೬೫ | ೮೧೧೦ | ೧೦೨೨೪ |

ಮೂಲ: ಜಿಲ್ಲಾ ಖಜಾನಾಧಿಕಾರಿ, ಕೋಲಾರ

**ಕೋಷ್ಟಕ ೧೬.೩೨: ಕೋಲಾರ ಜಿಲ್ಲೆಯಲ್ಲಿ ವಿತರಣೆಯಾದ ಅಂಗವಿಕಲರ ವೇತನ ವಿವರ**

| ತಾಲ್ಲೂಕಿನ ಹೆಸರು | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| **ಬಾಗೇಪಲ್ಲಿ** | ೧೦೭೪ | ೧೦೬೫ | ೧೯೯೨ | ೧೧೩೧ | ೧೧೭೧ | ೧೦೫೯ |
| **ಬಂಗಾರಪೇಟೆ** | ೬೪೨ | ೬೭೯ | ೬೮೧ | ೭೦೨ | ೭೨೦ | ೭೫೬ |
| **ಚಿಕ್ಕಬಳ್ಳಾಪುರ** | ೧೦೬೧ | ೧೯೯೬ | ೧೧೩೪ | ೧೧೭೬ | ೧೨೧೬ | ೧೧೭೭ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| **ಚಿಂತಾಮಣಿ** | ೧೨೨೨ | ೧೩೧೩ | ೧೪೦೬ | ೧೪೮೯ | ೧೫೮೧ | ೧೭೭೮ |
| **ಗೌರಿಬಿದನೂರು** | ೧೭೨೧ | ೧೮೩೪ | ೧೮೭೬ | ೧೯೬೧ | ೨೦೮೪ | ೨೧೭೦ |
| **ಗುಡಿಬಂಡೆ** | ೩೮೭ | ೪೦೨ | ೪೧೮ | ೪೨೩ | ೪೩೯ | ೪೮೮ |
| **ಕೋಲಾರ** | ೧೦೩೧ | ೧೧೧೩ | ೧೩೦೪ | ೧೪೩೬ | ೧೫೫೭ | ೧೭೭೩ |
| **ಮಾಲೂರು** | ೧೧೩೪ | ೧೨೦೬ | ೧೨೩೭ | ೧೨೭೧ | ೧೩೨೨ | ೧೯೭೧ |
| **ಮುಳಬಾಗಿಲು** | ೧೦೪೮ | ೧೧೬೯ | ೧೨೫೩ | ೧೩೨೫ | ೧೩೮೮ | ೯೬೧ |
| **ಶಿಡ್ಲಘಟ್ಟ** | ೯೦೪ | ೯೩೬ | ೯೯೭ | ೧೦೪೬ | ೧೦೭೮ | ೧೦೮೧ |
| **ಶ್ರೀನಿವಾಸಪುರ** | ೧೫೮೯ | ೧೫೩೨ | ೧೫೮೭ | ೧೧೫೫ | ೧೭೨೯ | ೧೭೨೫ |
| **ಕೆ.ಜಿ.ಎಫ್** | ೯೪೩ | ೯೫೭ | ೯೬೯ | ೯೮೫ | ೯೯೮ | ೧೧೯೧ |

ಮೂಲ: ಜಿಲ್ಲಾ ಖಜಾನಾಧಿಕಾರಿ, ಕೋಲಾರ

**ವಿಧವಾ ವೇತನ:** ಕೋಲಾರ ಜಿಲ್ಲೆಯಲ್ಲಿ ೧೯೯೮–೯೯ ರಿಂದ ೨೦೦೨–೦೩ನೇ ಸಾಲುಗಳಲ್ಲಿ ವಿತರಣೆ ಮಾಡಿದ ವಿಧವಾ ವೇತನದ ವಿವರಗಳನ್ನು ಕೋಷ್ಟಕ ೧೬.೩೩ರಲ್ಲಿ ಕೊಟ್ಟಿದೆ.

**ಕೋಷ್ಟಕ ೧೬.೩೩**

| ತಾಲ್ಲೂಕಿನ ಹೆಸರು | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ |
|---|---|---|---|---|---|---|
| **ಬಾಗೇಪಲ್ಲಿ** | ೨೦೦೧ | ೨೦೫೨ | ೨೧೧೧ | ೨೧೭೦ | ೨೧೦೨ | ೨೧೯೧ |
| **ಬಂಗಾರಪೇಟೆ** | ೧೬೩೩ | ೧೭೭೫ | ೧೮೭೦ | ೧೯೬೭ | ೨೧೧೯ | ೨೩೧೪ |
| **ಚಿಕ್ಕಬಳ್ಳಾಪುರ** | ೧೭೪೯ | ೧೮೫೧ | ೧೯೫೬ | ೨೦೭೧ | ೨೧೭೧ | ೨೩೦೬ |
| **ಚಿಂತಾಮಣಿ** | ೩೩೧೦ | ೩೫೭೧ | ೩೮೩೯ | ೪೦೯೧ | ೪೨೯೨ | ೪೫೬೮ |
| **ಗೌರಿಬಿದನೂರು** | ೩೦೧೮ | ೩೨೩೩ | ೩೪೦೨ | ೩೬೪೨ | ೩೯೪೭ | ೪೨೧೨ |
| **ಗುಡಿಬಂಡೆ** | ೬೧೭ | ೬೯೧ | ೭೧೧ | ೭೨೧ | ೭೭೩ | ೮೩೩ |
| **ಕೋಲಾರ** | ೧೯೯೨ | ೨೧೫೬ | ೨೭೨೭ | ೩೧೮೯ | ೩೬೭೨ | ೪೨೫೫ |
| **ಮಾಲೂರು** | ೨೫೦೮ | ೨೫೮೮ | ೨೬೫೧ | ೨೭೪೮ | ೨೮೨೯ | ೩೦೨೩ |
| **ಮುಳಬಾಗಿಲು** | ೩೩೮೬ | ೩೪೩೮ | ೩೫೭೯ | ೩೭೧೧ | ೩೮೩೧ | ೩೪೩೭ |
| **ಶಿಡ್ಲಘಟ್ಟ** | ೨೦೦೯ | ೨೧೧೧ | ೨೨೨೩ | ೨೩೨೬ | ೨೪೨೪ | ೨೬೦೩ |
| **ಶ್ರೀನಿವಾಸಪುರ** | ೧೮೦೯ | ೧೯೦೩ | ೨೦೪೪ | ೨೧೭೮ | ೨೨೯೨ | ೨೩೯೩ |
| **ಕೆ.ಜಿ.ಎಫ್** | ೪೬೮೯೩ | ೪೮೨೩ | ೪೯೪೪ | ೫೦೯೭ | ೫೨೦೩ | ೫೦೧೧ |

ಮೂಲ: ಜಿಲ್ಲಾ ಖಜಾನಾಧಿಕಾರಿ, ಕೋಲಾರ

ವಿಧವಾ ವೇತನವನ್ನು ೧೯೪೭ರ ಅಕ್ಟೋಬರ್ ರವರೆಗೆ ನಡೆದ ಮೈಸೂರು ಚಲೋ ಚಳವಳಿಯಲ್ಲಿ ಮತ್ತು ಹೈದರಾಬಾದ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಯೋಧ ಅಥವಾ ಯೋಧರ ವಿಧವೆಯರಿಗೂ ವಿಸ್ತರಿಸಲಾಯಿತು. ಭಾರತ ಸರ್ಕಾರವು ೧೯೭೨ ರಲ್ಲಿ ಸ್ವಾತಂತ್ರ್ಯ ಯೋಧರಿಗೆ ಮಾಸಿಕವಾಗಿ ೨೦೦ ರೂ. ವಿಶ್ರಾಂತಿ ವೇತನ ಕೊಡುವ ಯೋಜನೆ ಜಾರಿಗೆ ತಂದಿತು. ಇದರಲ್ಲಿ ರಾಜ್ಯ ಸರ್ಕಾರ ಕೊಡುವ ೭೫ ರೂ.ಗಳೂ ಸೇರಿರುತ್ತದೆ. ೧೯೮೦ ರಲ್ಲಿ ಭಾರತ ಸರ್ಕಾರ ಸ್ವಾತಂತ್ರ್ಯ ಯೋಧರ ಪಿಂಚಣಿ ಯೋಜನೆಯನ್ನು ಸ್ವತಂತ್ರತಾ ಸೈನಿಕ ಸನ್ಮಾನ ಪಿಂಚಣಿ ಯೋಜನೆಯೆಂದು ಪುನರ್ನಾಮಕರಣ ಮಾಡಿ, ಮಾಸಿಕ ಪಿಂಚಣಿಯನ್ನು ೩೦೦ ರೂ.ಗಳಿಗೆ ಏರಿಸಿತು. ಸ್ವಾತಂತ್ರ್ಯ ಯೋಧರ ವಿಧವೆಯರಿಗೆ ಪಿಂಚಣಿಯನ್ನು ೨೦೦ ರೂ.ಗಳಿಗೆ ಏರಿಸಿತು.

ಸೆಪ್ಟೆಂಬರ್ ೧೯೭೭ರಲ್ಲಿ ೭೩೫೫ ಸ್ವಾತಂತ್ರ್ಯ ಯೋಧರು ರಾಜ್ಯ ಸರ್ಕಾರದ ಪಿಂಚಣಿ ಪಡೆಯುತ್ತಿದ್ದರು. ಇದಕ್ಕಾಗಿ ಸರ್ಕಾರವು ೫೫,೫೩,೭೧೫ ರೂ.ಗಳನ್ನು ಖರ್ಚು ಮಾಡಿದೆ.

## ಪಾನ ನಿರೋಧ

೧೯೪೮ರಲ್ಲಿ ಮೈಸೂರು ಪಾನ ನಿರೋಧ ಅಧಿನಿಯಮವನ್ನು ರಾಜ್ಯದಲ್ಲಿ ಜಾರಿಗೆ ತಂದು, ಜಿಲ್ಲಾ ಕಲೆಕ್ಟರ್‌ಗಳಿಗೆ ಇದರ ಪೂರ್ಣ ಅಧಿಕಾರವನ್ನು ಕೊಡಲಾಗಿತ್ತು. ನಂತರ ೧೯೫೫ ರಲ್ಲಿ ಪೊಲೀಸ್ ಇಲಾಖೆಗೆ ಅದನ್ನು ವರ್ಗಾಯಿಸಲಾಯಿತು. ೧೯೬೦ ರಲ್ಲಿ ಮೈಸೂರು ನಗರ ಹಾಗೂ ಕೆಲವು ಜಿಲ್ಲೆಗಳಲ್ಲಿ ಪಾನ ನಿರೋಧ ಜಾರಿಗೆ ಬಂದಿತು. ರಾಜ್ಯದ ಆದಾಯದಲ್ಲಿ ನಷ್ಟಕ್ಕೆ ಕಾರಣವಾದ ಕಳ್ಳಬಟ್ಟಿ ಸಾರಾಯಿಯ ಉಪಯೋಗವನ್ನು ನಿಯಂತ್ರಿಸಲು ಕರ್ನಾಟಕದ ಪಾನ ನಿರೋಧ ಅಧಿನಿಯಮ ೧೯೬೭ನ್ನು ಜಾರಿಗೆ ತಂದು, ಹಿಂದೆ ಮಾಡಿದ ೧೯೬೧ ರ ಕರ್ನಾಟಕ ಪಾನ ನಿರೋಧ ಅಧಿನಿಯಮ ಸೂಚಿಸಿದ್ದ ಯಾವುದೇ ಸ್ಥಳಗಳಲ್ಲಿ ಪಾನ ನಿರೋಧವನ್ನು ಸಡಿಲಿಸಬಹುದಾದ ಅನುಕೂಲವನ್ನು ಪಡೆಯಲಾಯಿತು. ಇದರ ಪರಿಣಾಮವಾಗಿ ಅಕ್ಟೋಬರ್ ೧೯೬೭ ರಲ್ಲಿ ಕೋಲಾರ, ಮಂಡ್ಯ, ಶಿವಮೊಗ್ಗ, ತುಮಕೂರು ಇವುಗಳನ್ನು ಬಿಟ್ಟು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಾನ ನಿರೋಧವನ್ನು ಸಡಿಲಿಸಲಾಯಿತು. ಹೀಗಿದ್ದರೂ ಕಳ್ಳಬಟ್ಟಿ ಸಾರಾಯಿಯ ತಯಾರಿಕೆ ಹಾಗೂ ಅದರ ವಿತರಣೆ ಮುಂದುವರೆಯುತ್ತಲೇ ಇದೆ. ಇದರಿಂದ ಜನರು ಸಾವಿಗೀಡಾಗುವುದು ಅಥವಾ ಶಾಶ್ವತವಾಗಿ ಕಣ್ಣು ಕಳೆದುಕೊಂಡಿರುವದು ವರದಿಯಾಗಿದೆ. ಕರ್ನಾಟಕ ಸರ್ಕಾರದಿಂದ ೧೯೭೧ ರಲ್ಲಿ ಕರ್ನಾಟಕ ರಾಜ್ಯ ಪಾನ ಸಂಯಮ ಮಂಡಲಿ ರಚಿತವಾಯಿತು. ಈ ಮಂಡಲಿ ಕುಡಿತದ ಚಟದಿಂದ ಉಂಟಾಗುವ ಅನಿಷ್ಟಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿ ಕುಡಿತದಿಂದ ಪಾರಾಗುವ ರೀತಿ – ನೀತಿಗಳನ್ನು ಬೋಧಿಸುವ ಕಾರ್ಯ ಮಾಡುತ್ತಿದೆ. ಕುಡಿತಕ್ಕೆ ಬಲಿಯಾಗುವ ವ್ಯಕ್ತಿಗೆ ಅದರಿಂದ ವಿಮುಖನಾಗಲು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಪರಿಣತರಿಂದ ಸಲಹೆಯನ್ನು ಕೊಡಿಸಲಾಗುತ್ತದೆ. ಗಾಂಧಿ ಸ್ಮಾರಕ ನಿಧಿ, ಮಹಾಬೋಧಿ ಸಮಾಜ ಮುಂತಾದ ಸಂಸ್ಥೆಗಳು ಕುಡಿತದ ಚಟವನ್ನು ಬಿಡುವುದರ ಬಗ್ಗೆ ಭಿತ್ತಿ ಪತ್ರಗಳ ಮೂಲಕ ಜಾಹೀರಾತು ನೀಡಿ ಪ್ರಚಾರ ಮಾಡುತ್ತಿದೆ.

ಒಂದು ಉದಾಹರಣೆಯಾಗಿ ೨೦೦೩ ಡಿಸೆಂಬರ್ ತಿಂಗಳಲ್ಲಿ ಕೋಲಾರ ಜಿಲ್ಲೆಯ ಅಬಕಾರಿ ಇಲಾಖೆ ಕಾನೂನಿಗೆ ವಿರೋಧವಾಗಿ ಮದ್ಯ ಉತ್ಪಾದನೆ, ಮಾರಾಟ ಮತ್ತು ಸಾಗಾಣಿಕೆಯನ್ನು ತಡೆಯಲು ಕೈಗೊಂಡ ಕ್ರಮವನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಿದೆ.

| ವರ್ಷ | ವಾಹನ | ಬಾ.ತ.ಮ. (ಲೀಟರ್) | ಬಿಯರು (ಲೀಟರು) | ರೆಕ್ಟಿಫೈಡ್ ಸ್ಪಿರಿಟ್ (ಲೀಟರ್) | ಸಾರಾಯಿ (ಲೀಟರ್) | ಕಳ್ಳಭಟ್ಟಿ ನಾಶಪಡಿಸಿದ್ದು (ಲೀಟರ್) | ವಾಷ್ (ನಾಶಪಡಿಸಿದ್ದು) |
|---|---|---|---|---|---|---|---|
| ೨೦೦೩ ಡಿಸೆಂಬರ್ | ೦೪ | ೨೩೩ | ೯೫೪೦ | ೬೮೬ | ೨೨೧೦ | ೧೧೯೦ | ೨೭೫೩೨ |

## ಉಚಿತ ಕಾನೂನು ನೆರವು – ಜನತಾ ನ್ಯಾಯಾಲಯ

ಅರ್ಹ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಉಚಿತವಾಗಿ ಕಾನೂನಿನ ನೆರವನ್ನು ಕೊಡುವುದು ಈ ಪ್ರಾಧಿಕಾರದ ಮುಖ್ಯ ಉದ್ದೇಶ. ಇದರಿಂದಾಗಿ ಜನಸಾಮಾನ್ಯರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದಲ್ಲದೆ ಜನತಾ ನ್ಯಾಯಾಲಯ (ಲೋಕ ಅದಾಲತ್) ಗಳನ್ನು ಏರ್ಪಡಿಸಿ, ಅವುಗಳ ಮೂಲಕ ನ್ಯಾಯಾಲಯಗಳಲ್ಲಿ ಅಥವಾ ಇತರ ಕಛೇರಿಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳಲ್ಲಿನ ಉಭಯ ಪಕ್ಷಗಳಲ್ಲಿ ಸಂಧಾನ ಏರ್ಪಡಿಸಿ ಹಗರಣವನ್ನು ಇತ್ಯರ್ಥಗೊಳಿಸಬಹುದು.

ಪ್ರಾಧಿಕಾರ ಕಾನೂನು ಸಲಹೆಯನ್ನು ಉಚಿತವಾಗಿ ಕೊಡುವುದಲ್ಲದೆ, ವ್ಯಕ್ತಿಯ ಪರವಾಗಿ ಪ್ರಾಧಿಕಾರದ ಖರ್ಚಿನಲ್ಲಿ ವಕೀಲರೊಬ್ಬರನ್ನು ನೇಮಕ ಮಾಡಿ ಆ ಸಂಬಂಧವಾಗಿ ಆತನು ಯಾವುದೇ ನ್ಯಾಯಾಲಯದಲ್ಲಿ ಅಥವಾ ಕಛೇರಿಯಲ್ಲಿ ಮಾಡಬೇಕಾದ ಎಲ್ಲಾ ಖರ್ಚನ್ನು ಪ್ರಾಧಿಕಾರದ ವತಿಯಿಂದ ಒದಗಿಸುವುದು ಈ ಪ್ರಾಧಿಕಾರದ ಜವಾಬ್ದಾರಿ. ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆಗಳಲ್ಲಿ ರಕ್ಷಣೆ ಪಡೆದಿರುವವರು ಮತ್ತು ವಾರ್ಷಿಕ ಆದಾಯ ೨೫ ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದವರು ಅಥವಾ ಜಾತಿಯ ವ್ಯಕ್ತಿಗಳು ಉಚಿತ ಕಾನೂನಿನ ಸಹಾಯ ಪಡೆಯಬಹುದು.

ಉಚಿತ ಕಾನೂನು ನೆರವನ್ನು ಅತ್ಯಂತ ಕೆಳಹಂತ ನ್ಯಾಯಾಲಯದಿಂದ ಸರ್ವೋಚ್ಚ ನ್ಯಾಯಾಲಯದ (ಸುಪ್ರೀಂ ಕೋರ್ಟ್)ವರೆಗೆ, ಎಲ್ಲಾ ಹಂತಗಳಲ್ಲೂ ನೀಡಲಾಗುವುದು. ಅರ್ಹ ವ್ಯಕ್ತಿಗಳು ತಾಲೂಕು ಕೇಂದ್ರದಲ್ಲಿನ ತಾಲೂಕು ಕಾನೂನು ಸೇವಾ ಸಮಿತಿ ಅಥವಾ ಜಿಲ್ಲಾ ಕೇಂದ್ರದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತವಾಗಿ ಸಲಹೆಯನ್ನು ಪಡೆಯಬಹುದು. ಇದಕ್ಕಾಗಿ ಜಾತಿ ಅಥವಾ ಆದಾಯ ದೃಢೀಕರಣ ಪತ್ರದ ಅವಶ್ಯಕತೆ ಇರುವುದಿಲ್ಲ.

**ಜನತಾ ನ್ಯಾಯಾಲಯ**

ಕೆಲವು ಸಂದರ್ಭಗಳಲ್ಲಿ ಉಭಯ ಪಕ್ಷಗಳಲ್ಲಿ ರಾಜಿ ಸಂಧಾನವನ್ನು ಏರ್ಪಡಿಸುವ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗಬಹುದು. ಇದಕ್ಕಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲೂಕು ಕಾನೂನು ಸೇವಾ ಸಮಿತಿಯಿಂದ ರಚಿಸಲಾದ ನ್ಯಾಯಾಲಯವಿದೆ. ಇದನ್ನು ಜನತಾ ನ್ಯಾಯಾಲಯ ಅಥವಾ ಲೋಕ ಅದಾಲತ್ ಎನ್ನಲಾಗಿದೆ.

ಪ್ರತಿ ಜನತಾ ನ್ಯಾಯಾಲಯಕ್ಕೆ ಕನಿಷ್ಠ ಇಬ್ಬರು ಸಂಧಾನಕಾರರಿದ್ದು ಅವರಲ್ಲಿ ಒಬ್ಬರು ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಾಧೀಶರಾಗಿರುತ್ತಾರೆ. ಮತ್ತೊಬ್ಬರು ವಕೀಲರು ಅಥವಾ ಸಮಾಜ ಸೇವಾಸಕ್ತರು ಅಥವಾ ಯಾವುದೇ ಕ್ಷೇತ್ರದಲ್ಲಿ ತಜ್ಞರಾದವರು ಇರುತ್ತಾರೆ. ಇವರು ಪ್ರಕರಣಕ್ಕೆ ಸಂಬಂಧಪಟ್ಟ ಎರಡೂ ಪಕ್ಷಗಳ ನಡುವೆ ರಾಜಿ ಸಂಧಾನ ಏರ್ಪಡಿಸಿ ಪ್ರಕರಣವನ್ನು ಇತ್ಯರ್ಥಗೊಳಿಸುತ್ತಾರೆ. ಅಪಘಾತ, ಕ್ರಿಮಿನಲ್ ಮೊಕದ್ದಮೆಗಳನ್ನು ಜನತಾ ನ್ಯಾಯಾಲಯಗಳ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದು. ಇಲ್ಲಿ ನೀಡಿದ ತೀರ್ಪು ಅಂತಿಮವಾದದ್ದು. ಸಿವಿಲ್ ನ್ಯಾಯಾಲಯದಲ್ಲಿ ಅಮಲ್ದಾರಿ ಅರ್ಜಿ (Execution petition) ಸಲ್ಲಿಸುವ ಮೂಲಕ ಜನತಾ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸಬಹುದು. ಸಿವಿಲ್ ನ್ಯಾಯಾಲಯಕ್ಕೆ ಇರುವಂತೆ ಜನತಾ ನ್ಯಾಯಾಲಯಕ್ಕೂ ಸಾಕ್ಷ್ಯ ಪಡೆದುಕೊಳ್ಳಲು ಯಾವುದೇ ಸಾರ್ವಜನಿಕ ಕಛೇರಿ ಅಥವಾ ನ್ಯಾಯಾಲಯದಿಂದ ಸಾರ್ವಜನಿಕ ದಸ್ತಾವೇಜನ್ನು ತರಿಸಿಕೊಳ್ಳುವ ಅಧಿಕಾರವಿದೆ.

ಜನತಾ ನ್ಯಾಯಾಲಯಗಳ ಮೂಲಕ ನ್ಯಾಯವನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ, ಕಡಿಮೆ ಸಮಯದಲ್ಲಿ ಮತ್ತು ಸುಲಭವಾಗಿ ಪಡೆಯಬಹುದು. ಜಿಲ್ಲೆಯಲ್ಲಿ ೨-೧-೧೯೯೮ ರಿಂದ ೨೦-೧-೨೦೦೪ರವರೆಗೆ ಉಚಿತ ಕಾನೂನು ನೆರವು ಪಡೆದ ಫಲಾನುಭವಿಗಳ ಒಟ್ಟು ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೧೬.೩೪**

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಫಲಾನುಭವಿಗಳ ಸಂಖ್ಯೆ |
|---|---|---|
| ೧ | ೨ | ೩ |
| ೧. | ಮುಳಬಾಗಿಲು | ಇಲ್ಲ |
| ೨. | ಮಾಲೂರು | ೩೩ |
| ೩. | ಶ್ರೀನಿವಾಸಪುರ | ೦೪ |
| ೪. | ಕೆ.ಜಿ.ಎಫ್. | ೨೦ |

| ೧ | ೨ | ೩ |
|---|---|---|
| ೫. | ಚಿಕ್ಕಬಳ್ಳಾಪುರ | ೨೫ (೨೦೦೩ ರಲ್ಲಿ) |
| ೬. | ಚಿಂತಾಮಣಿ | ೨೪ |
| ೭. | ಗುಡಿಬಂಡೆ | ೧೨ |
| ೮. | ಬಾಗೇಪಲ್ಲಿ | ಇಲ್ಲ |
| ೯. | ಗೌರೀಬಿದನೂರು | ಇಲ್ಲ |
| ೧೦. | ಶಿಡ್ಲಘಟ್ಟ | ಇಲ್ಲ |

ಮೂಲ: ಕಾನೂನು ಸೇವಾ ಪ್ರಾಧಿಕಾರ, ಕೋಲಾರ

## ಸ್ವಯಂ ಸೇವಾ ಸಂಸ್ಥೆಗಳು

ವಿಶ್ವದ ಪ್ರಖ್ಯಾತ ಸಮಾಜ ಸೇವಾ ಸಂಸ್ಥೆಯಾದ ರೋಟರಿ ಕ್ಲಬ್ಬನ್ನು ಅಮೇರಿಕಾದಲ್ಲಿ ೧೯೦೫ ಫೆಬ್ರವರಿ ೨೩ ರಂದು ಪಾಲ್ ಪಿ. ಹ್ಯಾರಿಸ್ ಎಂಬುವರು ಸ್ಥಾಪಿಸಿದರು. ರೋಟರಿ ಎಂದರೆ ಸದಸ್ಯರ ಪರಿಭ್ರಮಣ ಎಂದರ್ಥ. ಇದನ್ನೇ ಸಂಸ್ಥೆಯ ಹೆಸರನ್ನಾಗಿ ಅಂಗೀಕರಿಸಲಾಯಿತು. ೧೯೧೨ ರಲ್ಲಿ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಆಫ್ ರೋಟರಿ ಕ್ಲಬ್ ಅಸ್ತಿತ್ವಕ್ಕೆ ಬಂತು. ಆ ಬಳಿಕ ಅದನ್ನು ರೋಟರಿ ಇಂಟರ್ ನ್ಯಾಷನಲ್ ಎಂದು ಬದಲಾಯಿಸಿತು.

### ಕೋಲಾರ ರೋಟರಿ ಕ್ಲಬ್

೧೯೬೦ ರಲ್ಲಿ ಕೋಲಾರದಲ್ಲಿ ರೋಟರಿ ಕ್ಲಬ್ ಸ್ಥಾಪನೆಯಾಯಿತು. ಈ ಸಂಸ್ಥೆಯು ಸದಸ್ಯರ ಸೇವೆ, ರಜಾ ಅವಧಿಯ ಸೇವೆ, ಜನಸಮುದಾಯದ ಸೇವೆ ಮತ್ತು ಅಂತರರಾಷ್ಟ್ರೀಯ ಸೇವೆ ಎಂಬ ನಾಲ್ಕು ವಿಧವಾದ ಸೇವಾ ಮಾರ್ಗಗಳ ದೃಷ್ಟಿಯಿಟ್ಟುಕೊಂಡು ಪ್ರಾರಂಭಗೊಂಡಿತು. ಪಾಲ್ ಹ್ಯಾರಿಸ್ ಫೆಲೋಶಿಪ್ ಪಡೆದ ವಿ.ಪಿ.ಸೋಮಶೇಖರ್ ೨೦೦೩-೦೪ ರ ಸಾಲಿನಲ್ಲಿ ಅಧ್ಯಕ್ಷರಾಗಿದ್ದರು. ಜಿಲ್ಲೆಯ ಹಲವಾರು ಕಡೆ ರೋಟರಿ ಕ್ಲಬ್‌ನ ಅಂಗಸಂಸ್ಥೆಗಳಿವೆ. ಮಹಿಳೆಯರ ವಿಭಾಗಗಳಾಗಿ ಕೆಲಸ ಮಾಡುತ್ತಿರುವ ಇನ್ನರ್ ವೀಲ್ ಕ್ಲಬ್‌ಗಳೂ ಇವೆ. ರೋಟರಿ ಕ್ಲಬ್, ರೆಡ್ ಕ್ರಾಸ್, ಲಯನ್ಸ್ ಕ್ಲಬ್‌ಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಂತಾದವುಗಳ ಸಹಯೋಗದೊಂದಿಗೆ ಜಿಲ್ಲೆಯಲ್ಲಿ ಸಮಾಜ ಸೇವೆ ಮಾಡುತ್ತಿವೆ.

ರೋಟರಿ ಕ್ಲಬ್, ರೆಡ್ ಕ್ರಾಸ್ ಸಂಸ್ಥೆಯೊಂದಿಗೆ ಸೇರಿ ರಕ್ತದಾನ ಶಿಬಿರ ಮತ್ತು ಆರೋಗ್ಯವಂತ ಮಕ್ಕಳ ಸ್ಪರ್ಧೆಗಳನ್ನು ನಡೆಸಿತ್ತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಪಲ್ಸ್ ಪೋಲಿಯೋ, ಹೆಪಟೈಟಸ್ ಬಿ.ಲಸಿಕೆ ನೀಡುವ ಶಿಬಿರಗಳನ್ನು ವ್ಯವಸ್ಥೆಗೊಳಿಸಿತ್ತು. ಇದಲ್ಲದೆ ಶುದ್ಧ ಕುಡಿಯುವ ನೀರಿನ ಯೋಜನೆ, ಉಚಿತ ದಂತರೋಗ ಚಿಕಿತ್ಸಾ ಶಿಬಿರ, ರಕ್ತ ಹೀನತೆ ಬಗ್ಗೆ ಉಚಿತ ಶಿಬಿರ, ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರಿನ ಪೂರೈಕೆ ಮುಂತಾದ ಸಮಾಜ ಕಾರ್ಯಗಳನ್ನು ಈ ಸಂಸ್ಥೆ ವ್ಯವಸ್ಥೆಗೊಳಿಸಿತ್ತು. ೨೦೦೧-೦೨ ನೇ ಸಾಲಿನ ವರ್ಷದಲ್ಲಿ ಸಂಚಾರಿ ನಿಯಮಗಳ ಬಗ್ಗೆ ಜನ ಜಾಗೃತಿ ದಿನಾಚರಣೆ, ರಾಷ್ಟ್ರೀಯ ಗ್ರಾಹಕರ ದಿನಾಚರಣೆಗಳನ್ನು ರೋಟರಿ ಕ್ಲಬ್ ಪ್ರಾದೇಶಿಕ ಸಾರಿಗೆ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ, ಶಿಕ್ಷಣ ಇಲಾಖೆ ಮುಂತಾದ ಸಂಘಟನೆಗಳ ಸಹಕಾರದೊಂದಿಗೆ ವ್ಯವಸ್ಥೆಗೊಳಿಸಿದೆ. ೨೦೦೨-೦೩ ನೇ ಸಾಲಿನಲ್ಲಿ ರೆಡ್‌ಕ್ರಾಸ್ ಸಹಯೋಗದೊಂದಿಗೆ ರಕ್ತದಾನ ಶಿಬಿರ, ಪೌಷ್ಟಿಕ ಆಹಾರ ವಿತರಣೆ ಸಂಬಂಧಪಟ್ಟಂತೆ ಸಪ್ತಾಹ, ಪರಿಸರ ಮಾಲಿನ್ಯ ಜನಜಾಗೃತಿ ಕಾರ್ಯಕ್ರಮಗಳನ್ನು ರೋಟರಿ ಕ್ಲಬ್ ನಡೆಸಿತ್ತು. ೨೦೦೩-೦೪ ನೇ ಸಾಲಿನಲ್ಲಿ ಉಚಿತ ಕಣ್ಣು ಪೊರೆ ಚಿಕಿತ್ಸೆಯನ್ನು ಚಿರಂಜೀವಿ ಸಮಿತಿ, ಅಂತರಗಂಗೋತ್ರಿ, ಕುಷ್ಠರೋಗ ನಿವಾರಣಾ ಸಮಿತಿ, ಜಿಲ್ಲಾ ಪಂಚಾಯಿತಿಗಳ ಸಹಕಾರದೊಂದಿಗೆ ರೋಟರಿ ಕ್ಲಬ್ ನೇತೃತ್ವದಲ್ಲಿ ವ್ಯವಸ್ಥೆಗೊಳಿಸಿತ್ತು.

ಕ್ಷೇಮಾಭಿವೃದ್ಧಿ ಸಂಘದ ಮನವಿ ಮೇರೆಗೆ ಸರ್ವ ಯತ್ನಗಳನ್ನು ಮಾಡಿ ಅಂಗವಿಕಲರ ತಪಾಸಣಾ ಶಿಬಿರಗಳನ್ನು ನಡೆಸಿ ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ವಿತರಿಸಲು ಸಹಾಯ ನೀಡಿದೆ. ಕೃತಕ ಕಾಲುಗಳು, ಕ್ಯಾಲಿಫರ್‌ಗಳು, ತ್ರಿಚಕ್ರ ವಾಹನಗಳು, ಶ್ರವಣ ಸಾಧನ ಮುಂತಾದವುಗಳನ್ನು ಉಚಿತವಾಗಿ ಕೊಡಲಾಯಿತು. ಇವುಗಳ ಒಟ್ಟು ಖರ್ಚು ೮,೪೬,೦೦೦-೦೦ ರೂ.ಗಳಾಗಿರುತ್ತದೆ. ಈ ಶಿಬಿರ ಯಶಸ್ವಿಯಾಗಿ ನಡೆಯಲು ಸರ್ಕಾರದ ಹಲವಾರು ಇಲಾಖೆಗಳು, ರೋಟರಿ ಕೋಲಾರ, ರೋಟರಿ ಮಹಾವೀರ ಕೃತಕಾಂಗಗಳ ಜೋಡಣಾ ಕೇಂದ್ರ, ಮೈಸೂರು ಇದಲ್ಲದೆ ಹಲವಾರು ದಾನಿಗಳೂ ಈ ಕಾರ್ಯದಲ್ಲಿ ಸಹಕರಿಸಿದರು.

**ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಮತ್ತು ಇತರ ಸಮಾಜ ಸೇವಾ ಸಂಸ್ಥೆಗಳು:** ದಿನಾಂಕ ೧-೧೦-೨೦೦೩ ರಂದು ರಾಷ್ಟ್ರೀಯ ರಕ್ತದಾನ ದಿನಾಚರಣೆಯನ್ನು ಆಚರಿಸಲಾಯಿತು. ರೆಡ್ ಕ್ರಾಸ್ ಸಂಸ್ಥೆ ರಕ್ತದಾನ ಮತ್ತು ರಕ್ತ ಸಂಗ್ರಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು ಜಿಲ್ಲೆಯ ಮುಖ್ಯ ಕೇಂದ್ರದಲ್ಲಿರುವ ವಿವಿಧ ಪ್ರೌಢ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಬೃಹತ್ ಪ್ರಮಾಣದ ಜಾತಾ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. ಜಾತಾ ಕಾರ್ಯಕ್ರಮವು ನರಸಿಂಹ ರಾಜ ಆಸ್ಪತ್ರೆಯಿಂದ ಪ್ರಾರಂಭವಾಗಿ ನಗರದ ರೋಟರಿ ಭವನದಲ್ಲಿ ಮುಕ್ತಾಯವಾಯಿತು.

ಜಿಲ್ಲಾ ಕೇಂದ್ರದಲ್ಲಿರುವ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ವಾಸವಿ ಸಂಸ್ಥೆ, ವಿಶ್ವಮಾನವ ಸಂಸ್ಥೆ, ಸರ್ವೋದಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ನೆಹರು ಯುವ ಕೇಂದ್ರ, ಭಾರತ ಸೇವಾದಳ ಸಂಸ್ಥೆ ಮುಂತಾದ ಸಂಸ್ಥೆಗಳು ಪ್ರತೀ ವರ್ಷವೂ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಕ್ತ ಸಂಗ್ರಹಣೆಗೆ ಅನುವು ಮಾಡಿಕೊಡುವ ಸಂಪ್ರದಾಯವಿದೆ.

**ಜಿಲ್ಲಾ ನೆಹರು ಯುವ ಕೇಂದ್ರ:** ೧೯೭೨ ರಲ್ಲಿ ಭಾರತ ಸ್ವಾತಂತ್ರ್ಯದ ರಜತ ಮಹೋತ್ಸವದ ದಿನ ನೆಹರು ಯುವ ಕೇಂದ್ರ ಪರಿಕಲ್ಪನೆಯು ಸಾಕಾರಗೊಂಡಿತು. ೧೯೮೧ ರಲ್ಲಿ ಯುವ ಕಾರ್ಯ ಮತ್ತು ಕ್ರೀಡಾ ಇಲಾಖೆ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಅಂಗವಾಗಿ ಬೆಳೆದು ನಿಂತಿತು. ಈ ಸಂಘಟನೆಯ ಉದ್ದೇಶ ಯುವಕರನ್ನು ಸಂಘಟಿಸಿ ಭಾರತವನ್ನು ಶಕ್ತಿಯುತ ರಾಷ್ಟ್ರವನ್ನಾಗಿ ಬೆಳೆಸುವುದು ಮತ್ತು ವ್ಯಕ್ತಿಗತ ಮೌಲ್ಯ ಮತ್ತು ಪ್ರತಿಭೆಗಳು ವೃದ್ಧಿಯಾಗುವಂತೆ ಮಾಡಿ ರಾಷ್ಟ್ರದ ಸತ್ಪ್ರಜೆಗಳನ್ನಾಗಿ ಮಾಡುವುದು. ಭಾರತ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು ಜಿಲ್ಲಾ ಯುವಜನ ಸಮನ್ವಯಾಧಿಕಾರಿಗಳ ಆಡಳಿತದಲ್ಲಿ ನೆಹರು ಯುವ ಕೇಂದ್ರ ಮತ್ತು ಕ್ರೀಡಾ ಇಲಾಖೆ ಕೋಲಾರದಲ್ಲಿ ಕೆಲಸ ಮಾಡುತ್ತಿದೆ. ಸದ್ಯದಲ್ಲಿ ರಾಷ್ಟ್ರಾದ್ಯಂತ ಈ ಬಗೆಯ ೫೦೦ ಯುವ ಕೇಂದ್ರಗಳಿವೆ.

ಯುವ ಸಂಘಟನೆ ಮತ್ತು ಅಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ಯುವಯಾತ್ರೆ ಹಾಗೂ ಅಂತರರಾಷ್ಟ್ರೀಯ ಸ್ವಯಂ ಸೇವಕರ ದಿನಾಚರಣೆ ಮುಂತಾದ ಚಟುವಟಿಕೆಗಳನ್ನು ಈ ಯುವ ಸಂಘ ಹಮ್ಮಿಕೊಳ್ಳುವುದು.

**ಜೈನ್ ಯುವಕ್ ಮಂಡಲ್ - ಕೆ.ಜಿ.ಎಫ್**. ಈ ಸಂಘವನ್ನು ಸಮಾಜ ಸೇವೆ ಮಾಡುವ ಉದ್ದೇಶದಿಂದಲೇ ೧೯೬೪ರಲ್ಲಿ ಸ್ಥಾಪಿಸಲಾಯಿತು. ರಕ್ತದಾನ ಶಿಬಿರ, ಗ್ರಾಮಾಂತರಗಳಲ್ಲಿ ಉಚಿತ ಆರೋಗ್ಯ ತಪಾಸಣೆಯೇ ಮುಂತಾದವುಗಳನ್ನು ಅಂದಿನಿಂದಲೂ ಈ ಸಂಘವು ನಿರಂತರವಾಗಿ ಮಾಡಿಕೊಂಡುಬರುತ್ತಿದೆ. ಭಾರತದಲ್ಲಿಯೇ ಪ್ರಥಮವಾದದ್ದು ಎಂದು ಹೆಗ್ಗಳಿಕೆ ಪಡೆದ ಮೂಲವ್ಯಾಧಿ ಉಚಿತ ಶಿಬಿರವನ್ನು ಸಂಘವು ನಡೆಸಿತು. ನಾಲ್ಕು ದಿವಸಗಳ ಈ ಶಿಬಿರಕ್ಕೆ ಮೂರು ಸಾವಿರ ರೋಗಿಗಳಿಗೆ ತಪಾಸಣೆ ಮಾಡಲಾಯಿತು. ಅವರಲ್ಲಿ ೧,೨೦೦ ರೋಗಿಗಳು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರು. ಇದೇ ಬಗೆಯ ಶಿಬಿರಗಳು ೧೯೮೬ ಮತ್ತು ೧೯೮೭ ರಲ್ಲಿ ಪುನರಾವರ್ತನೆಯಾಯಿತು.

ಶತಮಾನಗಳಿಂದ ನಡೆದು ಬರುತ್ತಿದ್ದ ಕೆ.ಜಿ.ಎಫ್. ನ ಬಂಗಾರ ಗಣಿಯ ಕಾಮಗಾರಿ ಇಂದು ನಿಂತು ಹೋಗಿ ನೂರಾರು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಹೀಗೆ ನರಳುತ್ತಿರುವವರ ನೆರವಿಗೆ, ಸಂಘವು ಮುಂದೆ ಬಂದು ಆ ಕುಟುಂಬಗಳಿಗೆ ತಿಂಗಳಿಗೆ ೧೦ ಕೆಜಿಯಂತೆ ಪ್ರತೀ ಕುಟುಂಬಕ್ಕೆ ಅಕ್ಕಿಯನ್ನು ಉಚಿತವಾಗಿ ಒದಗಿಸುತ್ತಿದೆ. ೧೯೮೯ರಲ್ಲಿ

ಕೆ.ಜಿ.ಎಫ್.ನಲ್ಲಿ ಕುಡಿಯುವ ನೀರನ್ನು ನಿರಂತರವಾಗಿ ಜನರಿಗೆ ಒದಗಿಸುವ ಯೋಜನೆಯೊಂದಕ್ಕೆ ಸಂಘವು ಉದ್ಘಾಟನೆ ಮಾಡಿತ್ತು. ಅದಕ್ಕೆ ಅಂದಿನ ಭಾರತದ ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ. ಜತ್ತಿಯವರು ಚಾಲನೆಯನ್ನು ಕೊಟ್ಟಿದ್ದರು. ಬೆಂಗಳೂರಿನ ರಾಜಸ್ಥಾನ್ ಯೂತ್ ಅಸೋಸಿಯೇಷನ್ ಸಹಯೋಗದೊಂದಿಗೆ ಸಂಘವು ಪ್ರತೀ ವರ್ಷವು, ಕೋಲಾರದ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಾಂಗ ಮಾಡುವ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ಹಂಚಲಾಗಿದೆ. ಅಂಗವಿಕಲರಿಬ್ಬರಿಗೆ ಟೆಲಿಫೋನ್ ಭೂತಗಳನ್ನು ಸಂಘದಿಂದ ವ್ಯವಸ್ಥೆ ಮಾಡಿಕೊಡಲಾಗಿದೆ. ೧೯೯೪ ರಲ್ಲಿ ಜೈನ್ ಯುವಕ ಸಂಘವು ಕೆ.ಜಿ.ಎಫ್. ನಲ್ಲಿರುವ ರಿಮ್ಯಾಂಡ್ ಹೋಂ ಮಕ್ಕಳಿಗಾಗಿ ಬಣ್ಣದ ಟಿ.ವಿ.ಯನ್ನು ದಾನ ಮಾಡಿದೆ. ಅಲ್ಲದೆ ಮಕ್ಕಳಿಗೆ ಆಗಾಗ್ಗೆ ಹಣ್ಣು, ಸಿಹಿತಿಂಡಿ, ಪುಸ್ತಕ, ಬಟ್ಟೆಗಳನ್ನು ನೀಡುವ ಪರಿಪಾಠವನ್ನು ಇಟ್ಟುಕೊಂಡಿದೆ.

ಪ್ರತಿವರ್ಷವು ಸಂಘ ಉಚಿತ ನೇತ್ರ ತಪಾಸಣಾ ಶಿಬಿರವನ್ನು ನಡೆಸುತ್ತಿದೆ. ಅಂಗವಿಕಲರಿಗೆ ಮತ್ತು ಕುಷ್ಟರೋಗಿಗಳಿಗೆ ವಸತಿ ಒದಗಿಸಿರುವ ರಮಣ ಮಹರ್ಷಿ ಆಶ್ರಮಕ್ಕೆ ಮಂಚ, ಹಾಸಿಗೆ, ಫ್ಯಾನ್, ಪಾತ್ರೆ ಪಡಗಗಳನ್ನು ಒದಗಿಸಿಕೊಟ್ಟಿದೆ. ಕಾರ್ಗಿಲ್ ಯುದ್ಧದ ಸಮಯದಲ್ಲಿ ನೊಂದ ಸೈನಿಕ ಕುಟುಂಬಕ್ಕೆಂದು ಸಂಘವು ೧ ಲಕ್ಷರೂಗಳ ದೇಣಿಗೆ ನೀಡಿತ್ತು. ಜೈನ್ ಯುವಕ ಮಂಡಲ್ ಮಾಡುತ್ತಿರುವ ಸಮಾಜ ಸೇವೆ ನಿರಂತರವಾಗಿ ನಡೆದಿದ್ದು ಮತ್ತಷ್ಟು ಹೆಚ್ಚಿನ ಸೇವೆಯನ್ನು ಮಾಡುವ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ.